# ಅನುದಿನದ ಆಹಾರ

December 2018



Tree - 19
Fruit - 12
Pages - 44
Monthly

Annual Subscription Rs. 100/-
Single Copy Rs. 10/-

# ಸಹೋ॥ ಜೆ. ಸ್ಯಾಮ್ ಜೆಬದುರೈ

## ನಿತ್ಯರಾಜ್ಯದೊಳಗೆ ಪ್ರವೇಶ ಮಾಡಿದ್ದಾರೆ



ಜನನ : 30 – 01 – 1948

ಮರಣ : 31 – 10 – 2018



# ಅನುದಿನದ ಆಹಾರ
# ANUDHINADA AHARA

ಡಿಸೆಂಬರ್ 2018 DECEMBER

ಮರ 19 ಹಣ್ಣು 12 Tree 19 Fruit 12


## ನಿಮಗೆ ಸಿಂಹಾಸನ!

"ನಾನು ಜಯಹೊಂದಿ ನನ್ನ ತಂದೆಯೊಡನೆ ಸಿಂಹಾಸನದಲ್ಲಿ ಕೂತುಕೊಂಡೆನು; ಹಾಗೆಯೇ ಜಯ ಹೊಂದುವವನನ್ನು ನನ್ನೊಡನೆ ಸಿಂಹಾಸನದಲ್ಲಿ ಕೂತುಕೊಳ್ಳುವಂತೆ ಮಾಡುವೆನು" (ಪ್ರಕ.3:21).

ನೀವೂ, ವಿಶ್ವಾಸಿಗಳೂ, ಪ್ರತಿಯೊಂದು ಸಭೆಗಳೂ ಜಯ ಹೊಂದಬೇಕೆಂದು ಪವಿತ್ರಾತ್ಮನು ಬಯಸುತ್ತಾನೆ. ಅದಕ್ಕಾಗಿ ಆತನು ತೀವ್ರವಾಗಿ ಕಾರ್ಯನಡಿಸುತ್ತಿದ್ದಾನೆ. ಏಕೆಂದರೆ ಜಯಹೊಂದುವವನು ಮಾತ್ರವೇ ದೇವರೊಡನೆ ಸಿಂಹಾಸನದಲ್ಲಿ ಕೂತುಕೊಳ್ಳಲು ಸಾಧ್ಯ. ಈಗ ನೀವು ಕೂತುಕೊಳ್ಳಲಿರುವ ಪರಲೋಕದ ಸಿಂಹಾಸನವನ್ನು ದೃಷ್ಟಿಸಿ ನೋಡಿರಿ. ಸರ್ವಲೋಕದ ಆಳ್ವಿಕೆಯ ಪೀಠವದು. ಅದು ಪರಲೋಕದ ನೂತನ ಯೆರೂಸಲೇಮಿನಲ್ಲಿದೆ. ಅದು ದೊಡ್ಡ ಸಿಂಹಾಸನ. ಒಂದು ಕಡೆ ತಂದೆಯಾದ ದೇವರಿದ್ದಾನೆ. ಆತನ ಪಕ್ಕದಲ್ಲಿ ಜಯಹೊಂದಿದವನಾಗಿ, ಯೇಸುಕ್ರಿಸ್ತನು ಕೂತಿದ್ದಾನೆ. ನೀವು, ಲೋಕ, ಶರೀರ, ಪಿಶಾಚಿಯನ್ನು ಜಯಿಸಿದವರಾಗಿ ಬೆಳಗುವಾಗ ನೀವು ಕೂತುಕೊಳ್ಳುವದಕ್ಕೆ ಅದೇ ತಂದೆಯ ಸಿಂಹಾಸನದಲ್ಲಿ ಕುಮಾರನ ಬಲಪಾರ್ಶ್ವದಲ್ಲಿ ನಿಮಗೊಂದು ಸ್ಥಳವನ್ನು ಆತನು ರಿಸರ್ವ್ ಮಾಡಿರುವನು.

ಸಿಂಹಾಸನ ಎಂದರೇನು? ಸಿಂಹ + ಆಸನ=ಸಿಂಹಾಸನ ಎಂದರ್ಥ. ಸಿಂಹದ ಹಾಗೆ ಧೈರ್ಯವುಳ್ಳವರು ಸಿಂಹದ ಹಾಗೆ ಯಾವುದಕ್ಕೂ ಹೆದರದೆ ಯುದ್ಧ ಮಾಡುವವರು. ಜಯಹೊಂದಿದವರಾಗಿ, ಕರ್ತನ ಸಿಂಹಾಸನದಲ್ಲಿ ಕೂತುಕೊಳ್ಳುವರು. ಲೋಕದಲ್ಲಿ ಅನೇಕ ಸಿಂಹಾಸನಗಳುಂಟು, ಅರಸರುಂಟು. ಚಕ್ರವರ್ತಿಗಳುಂಟು. ಸರ್ವಾಧಿಕಾರಿಗಳುಂಟು. ಹಲವಾರು ವರ್ಷಗಳಿಂದ ಇಂಗ್ಲೆಂಡಿನಲ್ಲಿ, "ಸಿಂಹಾಸನ" ಸತತವಾಗಿ ಇರುತ್ತಲೇ ಇದೆ. ಅವರು ಯೋಸೇಫನ ವಂಶಸ್ಥರು. "ಸಿಂಹಾಸನದ ಮೇಲೆ ಕೂತಿದ್ದವನು– ಇಗೋ, ಎಲ್ಲವನ್ನು ಹೊಸದು ಮಾಡುತ್ತೇನೆ" ಅಂದನು (ಪ್ರಕ21:5). ಇಂದು ಕರ್ತನ ಪ್ರಾಮುಖ್ಯವಾದ ನಾಲ್ಕು ಸಿಂಹಾಸನಗಳನ್ನು ಕುರಿತು ಸ್ವಲ್ಪ ಧ್ಯಾನಿಸೋಣ!

## 1. ಪರಿಶುದ್ಧ ಸಿಂಹಾಸನ :

"ದೇವರು ತನ್ನ ಪರಿಶುದ್ಧ ಸಿಂಹಾಸನದಲ್ಲಿ ಕೂತಿದ್ದಾನೆ" (ಕೀರ್ತ.47:8). ಪರಲೋಕವು ಸಂಪೂರ್ಣವಾಗಿ ದೈವೀಕ ಪರಿಶುದ್ಧತೆಯಿಂದ ತುಂಬಿದೆ. ತಂದೆ, ಮಗ, ಪವಿತ್ರಾತ್ಮ ಇವರು ಪರಿಶುದ್ಧರು. ಕೆರೂಬಿಯರು, ಸೆರಾಫಿಯರು, ದೇವದೂತರೆಲ್ಲರೂ ಪರಿಶುದ್ಧವಾದವರು. ಪರಿಶುದ್ಧತೆಗೆ ಗುರುತಾಗಿ, ಕರ್ತಾದಿ ಕರ್ತನ ಬಳಿ ಸಿಂಹಾಸನದ ಮೇಲೆ ಕೂತಿದ್ದಾನೆ (ಪ್ರಕ.20:11). "ಬಿಳುಪು" ಎಂಬುದು ಪರಿಶುದ್ಧತೆಯ ಗುರುತಾಗಿದೆ. "ಅದರಲ್ಲಿ ಹೊಲೆಯಾದದ್ದೊಂದೂ ಸೇರುವದಿಲ್ಲ. ಅಸಹ್ಯವಾದದ್ದನ್ನೂ, ಸುಳ್ಳಾದದ್ದನ್ನೂ ನಡಿಸುವವನು ಸೇರುವದಿಲ್ಲ" (ಪ್ರಕ.21:27). ಜೀವಬಾಧ್ಯರ ಪಟ್ಟಿಯಲ್ಲಿ ಹೆಸರು ಬರೆಯಲ್ಪಟ್ಟು, ಪರಿಶುದ್ಧವಾಗಿ ಜೀವಿಸುವವರು ಮಾತ್ರವೇ ಕರ್ತನ ಸನ್ನಿಧಾನದಲ್ಲಿ ಪ್ರವೇಶಿಸುವರು. ಶರೀರಕ್ಕೆ ಶುದ್ಧತೆ! ಪ್ರಾಣ, ಆತ್ಮಕ್ಕೆ ಪರಿಶುದ್ಧತೆ! 'ಪರಿಶುದ್ಧತೆ"ಎಂಬ ಪದಕ್ಕೆ, "ಪ್ರತ್ಯೇಕ ಜೀವಿತ"ಎಂಬುದು ಅರ್ಥವಾಗಿದೆ. ಲೋಕ, ಶರೀರ, ಪಿಶಾಚಿಯಿಂದ ಪ್ರತ್ಯೇಕವಾಗಿ ಜೀವಿಸುವವರೇ ಪರಿಶುದ್ಧವಾದವರು. "ಯೇಸುವಿನ ರಕ್ತವು ಸಕಲ ಪಾಪವನ್ನು ನಿವಾರಣ ಮಾಡಿ, ನಮ್ಮನ್ನು ಶುದ್ಧಿಮಾಡುತ್ತದೆ" (1 ಯೋಹಾ.1:7). ಅನುದಿನವೂ ನಿಮ್ಮನ್ನು ಪರಿಶೀಲಿಸಿ ನೋಡಿ, ಕ್ರಿಸ್ತನ ರಕ್ತದ ಮುಖಾಂತರ, ದೇವರು ಕೊಟ್ಟಿರುವ ಸತ್ಯವೇದ ವಾಕ್ಯಗಳ ಮೂಲಕ ನಿಮ್ಮಿಂದ ಪರಿಶುದ್ಧವಾಗಿ ಜೀವಿಸಲು ಸಾಧ್ಯ. ಅದಕ್ಕಾಗಿಯೇ ಸಭೆ ಕೂಡಿ ಬರುವದನ್ನು ಏರ್ಪಡಿಸಿದ್ದಾನೆ. ಪ್ರಾರ್ಥನಾತ್ಮವನ್ನು ಸುರಿಸಿದ್ದಾನೆ. ಪವಿತ್ರ ಮಾರ್ಗದಲ್ಲಿ ನಿಮ್ಮನ್ನು ಕೊಂಡೊಯ್ಯಲು ಪವಿತ್ರಾತ್ಮನನ್ನೂ ಅನುಗ್ರಹಿಸಿದ್ದಾನೆ.

## 2. ಮಹಿಮೆಯುಳ್ಳ ಸಿಂಹಾಸನ :

"ನಮ್ಮ ಪವಿತ್ರಾಲಯ ಸ್ಥಾನವು ಆದಿಯಿಂದಲೂ, ಉನ್ನತವಾದ ಮಹಿಮೆಯ ಸಿಂಹಾಸನವಾಗಿದೆ" (ಯೆರೆ.17:12).

ಮಕ್ಕಳಿಲ್ಲದ ಹನ್ನಳಿಗೆ ಕರ್ತನು ಪ್ರವಾದಿಯಾದ ಸಮುವೇಲನನ್ನು ಮಗನಾಗಿ ಕೊಟ್ಟಾಗ, ಅವಳು ಕೃತಜ್ಞತೆಯುಳ್ಳ ಹೃದಯದೊಂದಿಗೆ ಪ್ರಾರ್ಥನೆಯಾಗಿ ಇಂತೆಂದಳು. "ಆತನು ದೀನನನ್ನು ಧೂಳಿಯಿಂದ ಎತ್ತಿ, ದರಿದ್ರನನ್ನು ತಿಪ್ಪೆಯಿಂದ ಎಬ್ಬಿಸಿ, ಪ್ರಭುಗಳೊಂದಿಗೆ ಕುಳ್ಳಿರಿಸಿ ಅವನಿಗೆ ಮಹಿಮಾಸನವನ್ನು ಬಾಧ್ಯತೆಯಾಗಿ ಅನುಗ್ರಹಿಸುವವನಾಗಿದ್ದಾನೆ" (1ಸಮು.2:8).

ಮಹಿಮೆಯಾದ ಸಿಂಹಾಸನವನ್ನು ನೀವು ಬಾಧ್ಯತೆಯಾಗಿ ಪಡೆಯಲು, ಜಯಹೊಂದಿದವರಾಗಿ ಬೆಳಗಬೇಕು. ಲೋಕವನ್ನೂ, ಶರೀರವನ್ನೂ, ಪಿಶಾಚಿಯನ್ನೂ, ಕಣ್ಣಿನಾಶೆಗಳನ್ನೂ, ಶರೀರದಾಶೆಗಳನ್ನೂ, ಬದುಕು ಬಾಳಿನ ಡಂಬವನ್ನೂ ಜಯಿಸಬೇಕು. ಜಯಹೊಂದುವ ವಿಷಯದಲ್ಲಿ ಯೇಸುಕ್ರಿಸ್ತನೇ ಒಂದು ಒಳ್ಳೆಯ ಮಾದರಿಯಾಗಿದ್ದಾನೆ. "ನೀವು ತನ್ನ ಹೆಜ್ಜೆಯ ಜಾಡಿನಲ್ಲಿ ನಡೆಯಬೇಕೆಂದು ಮಾದರಿಯನ್ನು ತೋರಿಸಿ ಹೋದನು" (1ಪೇತ್ರ.2:21). ಆ ಯೇಸುಕ್ರಿಸ್ತನನ್ನು ಗಮನಿಸಿರಿ, ಮಾತ್ರವಲ್ಲ ಅಪೊ. ಪೌಲನು ನಿಮಗೆ

ಒಂದು ಒಳ್ಳೆಯ ಆಲೋಚನೆಯನ್ನು ನೀಡುತ್ತಾನೆ. "ನೀವು ಕ್ರಿಸ್ತನೊಂದಿಗೆ ಎಬ್ಬಿಸಲ್ಪಟ್ಟಿರುವದರಿಂದ, ಮೇಲಿರುವವುಗಳನ್ನು ಹುಡುಕಿರಿ; ಅಲ್ಲಿ ಕ್ರಿಸ್ತನು ದೇವರ ಬಲಗಡೆಯಲ್ಲಿ ಆಸನಾರೂಢನಾಗಿದ್ದಾನೆ" (ಕೊಲೊ.3:1). ಆತನ ದೃಷ್ಟಿ ನಿಮ್ಮ ದೃಷ್ಟಿಯಾಗಲಿ, ಆತನ ಯೋಚನೆಗಳು ನಿಮ್ಮ ಯೋಚನೆಗಳಾಗಲಿ!

## 3. ಕೃಪೆಯುಳ್ಳ ಸಿಂಹಾಸನ :

"ಆದದರಿಂದ ನಾವು ಕರುಣೆಯನ್ನು ಹೊಂದುವಂತೆಯೂ, ಆತನ ದಯೆಯಿಂದ ಸಮಯೋಚಿತವಾದ ಸಹಾಯವು ನಮಗೆ ದೊರೆಯುವಂತೆಯೂ, ಧೈರ್ಯದಿಂದ ಕೃಪಾಸನದ ಮುಂದೆ ಬರೋಣ." (ಇಬ್ರಿ.4:16).

ಸಿಂಹಾಸನವು ಹೇಗೆ ಸ್ಥಾಪಿತವಾಗುತ್ತದೆ? ಒಬ್ಬ ಮನುಷ್ಯನ ಕಠಿಣವಾದ ದುಡಿತದಿಂದಲ್ಲ, ಬೋಧಕನಾಗಿ ಜೀವಿಸಿದ್ದರಿಂದಲ್ಲ. "ಕೃಪೆಯಿಂದಲೇ" ಸಿಂಹಾಸನವು ಸ್ಥಾಪಿತವಾಗುವದು (ಯೆಶಾ.16:5). ಆ ಪರಲೋಕದ ಸಿಂಹಾಸನದಲ್ಲಿ ಕೂತಿರುವಾಗ, ನಮ್ಮ ಹೃದಯವು ಎಷ್ಟೊಂದು ಆನಂದಿಸುವದು! ಕರ್ತನು ನಮಗೆ ತೋರಿಸಿದ ಕೃಪೆ, ದಯೆ, ಕರುಣೆಯನ್ನು ನೆನಸಿ, ನೆನಸಿ ಕರ್ತನನ್ನು ಸ್ತುತಿಸುತ್ತಲೇ ಇರಬೇಕು. ಭೂಮಿಯಲ್ಲಿ ಕರ್ತನು ಮಾಡಿದ ಉಪಕಾರಗಳೂ, ಕರುಣೆಯೂ ಮಹಾದೊಡ್ಡದು. ಎಲ್ಲದ್ದಕ್ಕಾಗಿಯೂ ಸ್ತುತಿಸಲು ನಮ್ಮ ಬಾಯಿ ಸಾಕಾಗುವುದಿಲ್ಲ. ಹಾಗಾದರೆ, ಪರಲೋಕದ ಸಿಂಹಾಸನವನ್ನು ಹೊಂದಲು, ನಾವು ಎಷ್ಟು ಸ್ತುತಿಸಬೇಕು!

## 4. ಅಗ್ನಿಜ್ವಾಲೆಯಾದ ಸಿಂಹಾಸನ :

"ಆತನ ನ್ಯಾಯಾಸನವು ಅಗ್ನಿಜ್ವಾಲೆಗಳು, ಅದರ ಚಕ್ರಗಳು ಧಗಧಗಿಸುವ ಬೆಂಕಿಯೇ ನ್ಯಾಯಾಸನದ ಮುಂದೆ ಉರಿಯ ಪ್ರವಾಹವು ಉಕ್ಕಿ ಹರಿದು ಬಂತು." (ದಾನಿ.7:9,10).

ಅಗ್ನಿ ಅಭಿಷೇಕದಿಂದ ತುಂಬಿದ ಒಬ್ಬ ಮನುಷ್ಯನು ಸೈತಾನನ ಶೋಧನೆಗಳನ್ನು ದಹಿಸಿ ಜಯಿಸುವನು. ಅಗ್ನಿಜ್ವಾಲೆಯಾಗಿ ದೇಶವೆಲ್ಲಾ ಹೋಗಿ, ಕರ್ತನಿಗೆ ಸಾಕ್ಷಿಯಾಗಿ ನಿಲ್ಲುವಾಗ, ಯಾವ ಮನುಷ್ಯರೂ, ಯಾವ ಮಂತ್ರ ತಂತ್ರಗಳೂ ಎದುರಿಸಿ ನಿಲ್ಲಲು ಸಾಧ್ಯವಿಲ್ಲ. ಅವನಿಗಾಗಿ ಪರಲೋಕದಲ್ಲಿ ಅಗ್ನಿಜ್ವಾಲೆಯಾದ ಸಿಂಹಾಸನವು ಕಾದಿದೆ. ಪ್ರವಾದಿಯಾದ ಎಲೀಯನು, ತನ್ನನ್ನು ಭಕ್ತಿ ವೈರಾಗ್ಯದಿಂದಲೂ, ಅಭಿಷೇಕದಿಂದಲೂ ತುಂಬಿಕೊಂಡ ಒಬ್ಬ ದೇವಮನುಷ್ಯನಾಗಿದ್ದನು. ಎರಡನೆಯ ಬರೋಣದಲ್ಲಿ ಮರಣವನ್ನು ನೋಡದೆ ಜೀವ ಸಹಿತ ಒಯ್ಯಲ್ಪಡುವದಕ್ಕೆ ಮುನ್ಸೂಚನೆಯಾದನು. ಅವನನ್ನು ಆಹ್ವಾನಿಸಲು ಪರಲೋಕದಿಂದ ಅಗ್ನಿಮಯವಾದ ರಥಗಳೂ, ಕುದುರೆಗಳೂ ಇಳಿದು ಬಂದವು. ಅವನೊಳಗೆ ಉರಿಯುತ್ತಿದ್ದ ಪವಿತ್ರಾತ್ಮನ ಅಗ್ನಿಯು ಅಧಿಕವಾಗಿದ್ದದ್ದರಿಂದ, ಅಲ್ಲಿ ಬಂದಂಥ ಅಗ್ನಿಯ ರಥವನ್ನು ನೋಡಿ ಅವನು ಹೆದರಲಿಲ್ಲ. ಅದರಲ್ಲಿ ಹತ್ತಿ ಪರಲೋಕಕ್ಕೆ ಕೊಂಡೊಯ್ಯಲ್ಪಟ್ಟನು. ಆಮೆನ್!

# ಬೇತ್ಲೆಹೇಮಿಗೆ ಬನ್ನಿರಿ

? ಬೇತ್ಲೆಹೇಮ್ ಒಂದು ಚಿಕ್ಕ ಊರು. ಆದರೆ ಯೇಸುಕ್ರಿಸ್ತನ ಜನನದಿಂದ, ಆ ಊರು ಲೋಕ ಪ್ರಸಿದ್ಧಿಯಾಯಿತು. ನಾವು ಎಷ್ಟೇ ಹೀನರಾಗಿದ್ದರೂ ಯೇಸುಕ್ರಿಸ್ತನನ್ನು ಸ್ವೀಕರಿಸುವಾಗ, ಆತನು ನಮ್ಮನ್ನು ಹೆಚ್ಚಳಪಡಿಸುವನು (1ಕೊರಿ.1:27).

? ಮೂಡಣ ದೇಶದ ಜೋಯಿಸರು, "ಯೆಹೂದ್ಯರ ಅರಸನಾಗಿ ಹುಟ್ಟಿದವನು ಎಲ್ಲಿದ್ದಾನೆ?" ಎಂಬ ಪ್ರಶ್ನೆಯೊಂದಿಗೆ ಯೆರೂಸಲೇಮಿಗೆ ಬಂದರು. ಅವರ ಪ್ರಶ್ನೆಗೆ ಬೇತ್ಲೆಹೇಮಿನಲ್ಲಿಯೇ ಉತ್ತರ ಸಿಕ್ಕಿತು. ಮನುಷ್ಯನ ಎಲ್ಲಾ ಪ್ರಶ್ನೆಗಳಿಗೂ ಬೇತ್ಲೇಹೇಮಿನಲ್ಲಿ ಹುಟ್ಟಿದ ಯೇಸುಕ್ರಿಸ್ತನ ಬಳಿ ಉತ್ತರವುಂಟು (ಮತ್ತಾ.2:1–10).

? ಪ್ರವಾದಿಯಾದ ಮೀಕನು ಬೇತ್ಲೆಹೇಮಿನಲ್ಲಿ ಯೇಸುಕ್ರಿಸ್ತನು ಹುಟ್ಟುವನೆಂದು ಪ್ರವಾದನೆಯನ್ನು ನುಡಿದನು. ಯೇಸುಕ್ರಿಸ್ತನು ಈ ಭೂಮಿಯಲ್ಲಿ ಹುಟ್ಟುವದಕ್ಕೆ 700 ವರ್ಷಗಳ ಹಿಂದೆ ಈ ಪ್ರವಾದನೆಯು ನುಡಿಯಲ್ಪಟ್ಟಿತ್ತು (ಮೀಕ.5:2). ಮುಂತಿಳಿಸಲ್ಪಟ್ಟ ವಾಗ್ದಾನವು ಬೇತ್ಲೆಹೇಮಿನಲ್ಲಿ ನೆರವೇರಿದ ಪ್ರಕಾರವೇ, ಬೇತ್ಲೆಹೇಮಿನಲ್ಲಿ ಜನಿಸಿದ ಕ್ರಿಸ್ತನನ್ನು ನಮ್ಮ ಹೃದಯ ರಕ್ಷಕನನ್ನಾಗಿ ಸ್ವೀಕರಿಸುವಾಗ ಪ್ರವಾದನೆಯಾಗಿ ನುಡಿಯಲ್ಪಟ್ಟ ಹೇರಳವಾದ ವಾಗ್ದಾನಗಳು ನಮ್ಮ ಜೀವಿತದಲ್ಲೂ ನೆರವೇರುವದು.

? ಬೇತ್ಲೆಹೇಮಿನಲ್ಲಿ ಯೇಸುಕ್ರಿಸ್ತನು ಜನಿಸಿದ್ದಾನೆಂಬ ಸಂದೇಶವನ್ನು ದೂತರ ಮೂಲಕ ಕೇಳಿದ ಕುರುಬರು ಅದನ್ನು ನಂಬಿ, ಆತನನ್ನು ನೋಡಲು ಹೊರಟರು (ಲೂಕ.2:15). ಕ್ರಿಸ್ತನ ಸಂದೇಶವನ್ನು ಕೇಳುವ ನಾವು ಅದನ್ನು ನಂಬಿ ಕಾರ್ಯ ನಡಿಸುತ್ತೇವಾ?

? ಕುರುಬರು ತಟ್ಟನೆ ಹೊರಟರು (ಲೂಕ.2:16). ಆತ್ಮೀಕ ಕಾರ್ಯಗಳನ್ನು ತಡ ಮಾಡದೆ ತಕ್ಷಣವೇ ನೆರವೇರಿಸಿರಿ.

? ಬೇತ್ಲೆಹೇಮಿನಲ್ಲಿ ಬಂದು ಕ್ರಿಸ್ತನನ್ನು ಕಂಡ ಕುರುಬರು, ಆತನ ಬಗ್ಗೆ ಎಲ್ಲರಿಗೂ ತಿಳಿಸಿದರು (ಲೂಕ.2:18).

? ಬೇತ್ಲೆಹೇಮಿನಲ್ಲಿ ಬಂದು ಕ್ರಿಸ್ತನನ್ನು ಕಂಡ ಕುರುಬರು, ಆತನ ಬಗ್ಗೆ ಎಲ್ಲರಿಗೂ ತಿಳಿಸಿದರು (ಲೂಕ.2:18). ದೇವರ ಬಗ್ಗೆ ಇತರರಿಗೆ ತಿಳಿಸಲು ಈ ಕ್ರಿಸ್‌ಮಸ್ ದಿನಗಳನ್ನು ಉಪಯೋಗಿಸಿಕೊಳ್ಳಿರಿ.

# ಯೆಶಾಯನ ಗ್ರಂಥದಲ್ಲಿನ ಯೇಸುಕ್ರಿಸ್ತನ ಕುರಿತಾದ ಪ್ರವಾದನೆಗಳು

ಹಳೆಯ ಒಡಂಬಡಿಕೆಯಲ್ಲಿರುವ ಯಾವ ಗ್ರಂಥದಲ್ಲೂ ಇಲ್ಲದಷ್ಟು ಯೇಸುಕ್ರಿಸ್ತನ ಕುರಿತಾದ ಪ್ರವಾದನೆಗಳು ಯೆಶಾಯನ ಗ್ರಂಥದಲ್ಲಿ ಅಧಿಕವಾಗಿ ಬರೆಯಲ್ಪಟ್ಟಿದೆ. ಆತನ ಜನನ, ಸೇವೆ, ಜೀವನ ಎಲ್ಲದರ ಬಗ್ಗೆಯೂ ಇಲ್ಲಿ ಹೆಚ್ಚಾಗಿ ಕಾಣಬಹುದು. ಅವುಗಳಲ್ಲಿ ಕೆಲವು ನಿಮಗಾಗಿ:

? ಆತನು ಒಬ್ಬ ಕನ್ನಿಕೆಯ ಮೂಲಕ ಜನಿಸುವನು (7:14).
(ನೆರವೇರಿದ್ದು : ಮತ್ತಾ. 1:20–23, ಲೂಕ. 1:26–35).

? ಆತನನ್ನು ನಂಬದವರು ಮುಗ್ಗರಿಸಿ ಬೀಳುವದಕ್ಕೆ ಆತನೇ ಕಾರಣನಾಗಿರುವನು (8:14).
(ನೆರವೇರಿದ್ದು : ಮತ್ತಾ. 4:12–15, 23).

? ಆತನ ರಾಜ್ಯವು ಸದಾಕಾಲವಿರುವದು (9:7).
(ನೆರವೇರಿದ್ದು : ಲೂಕ. 1:32, 33)

? ಆತನು ಇಷಯನ (ದಾವೀದನ) ಸಂತತಿಯಾಗಿರುವನು (11:1).
(ನೆರವೇರಿದ್ದು : ಮತ್ತಾ. 1:1,6,17)

? ಅನ್ಯ ಜನಾಂಗದವರು ಆತನನ್ನು ಹಿಂಬಾಲಿಸುವರು (56:6–8).
(ನೆರವೇರಿದ್ದು : ಯೋಹಾನ. 10:16, ಅ.ಕೃ. 10:34–35).

? ಆತನು ಮೂಲೆಗಲ್ಲಾಗಿರುವನು (28:16).
(ನೆರವೇರಿದ್ದು : 1 ಪೇತ್ರ. 2:6,7).

? ಆತನು ರೋಗಿಗಳನ್ನು ಸ್ವಸ್ಥಮಾಡುವನು (35:5,6)
(ನೆರವೇರಿದ್ದು : ಮತ್ತಾ. 11:4,6, ಯೋಹಾ. 9:6,7).

? ಆತನ ಮುಂದೆ ಒಬ್ಬ ಸಂದೇಶಕನು ಬಂದು ಆತನಿಗೆ ಮಾರ್ಗವನ್ನು ನೆಟ್ಟಗೆ ಮಾಡುವನು (40:3).
(ನೆರವೇರಿದ್ದು : ಲೂಕ. 1:17, 76, 77)

**– : ವಾಗ್ದಾನ ವಚನ : ಲೂಕ. 2:11 : –**

***"ಈ ಹೊತ್ತು ನಿಮಗೋಸ್ಕರ ದಾವೀದನೂರಲ್ಲಿ ಒಬ್ಬ ರಕ್ಷಕನು ಹುಟ್ಟಿದ್ದಾನೆ".***

# ಸತ್ಯವೇದದಲ್ಲಿ ಮರೆಯಾಗಿರುವ ಮನುಷ್ಯರು-ಬರ್ಜಿಲೈ
## (2ಸಮು.17:27-29, 19:31-39)

ವೇದನೆಯಾದ ಅನುಭವಗಳ ನಡುವೆ, ನಮಗೆ ಆಪ್ತರಾಗಿರುವ ಸ್ನೇಹಿತರು ನಮ್ಮ ಸಂಗಡ ಇರಬೇಕೆಂದು ಬಯಸುತ್ತೇವೆ. ಅರಸನಾದ ದಾವೀದನ ಜೀವಿತದಲ್ಲೂ ಇಂತಹ ಅನುಭವವನ್ನು ಕಾಣುತ್ತೇವೆ.

ಅಬ್ಷಾಲೋಮನು ಇಸ್ರಾಯೇಲಿನ ಸಿಂಹಾಸನವನ್ನು ಕಿತ್ತುಕೊಂಡು ತನ್ನ ತಂದೆಯಾದ ದಾವೀದನನ್ನು ಅಟ್ಟಿಸಿಬಿಟ್ಟಾಗ, ದಾವೀದನಿಗೆ ಸಹಾಯ ಮಾಡಲು ಬಂದ ಸ್ನೇಹಿತರಲ್ಲಿ ಬರ್ಜಿಲೈಯು ಬಹಳ ಮುಖ್ಯವಾದವನು. ದಾವೀದನೂ ಅವನ ಸಂಗಡವಿದ್ದವರೂ ತಪ್ಪಿ ಓಡುವಾಗ, ಒಂದು ರಾತ್ರಿಯಲ್ಲಿ ಯೊರ್ದನನ್ನು ದಾಟಿ ಮಹನಯಿಮಿಗೆ ಬಂದು ಸೇರಿದರು. ಗಿಲ್ಯಾದ್ಯದ ಯಾಬೇಕ್ ನದಿಯ ದಡದಲ್ಲಿದ್ದ ಪಟ್ಟಣವೇ ಮಹನಯಿಮ್. ಆ ಸ್ಥಳದಲ್ಲಿಯೇ ಶೋಬಿ, ಮಾಕೀರ್ ಮತ್ತು ಬರ್ಜಿಲೈ ಎಂಬವರು ದಾವೀದನ ಮನುಷ್ಯರಿಗೆ ಬೇಕಾದ ಹಲವಾರು ವಸ್ತುಗಳನ್ನು ತಂದರು (2ಸಮು.17:28,29).

ಅಬ್ಷಾಲೋಮನು ಸತ್ತ ನಂತರ, ದಾವೀದನು ಯೆರೂಸಲೇಮಿಗೆ ಹಿಂದಿರುಗಲು ತೀರ್ಮಾನಿಸಿದನು. ಆ ಸಂದರ್ಭದಲ್ಲೂ ಬರ್ಜಿಲೈಯು ದಾವೀದನಿಗೆ ಸಹಾಯ ಮಾಡಲು ಮುಂಬಂದನು. ತನ್ನ ಸಂಗಡ ಯೆರೂಸಲೇಮಿಗೆ ಬರಲು ದಾವೀದನು ಬರ್ಜಿಲೈಯನ್ನು ಕರೆದಾಗ, ಎಂಭತ್ತು ವಯಸ್ಸಾಗಿರುವ ತಾನು ಬರುವದು ಹೇಗೆ? ಎಂದು ಹೇಳಿ, ತನ್ನ ಸ್ನೇಹಿತನಾದ ಕಿಮ್ಹಾಮನನ್ನು ದಾವೀದನ ಸಂಗಡ ಕಳುಹಿಸಿದನು.

ದೇವರು ನಮ್ಮನ್ನು ಆಶೀರ್ವದಿಸುವಾಗ, ನಾವು ಇತರರಿಗೆ ಆಶೀರ್ವದಕರವಾಗಿರಬೇಕೆಂಬದಕ್ಕೆ ಬರ್ಜಿಲೈ ಒಬ್ಬ ಒಳ್ಳೆಯ ಮಾದರಿಯಾಗಿದ್ದಾನೆ. ನಮ್ಮ ಸ್ನೇಹಿತರು ಅಗತ್ಯತೆಗಳೊಂದಿಗಿರುವಾಗ, ನಾವು ಅವರಿಗೆ ಸಹಾಯ ಮಾಡಲು ಮುಂಬರುವದೇ ನಿಜವಾದ ಸ್ನೇಹ.

ಬರ್ಜಿಲೈ ಎಂಬ ಹೆಸರಿಗೆ "ಕಬ್ಬಿಣದಿಂದ ರೂಪಿಸಲ್ಪಟ್ಟವನು" ಎಂದರ್ಥ. ಮುದುಕನಾಗಿದ್ದ ಕಾಲದಲ್ಲೂ ದಾವೀದನಿಗೆ ಅವನು ಸಹಾಯ ಮಾಡಿದ ಸ್ವಭಾವವು ಉತ್ತಮವಾದದ್ದು. ಪ್ರಿಯರೇ, ದೇವರು ನಮಗೆ ಕೊಟ್ಟಿರುವ ಧನೈಶ್ವರ್ಯಗಳನ್ನು, ನಮಗಾಗಿ ಮಾತ್ರವೇ ಸ್ವಾರ್ಥಿಗಳಾಗಿ ವೆಚ್ಚಮಾಡದೆ, ಕಷ್ಟಪಡುವವರಿಗೆ ದೇವರ ಸೇವೆಗಳಿಗೆಂದು ಕೊಡುವವರಾಗಿರ್ರಿ. ಕರ್ತನು ನಿಮ್ಮನ್ನು ಇನ್ನೂ ಹೆಚ್ಚಾಗಿ ಆಶೀರ್ವದಿಸುವನು.

## ಸಂಶಯದ ತೋಮಾ!

ಇವನು ಹನ್ನೆರಡು ಅಪೊಸ್ತಲರಲ್ಲಿ ಒಬ್ಬನು. ಯೋಹಾನನ ಸುವಾರ್ತೆಯಲ್ಲಿನ ಇವರ ಸಂಶಯಾತ್ಮಕವಾದ ಗುಣಗಳನ್ನು ಅರಿಯಬಹುದು. ಯಾವ ವಿಷಯವೇ ಆದರೂ ಆಧಾರವಿಲ್ಲದೆ ನಂಬುತ್ತಿರಲಿಲ್ಲ. ಇದರ ನಿಮಿತ್ತಲೇ ಇವನಿಗೆ "ಸಂಶಯದ ತೋಮಾ" ಎಂದು ಹೆಸರು.

ಯೇಸುಸ್ವಾಮಿಯ ಪುನರುತ್ಥಾನದ ನಂತರ, ಅವನಿಗೆ ದರ್ಶನ ಕೊಟ್ಟನು. ಅದರ ತರುವಾಯ ಇವನು ಪೂರ್ಣವಾದ ನಂಬಿಗಸ್ಥನಾಗಿ, ಹೊರದೇಶಗಳಿಗೆ ಹೋಗಿ ಸುವಾರ್ತೆ ಸಾರಿದನು. ಸಭೆಗಳನ್ನು ಸ್ಥಾಪಿಸಿದನು ಎಂದೂ, ಕೊನೆಗೆ ಚೆನ್ನೈನಲ್ಲಿ ರಕ್ತ ಸಾಕ್ಷಿಯಾಗಿ ಸತ್ತನೆಂದು ಹೇಳುತ್ತಾರೆ. ಅವನಿಗೆ ದಿದುಮನೆಂಬ ಹೆಸರೂ ಇತ್ತು. ಪವಿತ್ರಾತ್ಮನಿಗಾಗಿ ಕಾಯುತ್ತಿದ್ದ ಅಪೊಸ್ತಲರಲ್ಲಿ ಇವನೂ ಒಬ್ಬನಾಗಿದ್ದನು.

## ನೆನಪು ಮಾಡಿಕೊಳ್ಳಿರಿ!

ಪ್ರಿಯರೇ, ಕರ್ತನು ಎಷ್ಟು ಆಶ್ಚರ್ಯಕರವಾದವನು! ಎಷ್ಟು ಅದ್ಭುತವಾಗಿ ನಮ್ಮನ್ನು ಈ ವರ್ಷಪೂರ್ತಿಯಾಗಿ ನಡಿಸಿದ್ದಾನೆ. ಎಷ್ಟೋ ಉಪದ್ರವಗಳು, ಕೊರತೆಗಳು, ಹೋರಾಟಗಳು ಬಂದಾಗ್ಯೂ ಆತನು ನಮ್ಮನ್ನು ಕೈಬಿಡಲೇ ಇಲ್ಲ. ಆತನು ನಮ್ಮ ಸಂವತ್ಸರವನ್ನು ಪ್ರೀತಿ ಕೃಪೆಗಳೆಂಬ ಕಿರೀಟದಿಂದ ಶೃಂಗರಿಸಿದ್ದಾನೆ. ನಮ್ಮ ಜೀವವನ್ನು ನಾಶದಿಂದ ತಪ್ಪಿಸಿದ್ದಾನೆ. ನಮ್ಮ ಎಲ್ಲಾ ಅಪರಾಧಗಳನ್ನು ಕ್ಷಮಿಸಿದ್ದಾನೆ. ಇವೆಲ್ಲವನ್ನೂ ನೆನಪು ಮಾಡಿಕೊಂಡು ಈ ವರ್ಷ ಅಂತ್ಯದಲ್ಲಿ ಆತನಿಗೆ ಕೃತಜ್ಞತೆಯನ್ನು ಸಲ್ಲಿಸಿರಿ.

ಇಸ್ರಾಯೇಲ್ಯರಿಗೆ ಕರ್ತನು ಹೀಗಂದನು. "ಯೆಹೋವನು ನಿಮ್ಮನ್ನು ಈ ನಾಲ್ವತ್ತು ವರುಷ ಅರಣ್ಯದಲ್ಲಿ ನಡಿಸಿದ್ದನ್ನು... ನೆನಪಿಗೆ ತಂದುಕೊಳ್ಳಿರಿ" (ಧರ್ಮೋ. 8:2). ಇದೇ ಮಾತನ್ನು ಕರ್ತನು ನಿಮಗೂ ಹೇಳುತ್ತಿದ್ದಾನೆ. ಇಸ್ರಾಯೇಲ್ಯರಿಗೆ ಕರ್ತನು ಆಹಾರಕ್ಕಾಗಿ ಮನ್ನವನ್ನು ಕೊಟ್ಟು ಪೋಷಿಸಿದನು. ಅರಣ್ಯದಲ್ಲಿ ನೀರು ಸಿಗುವುದು ಬಹಳ ಕಷ್ಟಕರ. ಆದರೆ ಕರ್ತನು ಅವರಿಗೆ ಬಂಡೆಯೊಳಗಿಂದ ನೀರನ್ನು ಹೊರಡಿಸಿದನು. ಅಡವಿಯ ಹುಲ್ಲಿಗೆ ಉಡಿಸುವ ದೇವರು ಇಸ್ರಾಯೇಲ್ಯರ ಮೈಮೇಲಿದ್ದ ಉಡುಪು ಜೀರ್ಣವಾಗದಂತೆ ನೋಡಿಕೊಂಡನು. ಅವರ ಕಾಲುಗಳು ಬಾತುಹೋಗಲಿಲ್ಲ. ದೇವಮಕ್ಕಳೇ, ಇಸ್ರಾಯೇಲ್ಯರನ್ನು ಇಷ್ಟು ಮಹತ್ವವಾಗಿ ನಡಿಸಿದ ದೇವರು ನಮ್ಮನ್ನೂ ನಡಿಸಿದ್ದಾನೆ. ಅವುಗಳನ್ನು ಒಂದೊಂದಾಗಿ ಜ್ಞಾಪಕಕ್ಕೆ ತಂದು ಆತನನ್ನು ಸ್ತುತಿಸಿ ಕೊಂಡಾಡಿರಿ.

# ನಮ್ಮ ದೇಶದ ಸುದ್ದಿಗಳು
# (INDIAN NEWS)

**1. ಮಕ್ಕಳ ಸುಲಭ ಕಲಿಕೆಗೆ "ಇ–ರಿಫ್ಲೆಕ್ಷನ್" :** ಶಿರಸಿ: ಮಕ್ಕಳು ಇಷ್ಟಪಡುವ ಮೊಬೈಲ್, ಕಂಪ್ಯೂಟರ್, ಟ್ಯಾಬ್ಲೆಟ್ ಮೂಲಕವೇ ಪಠ್ಯಕ್ರಮದ ಸ್ವ–ಕಲಿಕೆ ಮತ್ತು ಸ್ವ–ಮೌಲ್ಯಮಾಪನ ಮಾಡಿಕೊಳ್ಳಬಹುದಾದ ತಂತ್ರಾಂಶವನ್ನು ಶಿಕ್ಷಕರೊಬ್ಬರು ಅಭಿವೃದ್ಧಿ ಪಡಿಸಿದ್ದಾರೆ. ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳಿಗಾಗಿ "ಇ–ರಿಫ್ಲೆಕ್ಷನ್" ಎಂಬ ಆ್ಯಪ್ ತಯಾರಿಸಿದ್ದಾರೆ. ಈ ಆ್ಯಪನ್ನು ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆಯು ಪುರಸ್ಕರಿಸಿ ರಾಜ್ಯದ ಎಲ್ಲ ಶೈಕ್ಷಣಿಕ ಜಿಲ್ಲೆಗಳಲ್ಲಿ ಇದನ್ನು ಅನುಷ್ಠಾನಗೊಳಿಸುವಂತೆ ಉಪನಿರ್ದೇಶಕರು ಹಾಗೂ ಡಯಟ್ ಮುಖ್ಯಸ್ಥರಿಗೆ ಸೂಚಿಸಿದೆ.

**2. ಬಾಹ್ಯ ಸಾಲ ತಗ್ಗಿಸಿದ ಕೇಂದ್ರ :** ನವದೆಹಲಿ (ಪಿಟಿಐ). ಪ್ರಸಕ್ತ ಹಣಕಾಸು ವರ್ಷದಲ್ಲಿ ಮಾರುಕಟ್ಟೆಯಲ್ಲಿ ಪಡೆಯುವ ಸಾಲದ ಮೊತ್ತವನ್ನು ರೂ.70 ಸಾವಿರ ಕೋಟಿಯಷ್ಟು ತಗ್ಗಿಸಲು ನಿರ್ಧರಿಸಲಾಗಿದೆ. ಪ್ರಸಕ್ತ ಹಣಕಾಸು ವರ್ಷಕ್ಕೆ ರೂ.6.05 ಲಕ್ಷ ಕೋಟಿ ಸಂಗ್ರಹಿಸಲು ಯೋಜಿಸಿತು. 2.88 ಲಕ್ಷ ಕೋಟಿ ಸಂಗ್ರಹವಾಗಿದೆ. ಒಟ್ಟು ಮೊತ್ತ 5.35 ಲಕ್ಷ ಕೋಟಿಯಷ್ಟಾಗಲಿದೆ. ಸಣ್ಣ ಉಳಿತಾಯ ಯೋಜನೆಗಳ ಬಡ್ಡಿದರ ಹೆಚ್ಚಿಸಿರುವುದರಿಂದ ಠೇವಣಿ ಸಂಗ್ರಹದಲ್ಲಿ ಏರಿಕೆಯಾಗುವ ನಿರೀಕ್ಷೆಯನ್ನು ಸರ್ಕಾರ ಹೊಂದಿದೆ ಎಂದು ಆರ್ಥಿಕ ವ್ಯವಹಾರಗಳ ಕಾರ್ಯದರ್ಶಿ ತಿಳಿಸಿದ್ದಾರೆ.

**3. ವಿಪತ್ತು ತೆರಿಗೆ ಸಮಿತಿ ರಚನೆ :** ನವದೆಹಲಿ (ಪಿಟಿಐ). ನೈಸರ್ಗಿಕ ಪ್ರಕೋಪಗಳಿಗೆ ತುತ್ತಾಗುವ ರಾಜ್ಯಗಳಿಗೆ ಪರಿಹಾರ ಒದಗಿಸಲು ಹೊಸ ವಿಪತ್ತು ತೆರಿಗೆ ವಿಧಿಸುವುದನ್ನು ಪರಿಶೀಲಿಸಲು ಸರಕು ಮತ್ತು ಸೇವಾ ತೆರಿಗೆ ಮಂಡಳಿಯು ಏಳು ಸಚಿವರ ಸಮಿತಿ ರಚಿಸಿದೆ. ಭಾರಿ ಮಳೆ, ಪ್ರವಾಹ, ಭೂಕಂಪ, ಚಂಡಮಾರುತದಂತಹ ನೈಸರ್ಗಿಕ ಪ್ರಕೋಪಗಳಿಗೆ ಸಿಲುಕಿ ಅಗಾಧ ಪ್ರಮಾಣದ ಆಸ್ತಿಪಾಸ್ತಿ ನಷ್ಟಕ್ಕೆ ಗುರಿಯಾಗುವ ರಾಜ್ಯಗಳ ನೆರವಿಗೆ ಸಂಪನ್ಮೂಲ ಸಂಗ್ರಹಿಸಲು 'ವಿಪತ್ತು ತೆರಿಗೆ' ವಿಧಿಸುವ ಸಾಧ್ಯತೆಯನ್ನು ಈ ಸಮಿತಿ ಪರಿಶೀಲಿಸಲಿದೆ ಎಂದು ತಿಳಿದುಬಂದಿದೆ.

**4. ಪರೋಪಕಾರಿಗೆ ರಕ್ಷಣೆ ಕರ್ನಾಟಕವೇ ಮೊದಲು :** ನವದೆಹಲಿ (ಪಿಟಿಐ). ಅಪಘಾತದಲ್ಲಿ ಗಾಯಗೊಂಡವರಿಗೆ ನೆರವು ನೀಡಿದವರು ಸಾಕ್ಷ್ಯ ಹೇಳುವುದು ಮತ್ತಿತರ ಕಾರಣಗಳಿಗಾಗಿ ನ್ಯಾಯಾಲಯಕ್ಕೆ ಅಲೆದಾಡಬೇಕಾಗುತ್ತದೆ. ಇದನ್ನು ತಪ್ಪಿಸುವುದಕ್ಕಾಗಿಯೇ ಕರ್ನಾಟಕ ಸರ್ಕಾರವು ಕರ್ನಾಟಕ ಜೀವರಕ್ಷಕ ಮತ್ತು ವೈದ್ಯಕೀಯ ವೃತ್ತಿ ನಿರಂತರ (ತುರ್ತು ಸನ್ನಿವೇಶಗಳಲ್ಲಿ ರಕ್ಷಣೆ ಮತ್ತು ನಿಯಂತ್ರಣ) ಮಸೂದೆ 2016ಅನ್ನು ರೂಪಿಸಿತು. ಇದು ದೇಶದಲ್ಲಿಯೇ ಈ ರೀತಿಯ ಮೊದಲ ಮಸೂದೆ. ಹಾಗಾಗಿ ಅಪಘಾತ ಸಂದರ್ಭದಲ್ಲಿ ನೆರವು ನೀಡುವ ಪರೋಪಕಾರಿಗಳ ರಕ್ಷಣೆಗೆ ಮುಂದಾದ ಮೊದಲ ರಾಜ್ಯ ಕರ್ನಾಟಕ ಎಂದು ತಿಳಿದು ಬಂದಿದೆ.

**5. ಎಚ್1 ಎನ್1 : ಸೆಪ್ಟೆಂಬರ್‌ನಲ್ಲಿ 102 ಪ್ರಕರಣಗಳು :** ಬೆಂಗಳೂರು. ರಾಜ್ಯದಲ್ಲಿ ಇದೇ ತಿಂಗಳಿನಲ್ಲಿಯೇ 102 ಎಚ್1 ಎನ್1 ಪ್ರಕರಣಗಳು ಕಂಡುಬಂದಿದ್ದು ಆತಂಕ ಸೃಷ್ಟಿಸಿದೆ. ಜನವರಿ 2018ರಿಂದ ಇದೇ ತಿಂಗಳ 21ರವರೆಗೆ 3.876 ರೋಗಿಗಳ ಮಾದರಿಯನ್ನು ಪರೀಕ್ಷಿಸಿದಾಗ 1.39 ಪ್ರಕರಣಗಳು ಪತ್ತೆಯಾಗಿವೆ. ಇದರಲ್ಲಿ ಸೆಪ್ಟೆಂಬರ್ ತಿಂಗಳಿನಲ್ಲಿಯೇ ಹೆಚ್ಚು ಪ್ರಕರಣಗಳು ದಾಖಲಾಗಿದ್ದು ರೋಗಿಗಳ ಸಂಖ್ಯೆ ಹೆಚ್ಚುವ ಆತಂಕ ಎದುರಾಗಿದೆ ಎಂದು ಆರೋಗ್ಯ ಇಲಾಖೆ ಸುತ್ತೋಲೆಯಲ್ಲಿ ತಿಳಿಸಿದೆ. ಕಾರ್ಯಾಚರಣೆ ನಡೆಸಿ ವರದಿ ಸಲ್ಲಿಸುವ ಕುರಿತು ಮಾಹಿತಿ ನೀಡಿದೆ.



# ಹೊರ ದೇಶದ ಸುದ್ದಿಗಳು
# (FOREIGN NEWS)

**1. ಚೋಕ್ಸಿ ಹಸ್ತಾಂತರಕ್ಕೆ ಸಹಕಾರ : ಆ್ಯಂಟಿಗುವಾ :** ನ್ಯೂಯಾರ್ಕ್ (ಪಿಟಿಐ). ವಜ್ರಾಭರಣ ಉದ್ಯಮಿ ಮೆಹುಲ್ ಚೋಕ್ಸಿ ಅವರನ್ನು ಭಾರತಕ್ಕೆ ಹಸ್ತಾಂತರಿಸಲು ಎಲ್ಲ ರೀತಿ ಸಹಕರಿಸುವದಾಗಿ ಆ್ಯಂಟಿಗುವಾ ಭರವಸೆ ನೀಡಿದೆ. ವಿಶ್ವಸಂಸ್ಥೆಯ 73ನೇ ಸಾಮಾನ್ಯ ಅಧಿವೇಶನದ ಸಂದರ್ಭದಲ್ಲಿ ವಿದೇಶಾಂಗ ಸಚಿವರು ಆ್ಯಂಟಿಗುವಾ ಮತ್ತು ಬರ್ಬುಡಾದ ವಿದೇಶಾಂಗ ಸಚಿವ ಗ್ರೀನ್ ಅವರನ್ನು ಭೇಟಿಯಾಗಿ ಚೋಕ್ಸಿ ಹಸ್ತಾಂತರ ಕುರಿತು ಸಮಾಲೋಚಿಸಿದರು. ಶೀಘ್ರದಲ್ಲಿ ಈ ವಿಷಯ ಇತ್ಯರ್ಥಗೊಳಿಸಲು ಪ್ರಧಾನಿ ಸಮ್ಮತಿಸಿದ್ದಾರೆ ಎಂದು ಗ್ರೀನ್ ಅವರು ಭಾರತದ ವಿದೇಶಾಂಗ ಸಚಿವೆ ಅವರಿಗೆ ತಿಳಿಸಿದ್ದಾರೆ.

**2. ಸುರಕ್ಷಿತ ಸ್ಥಳಾಂತರ :** ಶಿಮ್ಲಾ (ಪಿಟಿಐ). ಹಿಮಾಚಲ ಪ್ರದೇಶದ ಲಹೌಲ್ ಮತ್ತು ಸ್ಪಿತಿ ಜಿಲ್ಲೆಗಳಲ್ಲಿ ಹಿಮ ಮಳೆಗೆ ಸಿಲುಕಿಕೊಂಡಿದ್ದ ಹದಿನೆಂಟು ವಿದೇಶಿಗರು ಸೇರಿದಂತೆ ಸಾವಿರಕ್ಕೂ ಹೆಚ್ಚು ಜನರನ್ನು ಕಳೆದ ಮೂರು ದಿನಗಳಲ್ಲಿ ಸುರಕ್ಷಿತ ಪ್ರದೇಶಗಳಿಗೆ ಸ್ಥಳಾಂತರ ಮಾಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

**3. ಅಣೆಕಟ್ಟೆಗಳಿಗಾಗಿ ದೇಣಿಗೆ ಕೋರಿದ ಪಾಕಿಸ್ತಾನದ ಪ್ರಧಾನಿ :** ಇಸ್ಲಾಮಾಬಾದ್ (ಎಎಫ್‌ಪಿ). ಪಾಕಿಸ್ತಾನದಲ್ಲಿ ಅಣೆಕಟ್ಟುಗಳ ನಿರ್ಮಾಣಕ್ಕಾಗಿ ಸಾರ್ವಜನಿಕರು ದೇಣಿಗೆ ನೀಡಬೇಕು (ಕ್ರೌಡ್ ಫಂಡ್) ಎಂದು ಪ್ರಧಾನಿ ಮನವಿ ಮಾಡಿಕೊಂಡಿದ್ದಾರೆ. ಇದಕ್ಕಾಗಿ ರೂ.6.5 ಸಾವಿರ ಕೋಟಿ ನೀಡುವಂತೆ ಅವರು ಕೇಳಿಕೊಂಡಿದ್ದಾರೆ. ಸದ್ಯ ಕೇವಲ 30 ದಿನಗಳವರೆಗೆ ನೀರು ಸಂಗ್ರಹಿಸಿಟ್ಟುಕೊಳ್ಳುವ ಸಾಮರ್ಥ್ಯ ಮಾತ್ರ ಇದೆ. ಹೊಸ ಜಲಾಶಯಗಳ ಅಗತ್ಯವಿದೆ ಎಂದು, ವಿದೇಶಗಳಲ್ಲಿ ಲಕ್ಷಾಂತರ ಪಾಕಿಸ್ತಾನಿಯರು ನೆಲೆಸಿದ್ದಾರೆ. ಒಬ್ಬೊಬ್ಬರು ಸುಮಾರು ಒಂದು ಲಕ್ಷ ಹಣ ನೀಡಿದರೂ ಸಾಕಷ್ಟು ನಿಧಿ ಸಂಗ್ರಹವಾಗುತ್ತದೆ ಎಂದು ಹೇಳಿದ್ದಾರೆ.

**4. ಜಪಾನ್ ಚಂಡಮಾರುತ :** ವಿಮಾನ ಸಂಚಾರ ರದ್ದು ಕಗೊಷಿಮಾ, ಜಪಾನ್ (ಎಎಫ್‌ಸಿ). ಟ್ರಾಮಿ ಚಂಡಮಾರುತದಿಂದ ಜಪಾನ್ ತತ್ತರಿಸಿ ಹೋಗಿದೆ. ಬಿರುಗಾಳಿ, ಮಳೆ, ಭೂಕುಸಿತ ಮತ್ತು ಪ್ರವಾಹದ ಭೀತಿ ಉಂಟಾಗಿದೆ. ಈಗಾಗಲೇ ಸಾವಿರಕ್ಕೂ ಹೆಚ್ಚು ವಿಮಾನ ಸಂಚಾರವನ್ನು ರದ್ದುಗೊಳಿಸಲಾಗಿದೆ. ಅಲ್ಲದೆ ಬುಲೆಟ್ ರೈಲುಗಳ ಸಂಚಾರವನ್ನು ತಡೆಯಲಾಗಿದೆ. ಗಂಟೆಗೆ 216 ಕಿ.ಮೀ. ವೇಗದಲ್ಲಿ ಟ್ರಾಮಿ ಅಪ್ಪಳಿಸಿದ್ದು 75ಕ್ಕೂ ಹೆಚ್ಚು ಜನ ಗಂಭೀರವಾಗಿ ಗಾಯಗೊಂಡಿದ್ದಾರೆ. 5 ಲಕ್ಷಕ್ಕೂ ಹೆಚ್ಚು ಮನೆಗಳಲ್ಲಿ ವಿದ್ಯುತ್ ಸಂಪರ್ಕ ಕಡಿತಗೊಂಡಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

**5. 100ನೇ ಸ್ಥಾನಕ್ಕೆ ಜಿಗಿದ ಭಾರತಕ್ಕೆ ಅಮೆರಿಕ ಅಭಿನಂದನೆ :** ವಿಶ್ವಸಂಸ್ಥೆ ಬಿಡುಗಡೆ ಮಾಡಿರುವ ಉದ್ಯಮ ಸ್ನೇಹಿ ಪಟ್ಟಿಯಲ್ಲಿ ಭಾರತ 130ನೇ ಸ್ಥಾನದಿಂದ 100ನೇ ಸ್ಥಾನಕ್ಕೆ ಜಿಗಿತ ಕಂಡಿದ್ದಕ್ಕಾಗಿ ಅಮೆರಿಕ ಅಭಿನಂದನೆ ಸಲ್ಲಿಸಿದೆ. ಇದೊಂದು ಬಹುದೊಡ್ಡ ಸಾಧನೆ. ಜಾರಿಗೊಳಿಸಿರುವ ಹಲವು ಸುಧಾರಣ ಕ್ರಮಗಳು ಕಾರಣ ಎಂದು ಭಾರತ ಕುರಿತ ವ್ಯಾಪಾರ ವಿದೇಶಿ ಕೃಷಿ ವ್ಯವಹಾರಗಳ ಯುಎಸ್‌ಡಿಎನ್ ಅಧೀನ ಕಾರ್ಯದರ್ಶಿ ಅಭಿಪ್ರಾಯ ಪಟ್ಟಿದ್ದಾರೆ ಎಂದು ತಿಳಿದುಬಂದಿದೆ.

**6. ಗಗನ ಯಾತ್ರೆಗೆ ಉಲ್ಲಾಸದ ಉಡುಗೆ :** ಗಗನ ಯಾತ್ರಿಗಳಲ್ಲಿ ಖಿನ್ನತೆಯ ಲಕ್ಷಣಗಳನ್ನು ಗುರುತಿಸಿ ಅದನ್ನು ಹೋಗಲಾಡಿಸಲು ಅಗತ್ಯ ಬದಲಾವಣೆಗಳನ್ನು ಸೂಚಿಸುವ ಸಂತಸದಾಯಕ ಬಾಹ್ಯಾಕಾಶ ಉಡುಗೆ ತಂತ್ರಜ್ಞಾನವನ್ನು ವಿಜ್ಞಾನಿಗಳು ಅಭಿವೃದ್ಧಿ ಪಡಿಸಿದ್ದಾರೆ. ಫ್ಲಾರಿಡಾ ಪಾಲಿಟೆಕ್ನಿಕ್ ವಿಶ್ವವಿದ್ಯಾಲಯದ ಸಂಶೋಧಕರು ಸ್ಮಾರ್ಟ್ ಸೆನ್ಸರಿ ಸ್ಕಿನ್ (ಎಸ್3) ತಂತ್ರಜ್ಞಾನ ಬಳಸಿ ಈ ಉಡುಗೆ ಅಭಿವೃದ್ಧಿ ಪಡಿಸಿದ್ದಾರೆ.

## ಡಿಸೆಂಬರ್ 1 ದಿನಗಳನ್ನು ಎಣಿಸುವ ಅರಿವು!

ಬೆಳಿಗ್ಗೆ : ಯೆಹೆ. 40, 41
ಸಂಜೆ : 2 ಪೇತ್ರ. 3

**"ನಮ್ಮ ದಿನಗಳು ಕೊಂಚವೇ ಎಂದು ಎಣಿಸಿಕೊಳ್ಳುವ ಹಾಗೆ ನಮಗೆ ಕಲಿಸು, ಆಗ ಜ್ಞಾನದ ಹೃದಯವನ್ನು ಪಡಕೊಳ್ಳುವೆವು" (ಕೀರ್ತ.90:12).**

ದಿನಗಳನ್ನೂ, ಕಾಲಗಳನ್ನೂ, ಯಾರಿಂದಲೂ ನಿಲ್ಲಿಸಲು ಸಾಧ್ಯವಿಲ್ಲ. ಅವು ವೇಗವಾಗಿ ಓಡುತ್ತಲೇ ಇವೆ. ಈ ವರ್ಷವನ್ನು ಈಗ ತಾನೇ ಪ್ರಾರಂಭಿಸಿದ ಹಾಗಿದೆ. ಡಿಸೆಂಬರ್ ತಿಂಗಳಿಗೆ ಬಂದಿದ್ದೇವೆ. ಈ ತಿಂಗಳು ಒಳ್ಳೆಯ ಹಾಡುಗಳು, ಆರಾಧನೆಗಳು, ಕ್ರಿಸ್‌ಮಸ್ ಕ್ಯಾರಲ್ ಉಳ್ಳ ತಿಂಗಳಾಗಿದೆ. ಮಕ್ಕಳೂ, ಬಂಧುಗಳೂ, ಒಟ್ಟಾಗಿ ಕೂಡುವ ತಿಂಗಳು, ಮಾತ್ರವಲ್ಲ, ಹೊಸ ವರ್ಷದೊಳಗೆ ಸಾಗುವ ಮುಂಚೆ ನಿಮ್ಮನ್ನು ನೀವೇ ಸಿದ್ಧಪಡಿಸಿಕೊಳ್ಳಬೇಕು. ಕರ್ತನು ತಾನೇ ನಿಮ್ಮ ಸಂಗಡ ಇದ್ದು, ಶುಭವಾದ ಮಾರ್ಗಗಳಲ್ಲಿ ನಿಮ್ಮನ್ನು ನಡೆಸಲಿ!

ಕೆಲವರು ವೇಗವಾಗಿ ಓಡಿ ಕಾಲವನ್ನು ಆದಾಯ ಮಾಡಲು ಪ್ರಯತ್ನಿಸುವರು. ಇಂದು ಸಿಂಗಪೂರ್‌ನಲ್ಲಿರುವ ಅನೇಕ ಕ್ರೈಸ್ತರು, ಭಾನುವಾರದಲ್ಲಿಯೂ ಸಹ ಸಭೆಗೆ ಬರುವದಿಲ್ಲ. ಎರಡು, ಮೂರು, ಕೆಲಸಗಳನ್ನು ಮಾಡಿ, ಮನೆಯ ಸಾಲ, ಕಾರಿನ ಸಾಲ, ಮಕ್ಕಳ ಮದುವೆಯ ಸಾಲಗಳನ್ನೆಲ್ಲಾ ತೀರಿಸಲು ಪ್ರಯತ್ನಿಸುತ್ತಾರೆ. ಓಡಿ, ಓಡಿ, ದುಡಿದು ಹಣ ಸಂಪಾದಿಸುತ್ತಾರೆ. ಯೇಸುಕ್ರಿಸ್ತನು ಎಂದಿಗೂ ಓಡಲಿಲ್ಲ. ಆತನು ನಡೆದು ಹೋಗುವವನಾಗಿದ್ದನು. ಆ ಕಾಲದಲ್ಲಿ, ಕುದುರೆಗಳು, ರಥಗಳು, ಒಂಟೆಗಳು ಇದ್ದವು. ಆದರೆ ಇವುಗಳನ್ನು ಆತನು ಉಪಯೋಗಿಸಲಿಲ್ಲ. ಜೀವಿತದಲ್ಲಿ ಒಂದೇ ಒಂದು ಸಾರಿ ಮೆತ್ತಗೆ ನಡೆಯುವ ಕತ್ತೆಯ ಮೇಲೆ ಏರಿದನು ಅಷ್ಟೇ.

ಆದರೂ ಆತನು ತನ್ನ ಸಮಯವನ್ನು ಬಹಳ ಸಾಮರ್ಥ್ಯವಾಗಿ ಉಪಯೋಗಿಸಿದನು. ಮುಂಜಾನೆಯಲ್ಲಿ ಮೊಬ್ಬಿರುವಾಗಲೇ ಎದ್ದು, ತಂದೆಯನ್ನು ದರ್ಶಿಸಲು ಅರಣ್ಯವಾದ ಒಂದು ಸ್ಥಳಕ್ಕೆ ಹೋದನು. ಹಗಲೆಲ್ಲಾ ಗ್ರಾಮ, ಗ್ರಾಮವಾಗಿ ನಡೆದು, ಸುವಾರ್ತೆಯನ್ನು ಸಾರಿದನು. ಪರಲೋಕ ರಾಜ್ಯದ ವಿಶೇಷತೆಗಳನ್ನು ಜನರಿಗೆ ಉಪದೇಶಿಸಿದನು. ಮಾತ್ರವಲ್ಲ, ಶಿಷ್ಯರನ್ನು ಆರಿಸಿಕೊಂಡು, ಅವರಿಗೆ ತರಬೇತಿಯನ್ನು ನೀಡಿದನು. ದೇವಮಕ್ಕಳೇ, ಅನೇಕ ಸಮಯಗಳಲ್ಲಿ ನಾವು ನಿಮಿಷಗಳನ್ನು ಆದಾಯಪಡಿಸಲು ಓಡುತ್ತೇವೆ. ನಮ್ಮ ಸಮಯವನ್ನು ಇತರ ಕಾರ್ಯಗಳಲ್ಲಿಯೂ, ಮಾತುಗಳಲ್ಲಿಯೂ, ಟೆಲಿವಿಷನ್ ಮುಂದೆ ಕುಳಿತುಕೊಂಡು ವ್ಯರ್ಥಮಾಡುತ್ತಿದ್ದೇವೆ. ಪ್ರತಿಯೊಬ್ಬ ಮನುಷ್ಯನೂ ತನ್ನ ಸಮಯವನ್ನು ಕುರಿತು ದೇವರಿಗೆ ಲೆಕ್ಕ ಒಪ್ಪಿಸಬೇಕಾಗಿದೆ. ಆದ್ದರಿಂದ ಎಚ್ಚರಿಕೆಯುಳ್ಳವರಾಗಿರ್ರಿ.

***ನೆನಪಿಗೆ : "ಈ ದಿನಗಳು ಕೆಟ್ಟವುಗಳಾಗಿವೆ; ಆದದರಿಂದ ಕಾಲವನ್ನು ಸುಮ್ಮನೆ ಕಳಕೊಳ್ಳದೆ, ಅದನ್ನು ಬೆಲೆಯುಳ್ಳದ್ದೆಂದು ಉಪಯೋಗಿಸಿಕೊಳ್ಳಿರಿ" (ಎಫೆ. 5:16).***

ಡಿಸೆಂಬರ್ 2

# ವಿಶೇಷವಾದ ಅರಿವು!

ಬೆಳಿಗ್ಗೆ : ಯೆಹೆ. 42,43,44
ಸಂಜೆ : 1 ಯೋಹಾ.1

**"ನಮ್ಮ ದಿನಗಳು ಕೊಂಚವೇ ಎಂದು ಎಣಿಸಿಕೊಳ್ಳುವ ಹಾಗೆ, ನಮಗೆ ಕಲಿಸು" (ಕೀರ್ತ.90:12).**

ಇದು ಒಂದು ಸಣ್ಣ ಪ್ರಾರ್ಥನೆಯೇ. ಅಪರೂಪವಾದ ಪ್ರಾರ್ಥನೆ. ಯೋಚಿಸಿ ಮಾಡುವಂತಹ ವ್ಯತ್ಯಾಸವಾದ ಪ್ರಾರ್ಥನೆ. "ಪಾಪಿಯಾದ ನನ್ನನ್ನು ಕರುಣಿಸು" ಎಂದು ಪ್ರಾರ್ಥಿಸಿದ ಸುಂಕದವನ ಪ್ರಾರ್ಥನೆಯು ಅವನನ್ನು ನೀತಿವಂತನನ್ನಾಗಿ ಮಾಡಿತು. ನನ್ನ ಪ್ರಾಂತ್ಯವನ್ನು ವಿಸ್ತರಿಸು ಎಂಬ ಯಾಬೇಚನ ಸಣ್ಣ ಪ್ರಾರ್ಥನೆಯು, ಅವನು ಬೇಡಿಕೊಂಡದ್ದನ್ನು ಕರ್ತನು ಅನುಗ್ರಹಿಸುವಂತೆ ಮಾಡಿತು. ಆಕಾಶದಿಂದ ಬೆಂಕಿಯು ಇಳಿದು ಬರಲಿ ಎಂದು ಪ್ರಾರ್ಥಿಸಿದ ಎಲೀಯನ ಪ್ರಾರ್ಥನೆಯು ಸಣ್ಣದಾಗಿದ್ದರೂ, ಕರ್ಮೆಲ್ ಬೆಟ್ಟದಲ್ಲಿ ಬಹಳ ದೊಡ್ಡ ಉಜ್ಜೀವನವನ್ನು ಏರ್ಪಡಿಸಿತು. ಕಣ್ಣುಗಳು ಕೀಳಲ್ಪಟ್ಟ ಪರಿಸ್ಥಿತಿಯಲ್ಲಿ ಸಂಸೋನನು ಮಾಡಿದ ಪ್ರಾರ್ಥನೆ ಕಳೆದುಕೊಂಡ ಬಲವನ್ನು ಮತ್ತೆ ಹೊಂದುವಂತೆ ಮಾಡಿತು.

ಅದೇ ಸಮಯದಲ್ಲಿ, "ನಮ್ಮ ದಿನಗಳು ಕೊಂಚವೇ ಎಂದು ಎಣಿಸಿಕೊಳ್ಳುವ ಹಾಗೆ ನಮಗೆ ಕಲಿಸು" ಎಂದು ಪ್ರಾರ್ಥಿಸಿದನು ಭಕ್ತನಾದ ಮೋಶೆ. ಅವನ ಈ ಪ್ರಾರ್ಥನೆಯು ಕೀರ್ತನೆಗಳು 90ರಲ್ಲಿ ಬರೆಯಲ್ಪಟ್ಟಿದೆ. ಹಾಗಾದರೆ, ಆ ಪ್ರಾರ್ಥನೆಯು ಎಷ್ಟು ಪ್ರಾಮುಖ್ಯವಾದದ್ದು ಎಂಬದನ್ನು ಯೋಚಿಸಿರಿ! ಆತನು ಒಬ್ಬ ದೇವಮನುಷ್ಯ. ಸತ್ಯವೇದದಲ್ಲಿ ಏಳು ಮಂದಿ ದೇವಮನುಷ್ಯರು ಎಂದು ಕರೆಯಲ್ಪಟ್ಟರು. 1) ಮೋಶೆ (ಧರ್ಮೋ.33:1) 2) ಸಮುವೇಲನು, (1 ಸಮು.9:6–10), 3) ದಾವೀದನು (ನೆಹೆ.12:25), 4) ಎಲೀಯನು (1ಅರಸು.17:18), 5) ಎಲೀಷನು (2ಅರಸು4:7), 6) ಶೆಮಾಯ (2ಪೂರ್ವ.11:2), 7) ಹಾನಾನನು (ಯೆರೆ.35:4).

ಇಂದು ಮನುಷ್ಯನಿಗೆ ನಾನಾ ರೀತಿಯ ಅರಿವು ಇದೆ. ವೈಜ್ಞಾನಿಕ ಅರಿವು, ಭೂಗೋಳ ಅರಿವು, ಕಂಪ್ಯೂಟರ್ ಅರಿವು ಎಂದು ಎಷ್ಟೋ ಸಾವಿರಾರು ಇಲಾಖೆಗಳಲ್ಲಿ ಮನುಷ್ಯನು ಮುಂದುವರಿಯುತ್ತಲೇ ಇದ್ದಾನೆ. ಆದರೆ ಅವನಿಗೆ ಇಲ್ಲದಂಥ ಒಂದೇ ಒಂದು ಅರಿವು "ಅವನ ದಿನಗಳನ್ನು ಎಣಿಸುವ ಅರಿವು". ಭೂಮಿಯಲ್ಲಿ ಅವನು ಎಷ್ಟು ಕಾಲಗಳು ಬದುಕಿರುವನು? ಅದು ರಹಸ್ಯವಾಗಿಯೇ ಅದೆ. ಯಾವಾಗ ಲೋಕದ ಅಂತ್ಯವಿರುವುದು? ಕ್ರಿಸ್ತನು ಯಾವಾಗ ಪುನಃ ಈ ಲೋಕಕ್ಕೆ ಬರುವನು? ಆ ದಿನಗಳನ್ನು ತಿಳಿಯುವ ಅರಿವು ಒಬ್ಬರಿಗೂ ಇಲ್ಲ. ದೇವಮಕ್ಕಳೇ, ಕಾಲವು ಬಂಗಾರದಷ್ಟು ಅಮೂಲ್ಯವಾದದ್ದು. ಎಂದಿಗೂ ಅದನ್ನು ವ್ಯರ್ಥಮಾಡಬೇಡಿರಿ. ಅತಿ ಶೀಘ್ರವಾಗಿ ದೇವರ ಚಿತ್ತವನ್ನು ನೆರವೇರಿಸಿರಿ.

***ನೆನಪಿಗೆ : "ಬುದ್ಧಿಹೀನರಾಗಿ ನಡೆಯದೆ, ಕರ್ತನ ಚಿತ್ತವೇನೆಂಬದನ್ನು ವಿಚಾರಿಸಿ ತಿಳಿದವರಾಗಿರ್ರಿ" (ಎಫೆ.5:17).***

## ಡಿಸೆಂಬರ್ 3 ಸಮಯವು ಸಂಕ್ಷಿಪ್ತವಾದದ್ದು!

ಬೆಳಿಗ್ಗೆ : ಯೆಹೆ. 45, 46
ಸಂಜೆ : 1 ಯೋಹಾ.2

**"ನಿಮ್ಮ ಜೀವಮಾನವು ಎಂಥದ್ದು? ನೀವು ಸ್ವಲ್ಪ ಹೊತ್ತು ಕಾಣಿಸಿಕೊಂಡು, ಆಮೇಲೆ ಕಾಣದೆ ಹೋಗುವ ಹಬೆಯಂತಿರುತ್ತೀರಿ" (ಯಾಕೋ.4:14).**

ಮನುಷ್ಯರಿಗಿಂತಲೂ ಅನೇಕ ಜೀವರಾಶಿಗಳು, ಮೃಗಗಳು, ಮರಗಿಡಗಳು ಅಧಿಕ ದಿನಗಳು ಜೀವಿಸುತ್ತವೆ. ಆದಾಮನು 930 ವರ್ಷಗಳು ಜೀವಿಸಿದನು. ಆದರೆ ಈಗಲೋ, ನಮ್ಮ ಆಯುಷ್ಕಾಲವು ಎಪ್ಪತ್ತು ವರ್ಷಗಳು ಮಾತ್ರವೇ. ಬಲ ಹೆಚ್ಚಿದರೆ 80 ವರ್ಷಗಳು ಬದುಕಬಹುದು. ಈ ಜೀವಿತದಲ್ಲಿ ಪ್ರತಿಯೊಂದು ನಿಮಿಷವೂ ಬಹಳ ಮುಖ್ಯವಾದದ್ದು. ಈ ಲೋಕದಲ್ಲಿ ಜೀವಿಸುವದಕ್ಕೆ ಮಾತ್ರವಲ್ಲ, ನಿತ್ಯತ್ವಕ್ಕಾಗಿಯೂ ಸಿದ್ಧತೆಗಾಗಿಯೂ ಸಮಯವನ್ನು ನೇಮಿಸಿರಿ.

ಹಲವಾರು ಸಮಯಗಳಲ್ಲಿ, ಕರ್ತನು ನಮ್ಮ ಜೀವಿತದಲ್ಲಿ ಕೃಪೆಯುಳ್ಳ ಅವಕಾಶಗಳನ್ನು ನೀಡುತ್ತಾನೆ. ಉಪಯೋಗಿಸಿಕೊಂಡು ಮುನ್ನಡೆಯುವಂಥ ಸಂದರ್ಭಗಳನ್ನು ಕೊಡುತ್ತಾನೆ. ಕೆಲವರು ಚಿನ್ನದಂಥ ಸಮಯವನ್ನು ನಿದ್ದೆ ಮಾಡಿ ಕಳೆದುಬಿಡುತ್ತಾರೆ. ವ್ಯರ್ಥಮಾಡಿಬಿಡುತ್ತಾರೆ. ಮೂಲಪಿತೃವಾದ ಯಾಕೋಬನು, "ನಾನು ಲೋಕದಲ್ಲಿ ಸಂಚಾರ ಮಾಡಿದ್ದು ನೂರಮೂವತ್ತು ವರ್ಷಗಳೇ; ನಾನು ಜೀವಿಸಿರುವ ಕಾಲವು ಸ್ವಲ್ಪವಾಗಿಯೂ, ದುಃಖಕರವಾಗಿಯೂ ಇತ್ತು." (ಆದಿ.47:9) ಎಂದನು. ದಾವೀದನು ಹೇಳಿದನು, "ನನ್ನ ಆಯುಸ್ಸನ್ನು ಗೇಣುದ್ದವಾಗಿ ಮಾಡಿದ್ದೀಯಲ್ಲಾ; ನನ್ನ ಜೀವಿತಕಾಲ ನಿನ್ನ ಎಣಿಕೆಯಲ್ಲಿ ಏನೂ ಅಲ್ಲ ಎಂದೆನು. ಮನುಷ್ಯನೆಂಬವನು ಎಷ್ಟು ಸ್ಥಿರನೆಂದು ಕಂಡರೂ ಬರೀ ಉಸಿರೇ" (ಕೀರ್ತ.39:5).

ಭಕ್ತನಾದ ಯೋಬನು ಹೇಳಿದನು, "ನನ್ನ ದಿವಸಗಳು ಮಗ್ಗದ ಲಾಳಿಗಿಂತ ವೇಗವಾಗಿ ನಿರೀಕ್ಷೆಯಿಲ್ಲದೆ ಕಳೆದು ಹೋಗುತ್ತವೆ" (ಯೋಬ.7:6). ಮೋಶೆಯು ಹೇಳಿದನು, "ಅದು ಉದಯದಲ್ಲಿ ಬೆಳೆದು ಹೂಬಿಡುತ್ತದೆ; ಸಂಜೆಯಲ್ಲಿ ಕೊಯ್ಯಲ್ಪಟ್ಟು ಒಣಗಿ ಹೋಗುತ್ತದೆ" (ಕೀರ್ತ.90:6). ಅಪೊ. ಪೌಲನು ಆಶ್ಚರ್ಯಕರವಾದ ಒಂದು ಸತ್ಯವನ್ನು ಹೇಳಿದನು, "ನಾವು ಈಗಿನ ದೇಹದಲ್ಲಿರುವವರೆಗೂ ನರಳುತ್ತೇವೆ. ಪರಲೋಕದಿಂದ ದೊರಕುವ ನಮ್ಮ ನಿವಾಸವನ್ನು ನಾವು ದೇಹದ ಮೇಲೆ ಧರಿಸಿಕೊಳ್ಳಬೇಕೆಂದು ಅಪೇಕ್ಷಿಸುತ್ತೇವೆ" (2ಕೊರಿ.5:2).

ದೇವಮಕ್ಕಳೇ, ಅನೇಕರು ತಮ್ಮ ಜನ್ಮದಿನವನ್ನು ಸಡಗರದಿಂದ ಆಚರಿಸುತ್ತಾರೆ. ಆದರೆ ತಮ್ಮ ಮರಣದ ದಿನವನ್ನು ಕುರಿತು ಯೋಚಿಸುವದೂ ಇಲ್ಲ. ಅದನ್ನು ಯೋಚಿಸುವವರು ತಮ್ಮ ಸಮಯವನ್ನು ಸರಿಯಾಗಿ ವೆಚ್ಚ ಮಾಡುವರು.

***ನೆನಪಿಗೆ : "ಒಂದೇ ಸಾರಿ ಸಾಯುವದೂ, ಆ ಮೇಲೆ ನ್ಯಾಯತೀರ್ಪೂ ಮನುಷ್ಯರಿಗೆ ಹೇಗೆ ನೇಮಕವಾಗಿದೆಯೋ...." (ಇಬ್ರಿ.9:27).***

ಡಿಸೆಂಬರ್ 4

# ತಡ ಮಾಡಬೇಡಿರಿ!

ಬೆಳಿಗ್ಗೆ : ಯೆಹೆ. 47,48
ಸಂಜೆ : 1 ಯೋಹಾ.3

**"ಅವನು ತಡಮಾಡಲು, ಯೆಹೋವನು ಅವನನ್ನು ಕನಿಕರಿಸಿದ್ದರಿಂದ, ಆ ಮನುಷ್ಯರು ಅವನನ್ನೂ, ಅವನ ಹೆಂಡತಿ ಮಕ್ಕಳನ್ನೂ ಕೈಹಿಡಿದು ಹೊರಗೆ ತಂದು ಊರಾಚೆಗೆ ಬಿಟ್ಟರು." (ಆದಿ. 19:16).**

"ದಿನಗಳನ್ನು ಎಣಿಸುವ ಅರಿವು" ನಿಮಗಿರುವದಾದರೆ, ನೀವು ಕಾಲಗಳನ್ನು ವ್ಯರ್ಥಮಾಡುವದಿಲ್ಲ, ತಡಮಾಡುವದಿಲ್ಲ. ಮಾಡಲು ಬಯಸುವ ಕಾರ್ಯಗಳನ್ನು ಕ್ಲುಪ್ತ ಸಮಯದಲ್ಲಿ ತ್ವರೆಯಾಗಿ ಮಾಡಿ ಮುಗಿಸುವಿರಿ. ಸೊದೋಮ್ ಗೊಮೋರ ಪಟ್ಟಣವು ನಾಶನಕ್ಕಾಗಿ ನೇಮಿಸಲ್ಪಟ್ಟಿತ್ತು ಎಂಬದನ್ನು ತಿಳಿಯದ ಲೋಟನ ಕುಟುಂಬದವರು ತಡಮಾಡುತ್ತಿದ್ದರು. ಸಮಯವನ್ನು ವ್ಯರ್ಥಮಾಡುತ್ತಿದ್ದರು. ಆದರೆ ಕಾಲದ ಪ್ರಾಮುಖ್ಯತೆಯನ್ನು ತಿಳಿದಿದ್ದ ದೇವದೂತನು, ಅವರನ್ನು ಕೈಹಿಡಿದು ಹೊರಗೆ ತಂದು ಬಿಟ್ಟನು.

ಸೊದೋಮ್ ಗೊಮೋರ್ ಪಟ್ಟಣದ ಪಾಪವು, ಆಕಾಶದವರೆಗೂ ಮುಟ್ಟಿತು. ಅದರ ಮೊರೆಯು ಬಹಳ ದೊಡ್ಡದಾಗಿತ್ತು. ಆದ್ದರಿಂದ, ಕರ್ತನು ಆ ಪಟ್ಟಣವನ್ನು ಸಂಪೂರ್ಣವಾಗಿ ನಾಶಮಾಡಲು ಚಿತ್ತಗೊಂಡನು. ಅಷ್ಟು ದೊಡ್ಡ ಪಟ್ಟಣದಲ್ಲಿ ಒಂದೇ ಒಂದು ನೀತಿವಂತ ಮಾತ್ರವೇ ಇದ್ದನು. ಅವನ ಹೆಸರು ಲೋಟನು. ಕರ್ತನು ದುಷ್ಟರ ಸಂಗಡ ನೀತಿವಂತನಾದ ಲೋಟನನ್ನು ನಾಶಮಾಡಲು ಬಯಸದೆ, ಅವನನ್ನೂ ಅವನ ಕುಟುಂಬವನ್ನೂ ಸಂರಕ್ಷಿಸಲು ಚಿತ್ತಗೊಂಡನು. ಕರ್ತನಿಂದ ಕಳುಹಿಸಲ್ಪಟ್ಟ ದೂತರು ಲೋಟನನ್ನು ನೋಡಿ, "ನೀನೆದ್ದು, ಇಲ್ಲಿರುವ ನಿನ್ನ ಹೆಂಡತಿಯನ್ನೂ, ನಿನ್ನ ಇಬ್ಬರು ಹೆಣ್ಣುಮಕ್ಕಳನ್ನೂ ಬೇಗ ಕರಕೊಂಡು ಹೋಗು, ಊರಿಗೆ ಉಂಟಾಗುವ ದಂಡನೆಯಿಂದಲೂ ನಿನಗೂ ನಾಶವುಂಟಾದೀತು ಎಂದು ಹೇಳಿ ತ್ವರೆಪಡಿಸಿದರು" (ಆದಿ. 19:15).

ದೇವಮಕ್ಕಳೇ, ಲೋಕದ ಅಂತ್ಯದ ಬಗ್ಗೆ ತಿಳಿದಿರುವ ಪವಿತ್ರಾತ್ಮನು ನಿಮ್ಮನ್ನು ತ್ವರೆಪಡಿಸುತ್ತಿದ್ದಾನೆ. ನಾವು ಜೀವಿಸುತ್ತಿರುವ ಈ ಲೋಕವು ಸ್ಫೋಟಗೊಂಡು ಸಿಡಿಯಲು ಸಿದ್ಧವಾಗಿದೆ. ನ್ಯಾಯ ತೀರ್ಪಿನ ದಿನವು ಹತ್ತಿರವಾಗಿದೆ. "ನನ್ನ ಪ್ರಿಯಳೇ, ಎದ್ದು ಬಾ" ಎಂದು ಕರ್ತನು ಕರೆಯುತ್ತಾನೆ. ಪ್ರಿಯರೇ, ದೀಕ್ಷಾಸ್ನಾನ ಹೊಂದಲು ತಡಮಾಡಬೇಡಿರಿ. ಕರ್ತನೊಂದಿಗೂ, ಮನುಷ್ಯರೊಂದಿಗೂ ಸಮಾಧಾನವಾಗಲು ತಡಮಾಡಬೇಡಿರಿ. ಯಾರ ಮೇಲೆ ಕೋಪ, ದ್ವೇಷವಿದೆಯೋ, ಅದೆಲ್ಲವನ್ನೂ ಸರಿಪಡಿಸಿ ಮುಂದುವರಿಯಲು, ತಡಮಾಡಬೇಡಿರಿ. "Time and tide wait for no man" ಎಂಬದು ಗಾದೆ. ಸಮಯವು ನಮಗಾಗಿ ಕಾಯುವದಿಲ್ಲ. ನಾವೇ ಅದನ್ನು ಉಪಯೋಗಿಸಿಕೊಳ್ಳಬೇಕು.

***ನೆನಪಿಗೆ : "ನೀನಾದರೂ ಸಮಾಧಾನಕ್ಕೆ ಬೇಕಾದದ್ದನ್ನು ಇದೇ ದಿನದಲ್ಲಿ ತಿಳಿದುಕೊಂಡರೆ, ಎಷ್ಟೋ ಒಳ್ಳೇದು". (ಲೂಕ.19:42).***

ಡಿಸೆಂಬರ್ 5

# ಈಗ ನಿನಗೆ ತಿಳಿಯುವದಿಲ್ಲ!

ಬೆಳಿಗ್ಗೆ : ದಾನಿಯೇಲ 1,2
ಸಂಜೆ : 1 ಯೋಹಾ. 4

**"ನಾನು ಮಾಡುವದು ಈಗ ನಿನಗೆ ತಿಳಿಯುವದಿಲ್ಲ, ಇನ್ನು ಮೇಲೆ ನಿನಗೆ ತಿಳಿಯುವದು." ಅಂದನು (ಯೋಹಾ.13:7).**

ಒಮ್ಮೆ ಯೆಸುಕ್ರಿಸ್ತನು, ತನ್ನ ಶಿಷ್ಯರ ಕಾಲುಗಳನ್ನು ತೊಳೆದು ಶುದ್ಧಿ ಮಾಡುತ್ತಿದ್ದನು. ಅದನ್ನು ನೋಡಿದ ಪೇತ್ರನು ಬೇಸರಗೊಂಡು, "ಸ್ವಾಮೀ ನೀನು ನನ್ನ ಕಾಲುಗಳನ್ನು ತೊಳೆಯಬೇಕೇ? ಅಂದನು". ಅದಕ್ಕೆ ಯೇಸು, "ನಾನು ಮಾಡುವದು ಈಗ ನಿನಗೆ ತಿಳಿಯುವದಿಲ್ಲ, ಇನ್ನು ಮೇಲೆ ನಿನಗೆ ತಿಳಿಯುವದು ಅಂದನು". ನಮ್ಮ ಜೀವಿತದಲ್ಲಿಯೂ ಸಹ, ಅನೇಕ ಸಾರಿ, "ಯಾಕೆ ನನಗೆ ಹೀಗೆ ಸಂಭವಿಸುತ್ತಿದೆ? ನನಗೆ ಯಾಕೆ ಈ ಕಷ್ಟ? ನಿಷ್ಕಾರಣವಾಗಿ ನಷ್ಟವಾಯಿತಲ್ಲಾ? ಎಂದು ಹೇಳಿ ಕಳವಳಗೊಳ್ಳುತ್ತೇವೆ.

ಲಾಜ಼ರನು ಬಹಳ ಅಸ್ವಸ್ಥನಾದ ಕೂಡಲೇ, ಅವನ ಸಹೋದರಿಗಳು, ಯೇಸುವಿನ ಬಳಿಗೆ ಹೇಳಿ ಕಳುಹಿಸಿದರು. "ಆತನು ಯಾಕೆ ತಕ್ಷಣವೇ ಬರಲಿಲ್ಲ? ಯಾಕೆ ಅವನನ್ನು ಗುಣಪಡಿಸಲಿಲ್ಲ? ಎಂದು ಅವನ ಸಹೋದರಿಯರು ವ್ಯಾಕುಲಪಟ್ಟರು. ಯೇಸುಸ್ವಾಮಿ ಬಂದರೂ ಅವರ ಸಂಗಡ ಸೇರಿ ಕಣ್ಣೀರು ಸುರಿಸುತ್ತಿದ್ದನು. ಆದರೆ ನಾಲ್ಕನೇ ದಿವಸ ಲಾಜ಼ರನನ್ನು ಜೀವದಿಂದ ಎಬ್ಬಿಸಿದಾಗ, ಕರ್ತನ ನಾಮವು ಮಹಿಮೆಗೊಂಡಿತು. ಯೆಹೂದ್ಯರ ನಂಬಿಕೆಯೇನು? ಒಬ್ಬನು ಸತ್ತರೂ ಅವನ ಆತ್ಮವು ಮೂರು ದಿನಗಳವರೆಗೂ ಈ ಭೂಮಿಯಲ್ಲೇ ಸಂಚರಿಸುವದು. ನಾಲ್ಕು ದಿನಗಳಾದರೆ, ಖಂಡಿತವಾಗಿಯೂ ಅವನನ್ನು ಎಬ್ಬಿಸಲು ಸಾಧ್ಯವಿಲ್ಲ" ಎಂದು ಭಾವಿಸುತ್ತಿದ್ದರು. ಯೇಸುಸ್ವಾಮಿಯು ಅದನ್ನು ಮೀರಿ ನಾಲ್ಕನೇ ದಿನದಲ್ಲಿ ಅವನನ್ನು ಜೀವದಿಂದ ಎಬ್ಬಿಸಿದ್ದರಿಂದ ಅದು ದೊಡ್ಡ ಅದ್ಭುತವಾಗಿದ್ದಿತು. ಅನೇಕರು ಕರ್ತನ ಮೇಲೆ ನಂಬಿಕೆಯಿಟ್ಟರು.

ಅನೇಕ ಸಮಯಗಳಲ್ಲಿ ಕಾರಣವನ್ನು ತಿಳಿಯದೆ, ಯಾಕೆ ಹೀಗೆ ಸಂಭವಿಸಿತು ಎಂದು ಕರ್ತನ ಮೇಲೆ ದೂರು ಹೇಳಬಹುದು. ಆದರೆ ಕರ್ತನನ್ನು ಪ್ರೀತಿಸುವವರಿಗೆ ಸಕಲವೂ ಹಿತಕ್ಕಾಗಿಯೇ ಸಂಭವಿಸುತ್ತದೆ. ಯೋಸೇಫನು ಹೆಚ್ಚು ಕಡಿಮೆ 13 ವರ್ಷಗಳು ಸೆರೆಮನೆಯಲ್ಲಿದ್ದನು, ಎಂದು ವಿದ್ವಾಂಸರು ಹೇಳುತ್ತಾರೆ. "ಪರಿಶುದ್ಧತೆಗಾಗಿ ವೈರಾಗ್ಯವಾಗಿ ನಿಂತ ನನಗೆ ಯಾಕೇ ಇಂತಹ ಬಾಧೆಗಳು?" ಎಂದು ಯೋಸೇಫನು ವೇದನೆಪಟ್ಟಿರಬಹುದು. ಆದರೆ ಕರ್ತನೋ, ಅವನನ್ನು ಉನ್ನತಿಗೊಳಿಸಿ, ಹೆಚ್ಚಳಪಡಿಸಲು ಅದು ಒಂದು ಕಾರಣವಾಗಿತ್ತು. ನಮ್ಮ ಹೃದಯದಲ್ಲೂ ಅನೇಕ ಪ್ರಶ್ನೆಗಳಿರಬಹುದು. ಆದರೆ ನಾವು ನಿತ್ಯಕ್ಕೆ ಹೋಗುವಾಗ, ಕರ್ತನು ಎಷ್ಟು ಜ್ಞಾನದಿಂದ, ಮುಂಚಿತವಾಗಿಯೇ ಎಲ್ಲವನ್ನೂ ತಿಳಿದು, ನಮ್ಮನ್ನು ನಡಿಸಿದ್ದಾನೆ ಎಂಬದನ್ನು ಎಣಿಸಿ ಸ್ತುತಿಸುವೆವು.

***ನೆನಪಿಗೆ : "ನನ್ನ ಆಲೋಚನೆಗಳು ನಿಮ್ಮ ಆಲೋಚನೆಗಳಲ್ಲ, ನಿಮ್ಮ ಮಾರ್ಗಗಳು ನನ್ನ ಮಾರ್ಗಗಳಲ್ಲ" (ಯೆಶಾ.55:8).***

ಡಿಸೆಂಬರ್ 6

# ಉನ್ನತವಾದವು!

ಬೆಳಿಗ್ಗೆ : ದಾನಿ. 3,4
ಸಂಜೆ : 1 ಯೋಹಾ. 5

**"ಭೂಮಿಯ ಮೇಲೆ ಆಕಾಶವು ಎಷ್ಟು ಉನ್ನತವೋ, ನಿಮ್ಮ ಮಾರ್ಗಗಳಿಗಿಂತ ನನ್ನ ಮಾರ್ಗಗಳೂ, ನಿಮ್ಮ ಆಲೋಚನೆಗಳಿಗಿಂತ ನನ್ನ ಆಲೋಚನೆಗಳೂ ಅಷ್ಟು ಉನ್ನತವಾಗಿವೆ." (ಯೆಶಾ.55:9).**

ಅನೇಕ ಸಮಯಗಳಲ್ಲಿ, ಕರ್ತನ ಮಾರ್ಗಗಳನ್ನು ತಿಳಿದುಕೊಳ್ಳಲು ಸಾಧ್ಯವಿಲ್ಲ. ನಾವು ಯಾವಾಗಲೂ ಸಮಭೂಮಿಯನ್ನೇ ಬಯಸುವೆವು. ಹಳ್ಳ ದಿಣ್ಣೆಗಳನ್ನೋ, ಏರಿಳಿತಗಳನ್ನೋ ಬಯಸುವದಿಲ್ಲ. "ಎಲ್ಲವೂ ಒಳ್ಳೆಯದಕ್ಕಾಗಿಯೇ, ತಕ್ಷಣವೇ ಸಂಭವಿಸಬೇಕು, ನಾವು ಬಯಸುವದನ್ನು ಸಾಧಿಸಬೇಕು" ಎಂದು ಅವಸರ ಪಡುವೆವು. ಆದರೆ ಕರ್ತನ ಮಾರ್ಗಗಗಳು ಆಶ್ಚರ್ಯಕರ. "ಯೆಹೋವನು ಬಿರುಗಾಳಿಯಲ್ಲಿಯೂ, ತುಫಾನಿನಲ್ಲಿಯೂ ನಡೆಯುತ್ತಾನೆ" (ನಹೂ.1:3) ಎಂದು ಸತ್ಯವೇದದಲ್ಲಿ ನಾವು ಓದುತ್ತೇವೆ.

ನನ್ನ ಯೌವನ ಪ್ರಾಯದಲ್ಲಿ, ಮದುವೆಗಾಗಿ ನನಗೊಂದು ಹೆಣ್ಣನ್ನು ನೋಡಿದರು. ನನ್ನ ತಂದೆ ತಾಯಿಗೆ ಬಹಳ ಇಷ್ಟವಿತ್ತು. ಹೆಣ್ಣಿಗೂ ಅವರ ಮನೆಯವರಿಗೂ ಇದರಲ್ಲಿ ಪೂರ್ಣ ಸಮ್ಮತಿ ಇತ್ತು. ಆದರೆ ಮದುವೆಯು ನಡೆಯುವ ಸಮಯ ಬಂದಾಗ, ಹೆಣ್ಣಿನ ತಂದೆಯು, "ನಾನು ಕೆಟ್ಟ ಕನಸನ್ನು ಕಂಡೆನು" ಎಂದು ಹೇಳಿ, ಮದುವೆಯನ್ನು ನಿಲ್ಲಿಸಿಬಿಟ್ಟರು. ನನ್ನ ಮನೆಯವರಿಗೆ ಬಹಳ ವೇದನೆಯಾಗಿತ್ತು. "ಯಾಕೆ ಹೀಗೆ ಸಂಭವಿಸಿತು? "ಯಾವ ಕೆಟ್ಟ ಕನಸದು?" ಎಂದು ತಿಳಿಯದೆ ಕಳವಳಗೊಂಡೆವು. ಮೂವತ್ತು ವರ್ಷಗಳು ಕಳೆದವು.

ಮೂವತ್ತು ವರ್ಷಗಳ ನಂತರ, ಒಂದು ದಿನ ಆ ಸಹೋದರಿಯು, ಅನಿರೀಕ್ಷಿತವಾಗಿ ನನ್ನ ಕಚೇರಿಗೆ ಬಂದಿದ್ದಳು. ತನ್ನ ಡೈರಿಯನ್ನು ಕಚೇರಿಯಲ್ಲಿಯೇ ಮರೆತು ಬಿಟ್ಟು ಹೋದಳು. ಅದನ್ನು ತೆರೆದು ನೋಡಿದಾಗ, ಆಕೆಯ ಜೀವಿತವು ಎಷ್ಟು ತಪ್ಪಾದದ್ದೆಂಬದನ್ನೂ, ಸಿನಿಮಾ ಹುಚ್ಚಿಯಾಗಿ ಅನೇಕ ಯೌವನಸ್ಥರ ಸಂಗಡ ತಿರುಗಾಡಿದ್ದನ್ನು ಬರೆದಿಟ್ಟಿದ್ದಳು. ಆಗಲೇ ದೇವರು ನನ್ನನ್ನು ಆ ಮದುವೆಯಿಂದ ಕಾಪಾಡಿದನೆಂಬದನ್ನು ತಿಳಿದುಕೊಂಡೆನು. ಆಕೆಯನ್ನು ಮದುವೆ ಮಾಡಿದ್ದರೆ, ನನ್ನ ಜೀವನ ಸೇವೆ ಎಲ್ಲವೂ ನಾಶವಾಗುತ್ತಿತ್ತು. ದೇವರಿಗೆ ಸಾವಿರ ಕೋಟಿ ಸ್ತೋತ್ರಗಳನ್ನು ಸಲ್ಲಿಸಿದೆನು. ಸತ್ಯವೇದವು ಹೇಳುತ್ತದೆ: "ಮನುಷ್ಯ ದೃಷ್ಟಿಗೆ ಸರಳವಾಗಿ ತೋರುವ ಒಂದು ದಾರಿಯುಂಟು; ಅದು ಕಟ್ಟಕಡೆಗೆ ಮರಣ ಮಾರ್ಗವೇ." (ಜ್ಞಾನೋ.14:12). ದೇವಮಕ್ಕಳೇ, ನೀವು ಕರ್ತನನ್ನು ಪ್ರೀತಿಸುವದಾದರೆ, ತನ್ನನ್ನು ಪ್ರೀತಿಸುವವರಿಗೆ ಆತನು ಎಲ್ಲವನ್ನೂ ಒಳ್ಳೆಯದಕ್ಕಾಗಿಯೇ ಮಾಡುತ್ತಾನೆ.

***ನೆನಪಿಗೆ : "ಅದು ಯಾವದಂದರೆ, ದೇವರು ನಮ್ಮ ಮಹಿಮೆಗಾಗಿ ಲೋಕೋತ್ಪತ್ತಿಗಿಂತ ಮೊದಲೇ ನೇಮಿಸಿ ಇದುವರೆಗೆ ಮರೆಮಾಡಿದ ಜ್ಞಾನವೇ" (1 ಕೊರಿಂ.2:7).***

ಡಿಸೆಂಬರ್
7

# ಪ್ರೀತಿಸುವವರಿಗೆ!

ಬೆಳಿಗ್ಗೆ : ದಾನಿ. 5,6,7
ಸಂಜೆ : 2 ಯೋಹಾ. 1

**"ದೇವರು ತನ್ನನ್ನು ಪ್ರೀತಿಸುವವರಿಗಾಗಿ ಸಿದ್ಧ ಮಾಡಿರುವಂಥದೆಲ್ಲವನ್ನು ಕಣ್ಣು ಕಾಣಲಿಲ್ಲ, ಕಿವಿ ಕೇಳಲಿಲ್ಲ, ಅದರ ಭಾವನೆಯು ಮನುಷ್ಯನ ಹೃದಯದಲ್ಲಿ ಹುಟ್ಟಲಿಲ್ಲ" (1 ಕೊರಿಂ.2:9).**

ಕೆಲವು ಕಾರ್ಯಗಳನ್ನು ನಮ್ಮ ಕಣ್ಣಿನಿಂದ ಕಾಣುತ್ತೇವೆ. ಕೆಲವನ್ನು ಕಿವಿಗಳಿಂದ ಕೇಳುತ್ತೇವೆ. ಕೆಲವು ನಮ್ಮ ಹೃದಯದಲ್ಲಿ ಹುಟ್ಟುತ್ತವೆ. ಆದರೆ ಇವುಗಳನ್ನು ದಾಟಿ ನಂಬಿಕೆಯ ಮೂಲಕ, ಕರ್ತನ ಮಾರ್ಗಗಳನ್ನು ನಾವು ತಿಳಿದುಕೊಳ್ಳುತ್ತೇವೆ. ಅದು ಆಶ್ಚರ್ಯಕರ. ಯೇಸುಸ್ವಾಮಿಯು ಯಾಕೆ ಶಿಷ್ಯರ ಕಾಲುಗಳನ್ನು ತೊಳೆದನು? ಎಂದು ಶಿಷ್ಯರಿಗೆ ಅರ್ಥವಾಗಲಿಲ್ಲ. ನೀರಿನಿಂದ ತಮ್ಮ ಕಾಲುಗಳನ್ನು ತೊಳೆದಾತನೇ, ಒಂದು ದಿನ ತನ್ನ ಅಮೂಲ್ಯವಾದ ರಕ್ತದಿಂದ ತಮ್ಮ ಹೃದಯವನ್ನು ತೊಳೆದು, ಪಾಪಗಳನ್ನು ನೀಗಿಸಿ ಶುದ್ಧೀಕರಿಸುವನು ಎಂಬದು ಅವರಿಗೆ ಅರ್ಥವಾಗಲಿಲ್ಲ. ಕರ್ತನ ಮಾರ್ಗಗಳು ಆಶ್ಚರ್ಯಕರ.

ಅನೇಕ ಸಮಯಗಳಲ್ಲಿ ನಾವೂ ಸಹ ಯಾಕೆ, ಯಾಕೆ ಎಂದು ಅನೇಕ ಪ್ರಶ್ನೆಗಳನ್ನು ಕೇಳಬಹುದು. ಕೆಲವು ರಹಸ್ಯಗಳನ್ನು ನಂಬಿಕೆಯ ಮೂಲಕವಾಗಿಯೂ, ಪವಿತ್ರಾತ್ಮನ ಮೂಲಕವಾಗಿಯೂ ನಾವು ತಿಳಿದುಕೊಳ್ಳಬಹುದು. ಅಪೊ. ಪೌಲನು ಬರೆಯುತ್ತಾನೆ, "ನಮಗಾದರೋ ದೇವರು ತನ್ನ ಆತ್ಮನ ಮೂಲಕ ಅದನ್ನು ಪ್ರಕಟಿಸಿದನು. ಆ ಆತ್ಮನು ಎಲ್ಲಾ ವಿಷಯಗಳನ್ನು, ದೇವರ ಅಗಾಧವಾದ ವಿಷಯಗಳನ್ನು ಕೂಡ ಪರಿಶೋಧಿಸುವವನಾಗಿದ್ದಾನೆ" (1ಕೊರಿಂ.2:10). ದೇವಮಕ್ಕಳೇ, ಪವಿತ್ರಾತ್ಮನನ್ನು ಹೊಂದಿರುವದೂ, ಆತ್ಮನಿಂದ ನಡಿಸಲ್ಪಡುವದೂ, ಎಷ್ಟೊಂದು ಭಾಗ್ಯ! ಅಂಥವರಿಗಾಗಿ ಕರ್ತನು ಪ್ರಕಟನಾ ವರಗಳನ್ನು ಇಟ್ಟಿರುವನು.

ಒಂದು ವೇಳೆ ನೀವು ವರಗಳನ್ನು ಪಡೆಯದಿದ್ದರೂ, ಕರ್ತನನ್ನು ನಂಬಿಕೆಯಿಂದ ಆತುಕೊಳ್ಳಿರಿ. "ಕರ್ತನೇ, ನೀನು ನನ್ನ ತಂದೆಯಾಗಿದ್ದೀ, 'ಅಪ್ಪಾ, ತಂದೆಯೇ' ಎಂದು ಕೂಗುವ ಪುತ್ರಸ್ವೀಕಾರಾತ್ಮನನ್ನು ನನಗೆ ಕೊಟ್ಟಿದ್ದೀ. ಈಗ ಏನು ಮಾಡುತ್ತಿದ್ದೀ ಎಂಬದನ್ನು ನನಗೆ ತಿಳಿಯದಿದ್ದರೂ, ನಾನು ನಿನ್ನ ಮಗುವಾಗಿರುವದರಿಂದ, ನನಗೆ ಒಳ್ಳೇದನ್ನೇ ಮಾಡುವಿ. ಪ್ರತಿಯೊಂದನ್ನೂ, ಅದರದರ ಕಾಲದಲ್ಲಿ ಬಹಳ ಅಂದವಾಗಿ ಮಾಡಿ ಮುಗಿಸುವಿ" ಎಂದು ಹೇಳಿ ನಂಬಿಕೆಯಿಂದ ಆತನನ್ನು ಹಿಡಿದುಕೊಳ್ಳಿರಿ. ಕಾನಾ ಊರಿನ ಮದುವೆಯಲ್ಲಿ ದ್ರಾಕ್ಷಾರಸದ ಕೊರತೆ ಬಂದಾಗ, ಆತನ ಸಮಯವು ಬರುವದಕ್ಕಾಗಿ ಕಾದಿದ್ದನು. ಸಮಯವು ಬಂದಾಗ ನೀರನ್ನು ದ್ರಾಕ್ಷಾರಸವನ್ನಾಗಿಸಿದನು.

***ನೆನಪಿಗೆ : "ನಾವು ಪ್ರಾಪಂಚಿಕ ಆತ್ಮವನ್ನು ಹೊಂದದೆ, ದೇವರು ನಮಗೆ ದಯಪಾಲಿಸಿರುವ ಕೃಪಾವರಗಳನ್ನು... ಆತ್ಮವನ್ನೇ ಹೊಂದಿದೆವು" (1ಕೊರಿಂ.2:12)***

ಡಿಸೆಂಬರ್ 8

# ನಿರುತ್ಸಾಹ ಬೇಡ!

ಬೆಳಿಗ್ಗೆ : ದಾನಿ. 8,9,10
ಸಂಜೆ : 3 ಯೋಹಾ. 1

**"ನಾವು ಹಿಂಸೆ ಪಡುವವರಾಗಿದ್ದರೂ, ಕೈಬಿಡಲ್ಪಟ್ಟವರಲ್ಲ; ಕೆಡವಲ್ಪಟ್ಟವರಾಗಿದ್ದರೂ ಪ್ರಾಣನಷ್ಟಪಡುವವರಲ್ಲ". (2ಕೊರಿಂ.4:9).**

ಕ್ರೈಸ್ತ ಮಾರ್ಗದಲ್ಲಿ, ನಿಮ್ಮನ್ನು ಪ್ರೋತ್ಸಾಹಿಸಲು ದೇವದೂತರಿದ್ದಾರೆ, ದೇವರ ಪ್ರಸನ್ನತೆಯು ಇದೆ, ಪವಿತ್ರಾತ್ಮನಿದ್ದಾನೆ. ಆದ್ದರಿಂದ ನಿರುತ್ಸಾಹಗೊಂಡು, ಓಟವನ್ನು ಮಧ್ಯದಲ್ಲೇ ನಿಲ್ಲಿಸಬೇಡಿ.

ಆಸ್ಟ್ರೇಲಿಯಾದಲ್ಲಿ, ಕಾಂಗೂರು ಎಂಬ ಪ್ರಾಣಿಯೊಂದುಂಟು. ಅದು ಬಹಳ ಶಕ್ತಿಶಾಲಿ. ವೇಗವಾಗಿ ಓಡುವಂಥದ್ದಾಗಿದ್ದರೂ, ಬೇಗನೆ ಸೋತು ಹೋಗುತ್ತದೆ. ಅದನ್ನು ಅಟ್ಟಿಸುತ್ತಾ ಬರುವ 'ಟಿಂಕೋ' ಎಂಬ ಕಾಡುನಾಯಿ, ಕಾಂಗೂರಿನ ಹಾಗೆ ಓಡಲಾಗದಿದ್ದರೂ, ಸತತವಾಗಿ ಪ್ರಯತ್ನಿಸಿ ಓಡುತ್ತಲೇ ಇರುತ್ತದೆ. ಕಾಂಗೂರು ಸ್ವಲ್ಪ ದೂರ ಓಡಿದ ನಂತರ ನಿಂತುಬಿಡುತ್ತದೆ. ಕಾಡುನಾಯಿಯನ್ನು ಎದುರಿಸಿ ಜಗಳವಾಡದೆ ಹಿಂಜರಿಯುವದರಿಂದ ಅದು ಕಾಡುನಾಯಿಯ ಆಹಾರವಾಗಿಬಿಡುತ್ತದೆ. ಕ್ರೈಸ್ತ ಜೀವಿತದಲ್ಲಿ ಸೈತಾನನು ನಿಮ್ಮನ್ನು ಅಟ್ಟಿಕೊಂಡೇ ಬರಬಹುದು. ಪಾಪಗಳು, ಭಾರಗಳು, ಇನ್ನು ಈ ಕ್ರೈಸ್ತ ಜೀವಿತವನ್ನು ಮುಂದುವರಿಸಲು ಸಾಧ್ಯವಿಲ್ಲ ಎಂಬ ಪರಿಸ್ಥಿತಿಗೆ ನಿಮ್ಮನ್ನು ಕೊಂಡುಬರಬಹುದು. ಆದರೂ ಪ್ರಯತ್ನವನ್ನು ಬಿಡಬೇಡಿ. ಕರ್ತನ ಪವಿತ್ರಾತ್ಮನನ್ನು ಆತುಕೊಳ್ಳಿರಿ. ನಿಮ್ಮ ಶರೀರವಾಗಿರುವ ಮಣ್ಣಿನ ಮಡಿಕೆಗಳಲ್ಲಿ ದೇವರ ಮಹತ್ವವಾದ ಬಲವನ್ನು ಹೊಂದಿದ್ದೀರಿ. ಅಭಿಷೇಕವೆಂಬ ನಿಕ್ಷೇಪವು ನಿಮ್ಮೊಳಗಿದೆ. ನೀವು ಅದನ್ನು ಸಂರಕ್ಷಿಸಿ ಕರ್ತನ ಹಸ್ತಗಳಲ್ಲಿ ಒಪ್ಪಿಸಬೇಕು.

ಅನೇಕ ಸಮಯಗಳಲ್ಲಿ ಅಪರಾಧ ಮನಸ್ಸು ನಿಮ್ಮನ್ನು ವಾದಿಸಬಹುದು. ಯಾಕೆ ಮತ್ತೆ ಮತ್ತೆ ನನಗೆ ಇಂತಹ ಶೋಧನೆ? ಯಾಕೆ ನನಗೆ ಸಮಸ್ಯೆಗಳು? ಎಂದು ಚಿಂತಿಸಬಹುದು. ನೀವು ಬಿದ್ದ ಸ್ಥಳದಲ್ಲಿಯೇ ಬಿದ್ದಿರಬಾರದು. ಎದ್ದು ಹೊಸಬಲವನ್ನು ಹೊಂದಿ, ಪುನಃ ಓಡಲು ಕಲಿತುಕೊಳ್ಳಬೇಕು. ಮರವು ಬಿದ್ದ ಸ್ಥಳದಲ್ಲಿಯೇ ಬಿದ್ದಿರುವದು. ನೀವು ಮರವಲ್ಲ. ನೀವು ದೇವಮಕ್ಕಳು. ಕರ್ತನ ರಕ್ತದಿಂದ ವಿಮೋಚಿಸಲ್ಪಟ್ಟವರು. ಕರ್ತನ ಕೃಪೆಯನ್ನು ಆತುಕೊಂಡು ಕೊನೆಯವರೆಗೂ ನೀವು ಓಡುವವರಾಗಿರಬೇಕು. ಪ್ರವಾದಿಯಾದ ಮೀಕನು, ಸೈತಾನನಿಗೆ ಸವಾಲು ಬಿಟ್ಟು ಹೇಳುತ್ತಾನೆ. "ನನ್ನ ಶತ್ರುವೇ ನನ್ನ ವಿಷಯದಲ್ಲಿ ಹಿಗ್ಗಬೇಡ; ನಾನು ಬಿದ್ದಿದ್ದರೂ ಏಳುವೆನು, ಕತ್ತಲಲ್ಲಿ ಕೂತಿದ್ದರೂ, ಯೆಹೋವನು ನನಗೆ ಬೆಳಕಾಗಿರುವನು". (ಮೀಕ.7:8).

ದೇವಮಕ್ಕಳೇ, ಎಷ್ಟೇ ನೀವು ನಿರುತ್ಸಾಹಗೊಂಡಿದ್ದರೂ, ದೈವಬಲದೊಂದಿಗೂ ನೂತನ ನಿರ್ಧಾರದೊಂದಿಗೂ ಏಳಿರಿ. ಕರ್ತನು ತನ್ನ ಪುನರುತ್ಥಾನದ ಶಕ್ತಿಯಿಂದ ನಿಮ್ಮನ್ನು ನಿಲ್ಲಿಸುವನು.

***ನೆನಪಿಗೆ : "ಇಗೋ ಶ್ವಾಸವು ಅವುಗಳಲ್ಲಿ ಹೊಕ್ಕಿತು, ಬದುಕಿದವು, ಕಾಲೂರಿ ನಿಂತವು, ಅತ್ಯಂತ ದೊಡ್ಡ ಸೈನ್ಯವಾದವು." (ಯೆಹೆ.37:10).***

ಡಿಸೆಂಬರ್ 9

# ದೇವರಲ್ಲಿ ಪ್ರೀತಿ!

ಬೆಳಿಗ್ಗೆ : ದಾನಿ. 11, 12
ಸಂಜೆ : ಯೂದ. 1

**"ಪ್ರೀತಿಯಿಲ್ಲದವನು ದೇವರನ್ನು ಬಲ್ಲವನಲ್ಲ; ಯಾಕಂದರೆ ದೇವರು ಪ್ರೀತಿಸ್ವರೂಪಿಯು" (1ಯೋಹಾ.4:8).**

ಒಬ್ಬ ಬೋಧಕರು ಕರ್ತನ ನಾಮದ ಮೇಲಿಟ್ಟ ಪ್ರೀತಿಯ ನಿಮಿತ್ತವಾಗಿಯೂ ಮತ್ತು ನಂಬಿಕೆ ನಿಮಿತ್ತವಾಗಿಯೂ, ಇಪ್ಪತ್ತು ವರ್ಷಗಳಿಗೂ ಹೆಚ್ಚಾಗಿ ಸೆರೆವಾಸವನ್ನು ಅನುಭವಿಸಿದರು. ಅಲ್ಲಿ ಒಂದು ಸಣ್ಣ ಕೊಠಡಿಯೊಳಗೆ, ಎದ್ದು ನಿಲ್ಲುವದಕ್ಕೂ ಸಾಧ್ಯವಾಗದಂತಹ ಪರಿಸ್ಥಿತಿಯಲ್ಲಿ ಬಹಳ ವೇದನೆಗಳನ್ನು ಅನುಭವಿಸಿದರು. ಪ್ರತಿದಿನವೂ ಅವರನ್ನು ಹೊರಗೆ ಎಳೆದುಕೊಂಡು ಬಂದು ಬೆನ್ನಿನಲ್ಲಿ ಬಹಳವಾಗಿ ಹೊಡೆಯುತ್ತಿದ್ದರು. ಆದ್ದರಿಂದ ಅವರು ಬೆನ್ನು ಬಾಗಿದವರಾದರು.

ಅವರು ಬಿಡುಗಡೆಯಾದ ಮೇಲೆ ಬಹಳ ನೋವಿನೊಂದಿಗೆ, ಬೆನ್ನುಬಾಗಿದವರಾಗಿ ನಡೆದು ಬಂದರು. ದಾರಿಯಲ್ಲಿ ಅವರನ್ನು ನೋಡಿದ ಒಬ್ಬ ಬಾಲಕನು ಹೀಗೆಂದನು. "ಅಂಕಲ್, ನಿಮ್ಮ ಬೆನ್ನಿನಲ್ಲಿ ಏನಿಟ್ಟಿದ್ದೀರಿ? ಯಾಕೆ ನಿಮ್ಮ ಬೆನ್ನು ಅಂಕುಡೊಂಡಾಗಿದೆ?" ಎಂದು ಕೇಳಿದನು. ಬಾಲಕನು ತನ್ನನ್ನು ಪರಿಹಾಸ್ಯ ಮಾಡುತ್ತಿದ್ದಾನೆಂದು ಭಾವಿಸಿ, ನಿಶ್ಶಬ್ದವಾಗಿದ್ದರು. ಬಾಲಕನು ಪುನಃ ಹೇಳಿದನು, "ಅಂಕಲ್ ದೇವರು ಪ್ರೀತಿಸ್ವರೂಪಿಯಾಗಿದ್ದಾನೆ. ಆತನು ನಿಮಗೆ ಅಂಗವಿಕಲತೆಯನ್ನು ಕೊಡಲು ಬಯಸಲಿಲ್ಲ. ಆದರೆ ಬೊಗ್ಗಿರುವ ನಿಮ್ಮ ಬೆನ್ನಿನೊಳಗೆ ಕರ್ತನು ದೇವದೂತರಿಗಿರುವ ಎರಡು ರೆಕ್ಕೆಗಳನ್ನು ಇಟ್ಟಿರುವನು. ಯೇಸುಕ್ರಿಸ್ತನು ಬರುವಾಗ ಆ ರೆಕ್ಕೆಗಳು ಹೊರಬರುವವು. ಆಗ ನೀವು ಹಾರುತ್ತಾ ಪರಲೋಕಕ್ಕೆ ಹೋಗುವಿರಿ. ಕರ್ತನನ್ನು ಪ್ರೀತಿಸುವವರಿಗೆ ಎಲ್ಲಾ ಕಾರ್ಯಗಳೂ ಹಿತಕ್ಕಾಗಿಯೇ ಸಂಭವಿಸುತ್ತವೆ" ಅಂದನು. ಇದನ್ನು ಕೇಳಿದಾಗ ಆ ಬೋಧಕರು ಆನಂದದಿಂದ ಕಣ್ಣೀರು ಬಿಟ್ಟರು.

ಪ್ರತಿಯೊಬ್ಬ ಮನುಷ್ಯನಿಗೂ, ಯಾವುದೋ ಒಂದು ರೀತಿಯಲ್ಲಿ ಕೊರತೆಗಳು ಇದ್ದೇ ಇರುತ್ತವೆ. ಕೆಲವರಿಗೆ ಶಾರೀರಿಕ ರೀತಿಯಾಗಿ, ಕೆಲವರಿಗೆ ಮಾನಸಿಕ ರೀತಿಯಾಗಿ, ಇನ್ನು ಕೆಲವರಿಗೆ ಆತ್ಮೀಕ ರೀತಿಯಾದ ಕೊರತೆಗಳು. ಆ ಕೊರತೆಯು, ಅವರನ್ನು ಇತರರಿಗಿಂತ ಪ್ರತ್ಯೇಕವಾಗಿ ತೋರಿಸುವದು. ಲೋಕರೀತಿಯಾಗಿ ಆ ಕೊರತೆಯನ್ನು ಎಣಿಸಿ ಚಿಂತಿಸಬಹುದು. ಆದರೆ ಅನೇಕ ರಹಸ್ಯಗಳು ನಮಗೆ ತಿಳಿಯುವದಿಲ್ಲ. ಸತ್ಯವೇದವು ಹೇಳುತ್ತದೆ. "ಈಗ ಸ್ವಲ್ಪ ಮಾತ್ರ ನನಗೆ ತಿಳಿದದೆ; ಆಗ ದೇವರು ನನ್ನನ್ನು ಸಂಪೂರ್ಣವಾಗಿ ತಿಳಿದುಕೊಂಡಂತೆ. ನಾನು ಸಂಪೂರ್ಣವಾಗಿ ತಿಳಿದುಕೊಳ್ಳುವೆನು" (1ಕೊರಿಂ.13:12). ಪ್ರಿಯರೇ ಕರ್ತನು ನಿಮಗೆ ಮಾಡಿದಂಥ ಎಲ್ಲವೂ ಒಳ್ಳೆಯದಕ್ಕಾಗಿಯೇ.

***ನೆನಪಿಗೆ : "ಆಗ ದೂತನು – ದೇವರ ದಯೆ ಹೊಂದಿದವಳೇ, ನಿನಗೆ ಶುಭವಾಗಲಿ; ಕರ್ತನು ನಿನ್ನ ಸಂಗಡ ಇದ್ದಾನೆ ಅಂದನು" (ಲೂಕ.1:28).***

ಡಿಸೆಂಬರ್ 10

# ಮೌನ!

ಬೆಳಿಗ್ಗೆ : ಹೋಶೇಯ 1,2,3,4
ಸಂಜೆ : ಪ್ರಕಟಣೆ 1

**"ಆದರೆ ಅವನು ಅನೇಕ ಮಾತುಗಳಿಂದ ಆತನನ್ನು ಪ್ರಶ್ನೆ ಮಾಡಿದಾಗ್ಯೂ ಆತನು ಅವನಿಗೆ ಏನೂ ಉತ್ತರ ಕೊಡಲಿಲ್ಲ" (ಲೂಕ.23:9).**

ಕ್ರಿಸ್ತನ ನಿಮಿತ್ತವಾಗಿ ಒಂಟಿಯಾದ ಸೆರೆಯಲ್ಲಿ, ಶಾಂತವಾದ ವಾತಾವರಣದಲ್ಲಿ ದೇವರೊಂದಿಗೆ ಸಂಚರಿಸುತ್ತಿದ್ದ ಒಬ್ಬ ಭಕ್ತನು, ಹಲವಾರು ವರ್ಷಗಳ ನಂತರ ಬಿಡುಗಡೆಯಾದಾಗ, ಮನುಷ್ಯರು ವ್ಯರ್ಥವಾದ ಮಾತುಗಳು, ಅವರನ್ನು ಬಹಳವಾಗಿ ಬೇಸರಗೊಳಿಸಿತು. ಮತ್ತೆ ಶಾಂತವಾದ ವಾತಾವರಣವನ್ನು ಹುಡುಕಿ ಸೆರೆಮನೆಗೇ ಓಡೋಣವಾ ಎಂದು ಅವರಿಗೆ ತೋಚಿತು. ನೀವು ದೇವರನ್ನು ಹುಡುಕಲು ಬಯಸಿದರೆ, ಶಾಂತಿಯನ್ನು ಆಶಿಸಿರಿ. ನೀವು ಉಪವಾಸಿಸುವಾಗ ಅಥವಾ ಪ್ರಾರ್ಥಿಸುವಾಗ, ನಿಮ್ಮ ಏಕಾಂತವಾದ ಕೋಣೆಯೊಳಗೆ ಹೋಗಿ, ಬಾಗಿಲನ್ನು ಮುಚ್ಚಿಕೊಂಡು ಅಂತರಂಗದಲ್ಲಿಯೂ ಇರುವ ನಿಮ್ಮ ತಂದೆಗೆ ಪ್ರಾರ್ಥನೆ ಮಾಡಿರಿ (ಮತ್ತಾ.6:6). ಇಲ್ಲಿಯೂ ಸಹ ನೀವು ವ್ಯರ್ಥವಾದ ಮಾತುಗಳನ್ನು ಉಪಯೋಗಿಸಬಾರದು. ಸತ್ಯವೇದವು ಹೇಳುತ್ತದೆ, "ನೀವು ಅಂಜಬೇಡಿರಿ, ಸುಮ್ಮನೆ ನಿಂತುಕೊಂಡಿದ್ದು ಯೆಹೋವನು ಈ ಹೊತ್ತು ನಿಮ್ಮನ್ನು ರಕ್ಷಿಸುವ ರೀತಿಯನ್ನು ನೋಡಿರಿ" (ವಿಮೋ.14:13).

ಪ್ರಸಂಗಿಯು ನೀಡುವ ಆಲೋಚನೆಯೇನು? "ಬಾಯಿ ದುಡುಕಬೇಡ, ದೇವರ ಮುಂದೆ ಮಾತಾಡಲು, ನಿನ್ನ ಹೃದಯದಲ್ಲಿ ಆತುರಪಡದಿರು; ದೇವರು ಆಕಾಶದಲ್ಲಿದ್ದಾನಲ್ಲವೇ, ನೀನು ಭೂಮಿಯಲ್ಲಿದ್ದೀ; ಆದಕಾರಣ ನಿನ್ನ ಮಾತುಗಳು ಕೊಂಚವಾಗಿರಲಿ" (ಪ್ರಸ.5:2). ಯೇಸುಕ್ರಿಸ್ತನು ಪ್ರಾರ್ಥಿಸಲು ಬಯಸಿದಾಗ, ನಿಶ್ಶಬ್ದವಾದ, ಮನುಷ್ಯರ ಸಂಚಾರವಿಲ್ಲದಂಥ ಅರಣ್ಯಕ್ಕೆ ಹೋದನು. ರಾತ್ರಿಯ ಸಮಯಗಳಲ್ಲಿ ಬೆಟ್ಟವನ್ನೇರಿ, ದೇವರೊಂದಿಗೆ ಏಕಾಂತವಾಗಿದ್ದನು. ನೀವೂ ಸಹ ದೇವರೊಟ್ಟಿಗೆ ಏಕಾಂತವಾಗಿರುವಾಗ, ಪವಿತ್ರಾತ್ಮನ ಮಂದಮಾರುತ ಶಬ್ದವನ್ನು ಕೇಳುವಿರಿ! ಆತನು ನಿಮಗೆ ಆಲೊಚನೆಗಳನ್ನು ನೀಡುವನು. ಆತನ ಶಬ್ದದ ಹಾಗೆ ಇಂಪಾದ ಶಬ್ದ ಬೇರೊಂದೂ ಇಲ್ಲ.

ನೀವು ಪ್ರಾರ್ಥಿಸುವ ಸಮಯ, ದೇವರ ಸಂಗಡ ಸಂಬಂಧವಿಟ್ಟುಕೊಳ್ಳುವ ಸಮಯವಾಗಿದೆ. ಆ ಸಮಯದಲ್ಲಿ ನಿಮ್ಮ ಮೊಬೈಲ್ ಫೋನ್‌ಗಳನ್ನು ಸ್ವಿಚ್‌ಆಫ್ ಮಾಡಿರಿ. ನೀವು ಪ್ರಾರ್ಥಿಸುತ್ತಿದ್ದೀರಿ ಎಂಬದು ನಿಮ್ಮ ಮನೆಯವರಿಗೆ ತಿಳಿದಿರಲಿ. ಯಾವ ಅಡಚಣೆಗಳೂ ಬಾರದಂತೆ ನೋಡಿಕೊಳ್ಳಿರಿ. ರಾಜಾಧಿರಾಜನ ಸಂಗಡ ಮಾತನಾಡುವ ಆ ಇಂಪಾದ ಸಮಯವು ಯಾವ ರೀತಿಯಲ್ಲೂ ತೊಂದರೆಯಾಗಬಾರದು.

***ನೆನಪಿಗೆ : "ಯೆಹೋವನೋ ತನ್ನ ಪರಿಶುದ್ಧ ಮಂದಿರದಲ್ಲಿದ್ದಾನೆ; ಭೂಲೋಕವೆಲ್ಲಾ ಆತನ ಮುಂದೆ ಮೌನವಾಗಿರಲಿ" (ಹಬ.2:20).***

## ಡಿಸೆಂಬರ್ 11 ಒಂದು ಆಶೀರ್ವಾದವಾದರೂ!

ಬೆಳಿಗ್ಗೆ: ಹೋಶೇಯ 5,6,7,8
ಸಂಜೆ : ಪ್ರಕ. 2

**"ಏಸಾವನು ಅವನಿಗೆ – ಅಪ್ಪಾ, ತಂದೆಯೇ, ನಿನ್ನಲ್ಲಿ ಆ ಒಂದೇ ಆಶೀರ್ವಾದವಿತ್ತೋ? ಅಪ್ಪಾ, ನನ್ನನ್ನು ನನ್ನನ್ನೂ ಆಶೀರ್ವದಿಸಬೇಕು ಎಂದು ಹೇಳಿ ಗೋಳಾಡುತ್ತಾ ಅಳಲು..." (ಆದಿ.27:38).**

ಯಾರು ಈ ಏಸಾವನು? ಮೂಲಪಿತೃವಾದ ಅಬ್ರಹಾಮನ ಸಂತತಿಯಲ್ಲಿ ಬಂದ ಇಸಾಕನ ಮಗನು ಹಿರಿಯ ಮಗನು. ಚೊಚ್ಚಲತನದ ಹಕ್ಕಿನ ಬಾಧ್ಯಸ್ಥನು. ಆದರೆ ಈಗ ಅವನು ಚೊಚ್ಚಲತನದ ಹಕ್ಕನ್ನು ಕಳೆದುಕೊಂಡು, ಕರ್ತನ ಆಶೀರ್ವಾದವನ್ನೂ ಕಳೆದುಕೊಂಡು, ಅಂತ್ಯದಲ್ಲಿ ತಂದೆಯ ಆಶೀರ್ವಾದವನ್ನೂ ಕಳೆದುಕೊಂಡಾಗ, ಗೋಳಾಡಿ ಅತ್ತನು. "ಏಸಾ" ಎಂಬ ಪದಕ್ಕೆ, "ರೋಮವುಳ್ಳವನು" ಎಂದರ್ಥ. ಇಸಾಕನ ಅವಳಿ ಜವಳಿ ಮಕ್ಕಳಲ್ಲಿ ಏಸಾವನೇ ಹಿರಿಯವನು. ತಂದೆಯ ಪ್ರೀತಿಗೆ ಪಾತ್ರನು. ಸಾಮರ್ಥ್ಯವಾದ ಬೇಟೆಗಾರನು ಪರಾಕ್ರಮಶಾಲಿ, ಧೈರ್ಯವಂತ, ಕೆಂಬಣ್ಣದವನು ಮತ್ತು ಅರಣ್ಯವಾಸಿಯಾಗಿದ್ದನು. ಈಗಲೋ ಆಶೀರ್ವಾದವನ್ನು ಕಳೆದುಕೊಂಡನು. ಚಿಕ್ಕ ಮಗುವಿನ ಹಾಗೆ ಅಳುತ್ತಾನೆ.

ಈ ಏಸಾವನ ಬಳಿ, ತಂದೆಯಾದ ಇಸಾಕನು, "ಮಗನೇ, ನಾನು ಮುದುಕನಾದೆನು; ಯಾವಾಗ ಸಾಯುವೆನೋ ಗೊತ್ತಿಲ್ಲ; ಆದದರಿಂದ ನೀನು ಕಾಡಿಗೆ ಹೋಗಿ ಬೇಟೆಯಾಡಿ ನನಗೆ ಇಷ್ಟವಾಗಿರುವ ರುಚಿಪದಾರ್ಥವನ್ನು ನನ್ನ ಊಟಕ್ಕೆ ಸಿದ್ಧಪಡಿಸು, ನಾನು ನಿನ್ನನ್ನು ಆಶೀರ್ವದಿಸುತ್ತೇನೆ" ಅಂದನು (ಆದಿ.27:1–4). ಹಾಗೆಯೇ, ಏಸಾವನು ತಂದೆಗಾಗಿ ಬೇಟೆಯಾಡಲು ಹೋದನು. ಇದರೊಳಗೆ ಯಾಕೋಬನು, ಇದನ್ನು ತಿಳಿದು, ತಾಯಿಯು ಸಿದ್ಧಪಡಿಸಿದ ಪದಾರ್ಥವನ್ನು ತೆಗೆದುಕೊಂಡು ತನ್ನ ತಂದೆಯ ಬಳಿ ಬಂದನು ಮತ್ತು ಎಲ್ಲಾ ಆಶೀರ್ವಾದವನ್ನೂ ಪಡೆದುಕೊಂಡನು. ಹೀಗೆಯೇ ಯಾಕೋಬನು ತನ್ನ ತಂದೆಯನ್ನೂ, ಅಣ್ಣನನ್ನೂ ವಂಚಿಸಿದನು.

ಇದೇ ರೀತಿಯಾಗಿ ಲೋಕದಲ್ಲಿ ಅನೇಕರು ನಿಮಗೆ ಬರಬೇಕಾದ ಆಶೀರ್ವಾದಗಳನ್ನು ಕುತಂತ್ರದಿಂದ ತೆಗೆದುಕೊಳ್ಳಬಹುದು. ಕಳ್ಳಪತ್ರಗಳನ್ನು ತಯಾರಿಸಿ ಮನೆಗಳನ್ನೂ ಹೊಲಗಳನ್ನೂ ಅಪಹರಿಸಲು ಯತ್ನಿಸಬಹುದು. ಆದ್ದರಿಂದಲೇ, ಪಾರಿವಾಳದ ಹಾಗೆ ಕಪಟವಿಲ್ಲದವರಾಗಿದ್ದರೂ, ಸರ್ಪದ ಹಾಗೆ ಜಾಗ್ರತೆಯುಳ್ಳವರಾಗಿರ್ರಿ ಎಂದನು ಯೇಸುಕ್ರಿಸ್ತನು. ಗಮನವೂ, ಜಾಗ್ರತೆಯೂ, ಸತತ ಪ್ರಯತ್ನವೂ ನಿಮಗೆ ಅವಶ್ಯ. ಈ ಸಮಯದಲ್ಲಿ ನಿಮ್ಮನ್ನು ನೀವೇ ಪರಿಶೀಲಿಸಿರಿ. ಡೊಂಕಾದವುಗಳನ್ನು ನೆಟ್ಟಗೆ ಮಾಡಿರಿ. ಕರ್ತನಿಗೂ ನಿಮಗೂ ಇರುವ ಸಂಬಂಧವನ್ನು ಸರಿಪಡಿಸಿರಿ. ನಂತರ ಕರ್ತನು ನಿಮ್ಮನ್ನು ಆಶೀರ್ವದಿಸಲು ಕೇಳಿರಿ!

***ನೆನಪಿಗೆ : "ದೇವಾ, ನನ್ನನ್ನು ಪರೀಕ್ಷಿಸಿ, ನನ್ನ ಹೃದಯವನ್ನು ತಿಳಿದುಕೋ; ನನ್ನನ್ನು ಶೋಧಿಸಿ, ನನ್ನ ಆಲೋಚನೆಗಳನ್ನು ಗೊತ್ತುಮಾಡು" (ಕೀರ್ತ.139:23).***

ಡಿಸೆಂಬರ್ 12

# ಹಸಿವು ದಾಹ ಬೇಕು!

ಬೆಳಿಗ್ಗೆ: ಹೋಶೇಯ 9,10,11
ಸಂಜೆ : ಪ್ರಕ. 3

**"ಒಂದು ದಿನ ಯಾಕೋಬನು ಅಡಿಗೆ ಮಾಡುತ್ತಿರುವಾಗ, ಏಸಾವನು ಕಾಡಿನಿಂದ ದಣಿದು ಬಂದನು" (ಆದಿ.25:29).**

ಹಸಿವು, ದಾಹ, ದಣಿವು, ಬಳಲುವಿಕೆ ಇವೆಲ್ಲವೂ ಸ್ವಾಭಾವಿಕವಾಗಿ ಬರುವಂಥದ್ದು. ಆದರೆ ಲೋಕರೀತಿಯಾದ ಹಸಿವು, ದಾಹಕ್ಕಾಗಿ, ಅಗತ್ಯತೆಗಳಿಗಾಗಿ ಆತ್ಮೀಕ ಆಶೀರ್ವಾದಗಳನ್ನು ಕಳೆದುಕೊಳ್ಳಬಾರದು. ಇಸಾಕನ ಹಿರಿಯ ಮಗನಾದ ಏಸಾವನ ಜೀವಿತವನ್ನು ನೀವು ನೋಡುವದಾದರೆ, ಅವನಿಗೆ ಆತ್ಮೀಕ ರೀತಿಯಾದ ಹಸಿವು ದಾಹವಿರಲಿಲ್ಲ. ಕರ್ತನ ಮೇಲೆ ಒಂದು ದಾಹವಿಲ್ಲ, ಇದುವೇ, ಅವನು ಆಶೀರ್ವಾದವನ್ನು ಕಳೆದುಕೊಳ್ಳಲು ಮುಖ್ಯವಾದ ಕಾರಣವಾಗಿತ್ತು.

ಆದರೆ, ಏಸಾವನ ಸಹೋದರನಾದ ಯಾಕೋಬನನ್ನು ನೋಡಿರಿ! ಚೊಚ್ಚಲತನದ ಬಾಧ್ಯತೆಯನ್ನು ತಾನು ಹೇಗಾದರೂ ಪಡಕೊಳ್ಳಬೇಕೆಂದು, ತನ್ನ ಹಸಿವೆಯನ್ನು ಮರೆತು, ತನಗಾಗಿ ಕಷ್ಟಪಟ್ಟು ತಯಾರಿಸಿದ ರುಚಿಪದಾರ್ಥವನ್ನು ಏಸಾವನಿಗೆ ಕೊಟ್ಟು, ಚೊಚ್ಚಲತನದ ಹಕ್ಕನ್ನು ಪಡಕೊಂಡನು. ಹಾಗೆಯೇ ತಂದೆಯ ಆಶೀರ್ವಾದವನ್ನು ಪಡೆಯಬೇಕೆಂದು ಬಹಳವಾಗಿ ಆಶಿಸಿ, ತಂದೆಯ ಶಾಪವನ್ನು ಹೊಂದಿರೂ ಸರಿ ಎಂದು ಧೈರ್ಯದಿಂದ ಏಸಾವನ ಹಾಗೆ ನಟಿಸಿ, ತಂದೆಯ ಸಂಪೂರ್ಣ ಆಶೀರ್ವಾದವನ್ನು ಪಡಕೊಂಡನು. ಮಾತ್ರವಲ್ಲ, ರಾತ್ರಿಯೆಲ್ಲಾ ಕರ್ತನ ಸಂಗಡ ಹೋರಾಡಿ, ನೀನು ನನ್ನನ್ನು ಆಶೀರ್ವದಿಸಿದ ಹೊರತು, ನಿನ್ನನ್ನು ಬಿಡುವದಿಲ್ಲ ಎಂದು ಗೋಳಾಡಿ, ದೇವರ ಆಶೀರ್ವಾದವನ್ನೂ ಹೊಂದಿದನು.

ದಾವೀದನು, ಎಷ್ಟು ದಾಹದಿಂದ ಕರ್ತನನ್ನು ಹುಡುಕಿದನು ನೋಡಿರಿ! "ದೇವರೇ, ಬಾಯಾರಿದ ಜಿಂಕೆಯು ನೀರಿನ ತೊರೆಗಳನ್ನು ಹೇಗೋ, ಹಾಗೆಯೇ ನನ್ನ ಮನವು ನಿನ್ನನ್ನು ಬಯಸುತ್ತದೆ" (ಕೀರ್ತ.42:1). ಆದರೆ ಏಸಾವನು ಯಾವ ರೀತಿಯಲ್ಲಿಯೂ ಕರ್ತನನ್ನು ದಾಹದಿಂದ ಹುಡುಕಲಿಲ್ಲ. ಏಸಾವನು ಕರ್ತನನ್ನು ಪ್ರೀತಿಸಿದ್ದಾಗಿ, ಹುಡುಕಿದ್ದಾಗಿ ಎಲ್ಲಿಯೂ ಓದಲು ಸಾಧ್ಯವಿಲ್ಲ. ಇಂಥವರು ಆಶೀರ್ವಾದವನ್ನು ಕಳೆದುಕೊಳ್ಳುವದು ಸಾಮಾನ್ಯ ತಾನೇ! ಲೋಕರೀತಿಯಾದ ಆಶೀರ್ವಾದವಾದರೂ ಸರಿ, ಆತ್ಮೀಕ ಆಶೀರ್ವಾದವಾದರೂ ಸರಿ, ದಾಹವುಳ್ಳವರಿಗೆ ಮಾತ್ರವೇ ಕರ್ತನು ಕೊಡುವನು. ದೇವಮಕ್ಕಳೇ, ಯಾವಾಗಲೂ ಕರ್ತನ ಮೇಲೂ, ಆತನ ವಾಕ್ಯಗಳ ಮೇಲೂ, ದೇವರ ಪ್ರಸನ್ನತೆಯ ಮೇಲೂ ದಾಹವುಳ್ಳವರಾಗಿರ್ರಿ. ಎಲ್ಲಾ ಆಶೀರ್ವಾದಗಳೂ ತಾನಾಗಿ ಬಂದು ನಿಮ್ಮನ್ನು ಸೇರುವದು.

***ನೆನಪಿಗೆ : "ಯೇಸು ನಿಂತುಕೊಂಡು, ಯಾವನಿಗಾದರೂ ನೀರಡಿಕೆಯಾಗಿದ್ದರೆ, ಅವನು ನನ್ನ ಬಳಿಗೆ ಬಂದು ಕುಡಿಯಲಿ" (ಯೋಹಾ.7:37).***

ಡಿಸೆಂಬರ್ 13

# ಪ್ರೀತಿಸಿದೆನು!

ಬೆಳಿಗ್ಗೆ: ಹೋಶೇಯ 12,13,14
ಸಂಜೆ : ಪ್ರಕ. 4

**"ಏಸಾವನು ಯಾಕೋಬನ ಅಣ್ಣನಲ್ಲವೆ, ಆದರೆ ನಾನು ಯಾಕೋಬನನ್ನು ಪ್ರೀತಿಸಿದೆನು" (ಮಲಾ.1:2).**

ದೇವರು ಪಕ್ಷಪಾತಿಯಾ? ಒಬ್ಬರನ್ನು ಪ್ರೀತಿಸಿ, ಇನ್ನೊಬ್ಬರನ್ನು ದ್ವೇಷಿಸುತ್ತಾನೆ ಎಂದು ನೀವು ನೆನಸಬಹುದು. ನಿಜವಾಗಿಯೂ ಪ್ರೀತಿಗೆ ಪಾತ್ರನು ಏಸಾವನೇ ಕಾರಣವೇನೆಂದರೆ, ಮನೆಯಲ್ಲಿ ಅವನೇ ಹಿರಿಯ ಮಗನು. ಚೊಚ್ಚಲತನದ ಹಕ್ಕಿಗೆ ಬಾದ್ಯಸ್ಥನು. ಅವನು ಜ್ಯೇಷ್ಠ ಪುತ್ರನು.

ಇಂದು ಅನೇಕರು ಗುಣುಗುಟ್ಟುತ್ತಾರೆ. ಕರ್ತನು ನನ್ನನ್ನು ದ್ವೇಷಿಸಿದ್ದಾನೆ. ಆತನು ನನ್ನ ಪ್ರಾರ್ಥನೆಯನ್ನು ಕೇಳುವದಿಲ್ಲ. "ಚೀಯೋನ್ ನಗರಿಯಾದರೋ–ಯೆಹೋವನು ನನ್ನನ್ನು ಕೈಬಿಟ್ಟಿದ್ದಾನೆ. ಕರ್ತನು ನನ್ನನ್ನು ಮರೆತಿದ್ದಾನಲ್ಲಾ ಅಂದುಕೊಂಡಳು" (ಯೆಶಾ.49:14). ದೇವರು ಯಾರನ್ನೂ ಕೈಬಿಡುವದಿಲ್ಲ, ಮರೆತುಬಿಡುವದಿಲ್ಲ. "ಒಬ್ಬ ಹೆಂಗಸು ತಾನು ಹೆತ್ತ ಮಗುವಿನ ಮೇಲೆ ಕರುಣೆಯಿಡದೆ ತನ್ನ ಮೊಲೆಕೂಸನ್ನು ಮರೆತಾಳೆ? ಒಂದು ವೇಳೆ ಮರೆತಾಳು, ನಾನಾದರೆ ನಿನ್ನನ್ನು ಮರೆಯೆ. ಇಗೋ ನನ್ನ ಅಂಗೈಗಳಲ್ಲಿ ನಿನ್ನನ್ನು ಚಿತ್ರಿಸಿದ್ದೇನೆ" (ಯೆಶಾ.49:15,16).

ಯಾಕೋಬನನ್ನು ಪ್ರೀತಿಸಿ, ಏಸಾವನನ್ನು ದ್ವೇಷಿಸಿದೆನು. ಎಂದು ಬರೆಯಲ್ಪಟ್ಟಿದೆ. "ಹಾಗಾದರೆ ಏನು ಹೇಳೋಣ? ದೇವರಲ್ಲಿ ಅನ್ಯಾಯ ಉಂಟೋ ಎಂದಿಗೂ ಇಲ್ಲ" ಎಂದು ಅಪೊ. ಪೌಲನು ಬರೆದನು ( ರೋಮಾ.9:12–14). ಯಾಕೆ ನಿಮಗೆ ಸಮೃದ್ಧಿ ಇಲ್ಲ? ಯಾಕೆ ನಿಮ್ಮ ಜೀವಿತದಲ್ಲಿ ಸೈತಾನನ ಕಾಟಗಳು, ಮಂತ್ರ ತಂತ್ರದ ಶಕ್ತಿಗಳು? ಕಾರಣವೇನೆಂದರೆ, ಪ್ರಾರ್ಥನೆ ಇಲ್ಲ. ಕರ್ತನನ್ನು ಪ್ರೀತಿಸುವ ಪ್ರೀತಿಯಿಲ್ಲ. ಕರ್ತನನ್ನು ಸನ್ಮಾನಿಸಲಿಲ್ಲ. ಗಮನಿಸಿ ನೋಡಿರಿ! ಏಸಾವನು ಒಂದು ಬಾರಿ ಕೂಡ ಪ್ರಾರ್ಥಿಸಿದ್ದಾಗಿ ಸತ್ಯವೇದದಲ್ಲಿಲ್ಲ. ಒಮ್ಮೆಯಾದರೂ ಯಜ್ಞವೇದಿಯನ್ನು ಕಟ್ಟಿ ಕರ್ತನನ್ನು ನಮಸ್ಕರಿಸಲಿಲ್ಲ. ಕರ್ತನಿಗೆ ಕಾಣಿಕೆಯನ್ನು ಕೊಟ್ಟದ್ದಿಲ್ಲ. ಅಂಥವರು, ಖಂಡಿತವಾಗಿಯೂ ನನಗೆ ಒಂದು ಆಶೀರ್ವಾದವಾದರೂ ಇಲ್ಲವಾ? ಎಂದು ಗೋಳಾಡುವರು.

ಏಸಾವನ ತಾತನಾದ ಅಬ್ರಹಾಮನು, ಯಾವಾಗ ಕರ್ತನನ್ನು ಸಂಧಿಸಲು ಬಯಸಿದನೋ, ಆಗೆಲ್ಲಾ ಯಜ್ಞವೇದಿಯನ್ನು ಕಟ್ಟಿ ಕರ್ತನನ್ನು ಆರಾಧಿಸಿದನು. ಕರ್ತನು ಅಗ್ನಿ ಜ್ವಾಲೆಯಾಗಿ ಯಜ್ಞವೇದಿಯ ಮೇಲೆ ಇಳಿದುಬಂದು ಅಬ್ರಹಾಮನೊಂದಿಗೆ ಮಾತನಾಡಿದನು. ಆದರೆ ಏಸಾವನೋ ಅಬ್ರಹಾಮನ ಮಾರ್ಗಗಳನ್ನು ಅನುಸರಿಸಲಿಲ್ಲ. ಆದ್ದರಿಂದಲೇ ಅವನಿಗೆ ಆಶೀರ್ವಾದಗಳು ಸಿಗಲಿಲ್ಲ.

***ನೆನಪಿಗೆ : "ನಿನ್ನ ಆದಾಯದಿಂದಲೂ, ಬೆಳೆಯ ಪ್ರಥಮ ಫಲದಿಂದಲೂ ಯೆಹೋವನನ್ನು ಸನ್ಮಾನಿಸು" (ಜ್ಞಾನೋ.3:9).***

ಡಿಸೆಂಬರ್ 14

# ಚೊಚ್ಚಲತನದ ಹಕ್ಕು!

ಬೆಳಿಗ್ಗೆ : ಯೋವೇಲ 1,2,3
ಸಂಜೆ : ಪ್ರಕ. 5

**"ಏಸಾವನು ಪ್ರಮಾಣ ಮಾಡಿ, ಅವನಿಗೆ (ಯಾಕೋಬನಿಗೆ) ತನ್ನ ಚೊಚ್ಚಲತನದ ಹಕ್ಕನ್ನು ಕೊಟ್ಟುಬಿಟ್ಟನು" (ಆದಿ.25:33).**

ಇಸ್ರಾಯೇಲ್ ದೇಶದಲ್ಲಿ ಒಂದು ಕುಟುಂಬದ ಹಿರಿಯ ಮಗನನ್ನು "ಜ್ಯೇಷ್ಠಪುತ್ರನು" ಎಂದು ಕರೆಯುವರು. ಅವನು ಎರಡರಷ್ಟು ಬಾಧ್ಯತೆಯನ್ನು ಹೊಂದುವನು. ಒಂದು ಮನೆಯಲ್ಲಿ ಐದು ಮಕ್ಕಳಿದ್ದರೆ, ಆಸ್ತಿಯನ್ನು ಆರು ಭಾಗ ಮಾಡಿ, ಮೊದಲನೆಯ ಎರಡು ಭಾಗವನ್ನು ಹಿರಿಯ ಮಗನಿಗೆ ಕೊಡುವರು. ತಂದೆಯ ನಂತರ ಕುಟುಂಬವನ್ನು ನಡೆಸುವ ಜವಾಬ್ದಾರಿ ಅವನಿಗುಂಟು. ಕುಟುಂಬದ ಯಜ್ಞವೇದಿಗೆ ಅವನೊಬ್ಬ ಯಾಜಕನಾಗಿರುವನು.

ಹಾಗೆಯೇ, ಪಶುಗಳೊಳಗೆ, ಪ್ರಥಮವಾಗಿ ಹುಟ್ಟುವದನ್ನು "ಚೊಚ್ಚಲು" ಎನ್ನುವರು. ಕರ್ತನೇ ಗರ್ಭವನ್ನು ಆಶೀರ್ವದಿಸಿ, ಮಕ್ಕಳನ್ನು ಕೊಡುವಂಥವನು. ಆದ್ದರಿಂದ ಆತನು ಆಜ್ಞಾಪಿಸಿ, "ಇಸ್ರಾಯೇಲ್ಯರು ತಮ್ಮೊಳಗಾಗಲಿ ತಮ್ಮ ಪಶುಗಳೊಳಗಾಗಲಿ ಪ್ರಥಮ ಗರ್ಭವನ್ನು ಅಂದರೆ ಚೊಚ್ಚಲಾಗಿ ಹುಟ್ಟಿದ್ದೆಲ್ಲವನ್ನೂ ನನಗೆ ಮೀಸಲಾಗಿಡಬೇಕು. ಅದು ನನ್ನದೇ ಎಂದು ಹೇಳಿದನು" (ವಿಮೋ.13:1,2). ಹಾಗೆ ನೋಡುವಾಗ, ಏಸಾವನು ಚೊಚ್ಚಲ ಮಗನು ಅವನು ಪರಿಶುದ್ಧವಾಗಿರಬೇಕು. ದೇವರೊಂದಿಗೆ ಐಕ್ಯತೆಯಲ್ಲಿರಬೇಕು. 'ಪರಿಶುದ್ಧತೆ' ಎಂಬ ಪದಕ್ಕೆ ಇನ್ನೊಂದು ಅರ್ಥವಿದೆ. ಇತರರನ್ನು ಬಿಟ್ಟು ಪ್ರತ್ಯೇಕವಾಗಿ ಜೀವಿಸುವದು. ನಿಮ್ಮ ಕಚೇರಿಯಲ್ಲಿ 10 ಮಂದಿ ಇದ್ದಾರೆ. ಲಂಚ ತೆಗೆದುಕೊಳ್ಳುತ್ತಾರೆ. ಪಾಪದ ಮಾರ್ಗಗಳಲ್ಲಿ ನಡೆಯುತ್ತಾರೆ. ನೀವಾದರೋ, "ನಾನು ಕರ್ತನಿಗೆ ಪರಿಶುದ್ಧನು, ನಾನು ಪವಿತ್ರವಾದ ಜೀವನ ನಡಿಸಬೇಕು" ಎಂದು ತೀರ್ಮಾನಿಸಿ ಇತರ ಜನರಿಂದ ಪ್ರತ್ಯೇಕವಾಗಿ ಜೀವಿಸುವದೇ ಪರಿಶುದ್ಧತೆ.

ಯಾರು ಪರಿಶುದ್ಧತೆಯನ್ನು ಕಾದುಕೊಳ್ಳದೆ, ಧೈರ್ಯವಾಗಿ ಹೊಲಸಿನಲ್ಲಿಯೂ, ಕೆಸರಿನಲ್ಲಿಯೂ ಬಾಳುವ ಹಂದಿಯ ಜೀವಿತವನ್ನು ಆರಿಸಿಕೊಳ್ಳುವರೋ, ಕರ್ತನು ಅಂಥವರನ್ನು ದ್ವೇಷಿಸುತ್ತಾನೆ. ಆದ್ದರಿಂದಲೇ ಕರ್ತನು ಏಸಾವನನ್ನು ದ್ವೇಷಿಸಿದನು. ದೇವಮಕ್ಕಳೇ, ಶರೀರವನ್ನು ಶುದ್ಧಿಪಡಿಸುವದಕ್ಕಿಂತಲೂ, ನಿಮ್ಮ ಆತ್ಮವನ್ನು ಸಾವಿರದಷ್ಟು ಶುದ್ಧೀಕರಿಸಿರಿ. ಯೇಸುಕ್ರಿಸ್ತನ ರಕ್ತವು ಸಕಲ ಪಾಪಗಳನ್ನೂ, ನೀಗಿಸಿ ನಿಮ್ಮನ್ನು ಪವಿತ್ರಗೊಳಿಸುವದು. ಯೇಸುವಿನ ರಕ್ತದಿಂದ ತೊಳೆಯಲ್ಪಟ್ಟ ನೀವು, ಪರಿಶುದ್ಧತೆಗೆ ಪ್ರಾಮುಖ್ಯತೆ ನೀಡಿರಿ. ಪರಿಶುದ್ಧತೆಯಲ್ಲಿ ಕೊರತೆಯನ್ನೂ, ಪವಿತ್ರ ಬೀಜವು ಅನ್ಯಜನರೊಂದಿಗೆ ಬೆರೆತು ಬಿಡುವದನ್ನೂ ಕರ್ತನು ಎಂದಿಗೂ ಬಯಸುವದೇ ಇಲ್ಲ.

***ನೆನಪಿಗೆ : "ನೀವು ಕ್ರಿಸ್ತನಂಬಿಕೆಯಿಲ್ಲದವರೊಂದಿಗೆ ಸೇರಿ ಇಜ್ಜೋಡಾಗಬೇಡಿರಿ. ಧರ್ಮಕ್ಕೂ ಅಧರ್ಮಕ್ಕೂ ಜೊತೆಯೇನು?" (2ಕೊರಿಂ.6:14).***

ಡಿಸೆಂಬರ್ **15**

# ಅಸಡ್ಡೆ! ಅಲಕ್ಷ್ಯ!

ಬೆಳಿಗ್ಗೆ : ಆಮೋಸ 1,2,3
ಸಂಜೆ : ಪ್ರಕ. 6

**"ಆಗ ಯಾಕೋಬನು ಏಸಾವನಿಗೆ ರೊಟ್ಟಿಯನ್ನೂ, ಅಲಸಂದಿಗುಗ್ಗರಿಯನ್ನೂ ಕೊಟ್ಟನು. ಏಸಾವನು ತಿಂದು ಕುಡಿದು ಎದ್ದು ಹೋದನು. ಹೀಗೆ ಅವನು ತನ್ನ ಚೊಚ್ಚಲತನದ ಹಕ್ಕನ್ನು ತಾತ್ಸಾರ ಮಾಡಿದನು" (ಆದಿ.25:34).**

ಅನೇಕರಿಗೆ ಕರ್ತನ ಕಾರ್ಯಗಳಲ್ಲಿ ಅಲಕ್ಷ್ಯ ಮನೋಭಾವ, ತಾತ್ಸಾರ ಮಾಡುವ ಸ್ವಭಾವ. ಒಂಭತ್ತು ಗಂಟೆಗೆ ಆಲಯವು ಪ್ರಾರಂಭವಾದರೆ, ಅಲಕ್ಷ್ಯವಾಗಿ ತಡವಾಗಿ ಬರುವರು. ಆಲಯಕ್ಕೆ ಬಂದರೂ, ಕರ್ತನ ಮೇಲೆ ಹಸಿವು, ದಾಹದಿಂದ ವಾಕ್ಯಗಳನ್ನು ಆಲಿಸುವದಿಲ್ಲ. ಸೆಲ್‌ಫೋನನ್ನು ನೋಡುತ್ತಲೇ ಇರುವರು. ಈ ಅಲಕ್ಷ್ಯದಿಂದ ಆಶೀರ್ವಾದಗಳನ್ನು ಕಳೆದುಕೊಳ್ಳುವರು. ಕರ್ತನು ಅಂಥವರನ್ನು ತಳ್ಳಿಬಿಡುವನು ಅಥವಾ ತಿರಸ್ಕರಿಸುವನು.

ಸಂಸೋನನನ್ನು ನೋಡಿರಿ! ಅವನಿಗೆ ಮಹತ್ತರವಾದ ಅಭಿಷೇಕವು ಸಿಕ್ಕಿತು. ಪವಿತ್ರಾತ್ಮನು ಅವನ ಮೇಲೆ ಬಲವಾಗಿ ಇಳಿದಾಗ, ಸಿಂಹದ ಬಾಯನ್ನು ಸೀಳಿದನು. ಮುನ್ನೂರು ನರಿಗಳನ್ನು ಹಿಡಿದನು. ಗಾಜದ ಬಾಗಿಲನ್ನು ಕಿತ್ತುಕೊಂಡು, ಹೆಗಲ ಮೇಲೆ ಹೊತ್ತುಕೊಂಡು ಹೋದನು. ಒಂದು ಕತ್ತೆಯ ಹಸಿದವಡೆ ಎಲುಬಿನಿಂದ, ಸಾವಿರ ಫಿಲಿಷ್ಟಿಯರನ್ನು ಕೊಂದನು. ಹೋಗುವ ಸ್ಥಳವೆಲ್ಲಾ ಜಯ. ಆದರೆ ವೈಯಕ್ತಿಕ ಜೀವಿತದಲ್ಲಿ ಅವನಿಗೆ ಪರಿಶುದ್ಧತೆ ಇಲ್ಲ. ಪವಿತ್ರಾತ್ಮನನ್ನು ಅಸಡ್ಡೆ ಮಾಡಿದನು. ತನ್ನ ಮೇಲಿದ್ದ ಅಭಿಷೇಕವನ್ನು ತಾತ್ಸಾರ ಮಾಡಿ, ವೇಶ್ಯೆಗಳ ಹಿಂದೆ ಸಂಚರಿಸಿದನು. ಅಂತ್ಯದಲ್ಲಿ ಕರ್ತನು ವೇದನೆಯೊಂದಿಗೆ ಸಂಸೋನನನ್ನು ಬಿಟ್ಟು ಅಗಲಬೇಕಾಯಿತು. ಕೃಪೆಯು ಅವನನ್ನು ಬಿಟ್ಟು ಹೋದ ಕೂಡಲೆ, ಫಿಲಿಷ್ಟಿಯರು ಅವನನ್ನು ಹಿಡಿದುಬಿಟ್ಟರು. ಅವನ ಕಣ್ಣುಗಳು ಕುರುಡಾದವು. ಕೈಯಲ್ಲಿ ತಾಮ್ರದ ಬೇಡಿ ಹಾಕಿ, ಎಳೆದು ಪರಿಹಾಸ್ಯ ಮಾಡಿದರು.

ಇಂದು ಅನೇಕ ಕ್ರೈಸ್ತರಿಗೆ, ಕರ್ತನು ತಮಗಾಗಿ ಇಟ್ಟಿರುವ ಉನ್ನತವಾದ ಆಶೀರ್ವಾದಗಳು ಎಂಥದೆಂದು ತಿಳಿದಿಲ್ಲ. ಪರಲೋಕ ಬಾಧ್ಯತೆಯ ಬೆಲೆ ಗೊತ್ತಿಲ್ಲ. ಲಂಚ ಕೇಳುವದು, ವರದಕ್ಷಿಣೆ ಕೇಳುವದು, ಇಂತಹ ಕಾರ್ಯಗಳಿಂದ ಕರ್ತನ ಆಶೀರ್ವಾದಗಳನ್ನೂ, ಪರಲೋಕದ ಶ್ರೇಷ್ಠತೆಯನ್ನು ಕಳೆದುಕೊಳ್ಳುತ್ತಾರೆ. ಒಂದು ವೇಳೆಯ ಅಭಿಲಾಷೆಗಾಗಿ, ವ್ಯಭಿಚಾರಕ್ಕಾಗಿ ಆತ್ಮವನ್ನು ನಷ್ಟಪಡಿಸಿಕೊಳ್ಳುತ್ತಾರೆ. ಅಂತ್ಯದಲ್ಲಿ ಬಾಡದ ಮಹಿಮೆಯುಳ್ಳ ಕಿರೀಟವನ್ನು ಕಳೆದುಕೊಂಡು, ನಿತ್ಯ ವಾಸಸ್ಥಳಗಳನ್ನು ಕಳೆದು, ಪಾತಾಳವೆಂಬ ನಾಶನದ ಗುಂಡಿಯಲ್ಲಿ ಅಗ್ನಿಜ್ವಾಲೆಯಲ್ಲಿ ಬಿದ್ದು ಸದಾಕಾಲವೂ ವಾದಿಸಲ್ಪಡುವರು, ದೇವಮಕ್ಕಳೇ, ನಿಮ್ಮ ಜೀವಿತದಲ್ಲಿ ತಾತ್ಸಾರ, ಅಲಕ್ಷ್ಯ ಬೇಡವೇ ಬೇಡ!

***ನೆನಪಿಗೆ : "ಕಷ್ಟದ ದಿನಗಳೂ, ಸಂತೋಷವಿಲ್ಲವೆಂದು ನೀನು ಹೇಳುವ ವರುಷಗಳೂ ಸಮೀಪಿಸುವದರೊಳಗಾಗಿ ಯೌವನದಲ್ಲಿಯೇ ಸೃಷ್ಟಿಕರ್ತನನ್ನು ಸ್ಮರಿಸು" (ಪ್ರಸ.12:1).***

ಡಿಸೆಂಬರ್ 16

# ಕಹಿ ಹಗೆತನ ಬೇಡ!

ಬೆಳಿಗ್ಗೆ : ಆಮೋಸ 4,5,6
ಸಂಜೆ : ಪ್ರಕ. 7

**"ಏಸಾವನು ಯಾಕೋಬನನ್ನು ಹಗೆಮಾಡಿ, ತನ್ನ ಮನಸ್ಸಿನೊಳಗೆ – ತಂದೆಗೋಸ್ಕರ ದುಃಖಿಸುವ ಕಾಲ ಸಮೀಪಿಸಿತು; ಆಗ ನನ್ನ ತಮ್ಮನಾದ ಯಾಕೋಬನನ್ನು ಕೊಲ್ಲುವೆನು ಅಂದುಕೊಂಡನು" (ಆದಿ.27:41).**

ಏಸಾವನು ತನ್ನ ತಪ್ಪನ್ನು ತಿಳಿದು ಮಾನಸಾಂತರಪಡದೆ, ತನ್ನ ಸಹೋದರನಿಗೆ ವಿರುದ್ಧವಾಗಿ ಹಗೆಯನ್ನಿಟ್ಟಿದ್ದನು. ಹೃದಯದಲ್ಲಿ ಕಹಿಯೂ, ವೈರಾಗ್ಯವೂ, ಸಿಟ್ಟೂ ಆವರಿಸಿತ್ತು. ತನ್ನ ಸಹೋದರನಾದ ಯಾಕೋಬನನ್ನು ಕೊಲ್ಲಲು ತೀರ್ಮಾನಿಸಿದನು. ಹಗೆ, ಸಿಟ್ಟು, ಉರಿತನ, ಕ್ಷಮಿಸದಿರುವ ಸ್ವಭಾವವು ಸೈತಾನನ ಬಳಿಯಿಂದಲೇ ಬರುತ್ತವೆ. ಇವು ಆಶೀರ್ವಾದವನ್ನು ಅಡ್ಡಿ ಮಾಡುತ್ತವೆ.

ಸತ್ಯವೇದವು ಹೇಳುತ್ತದೆ, "ಅಪಕಾರಕ್ಕೆ ಅಪಕಾರವನ್ನು, ನಿಂದೆಗೆ ನಿಂದೆಯನ್ನು ಮಾಡದೆ ಆಶೀರ್ವದಿಸಿರಿ. ಇದಕ್ಕಾಗಿ ದೇವರು ನಿಮ್ಮನ್ನು ಕರೆದನಲ್ಲಾ ಹೀಗೆ ಮಾಡುವದಾದರೆ ನೀವು ಆಶೀರ್ವಾದವನ್ನು ಬಾಧ್ಯವಾಗಿ ಹೊಂದುವಿರಿ" (1ಪೇತ್ರ3:9). "ನೀನು ನಿನ್ನ ಕಾಣಿಕೆಯನ್ನು ಯಜ್ಞವೇದಿಯ ಹತ್ತಿರಕ್ಕೆ ತಂದಾಗ, ನಿನ್ನ ಸಹೋದರನ ಮನಸ್ಸಿನಲ್ಲಿ ನಿನ್ನ ಮೇಲೆ ಏನೋ ವಿರೋಧವದೆ ಎಂಬದು, ನಿನ್ನ ನೆನಪಿಗೆ ಬಂದರೆ, ನಿನ್ನ ಕಾಣಿಕೆಯನ್ನು ಆ ಯಜ್ಞವೇದಿಯ ಮುಂದೆಯೇ ಬಿಟ್ಟುಹೋಗಿ ಮೊದಲು ನಿನ್ನ ಸಹೋದರನ ಸಂಗಡ ಒಂದಾಗು, ಆ ಮೇಲೆ ಬಂದು ನಿನ್ನ ಕಾಣಿಕೆಯನ್ನು ಕೊಡು" (ಮತ್ತಾ.5:23,24).

ಎಷ್ಟೇ ಏಸಾವನು ಕರ್ತನನ್ನು ತಿರಸ್ಕರಿಸಿದರೂ, ಹೃದಯದಲ್ಲಿ ಕಹಿ, ಹಗೆತನವನ್ನು ಇಟ್ಟಿದ್ದರೂ, ಕರ್ತನು ಅನೇಕ ವರ್ಷಗಳು ಏಸಾವನನ್ನೂ ಅವನ ಸಂತತಿಯನ್ನೂ ಕರುಣಿಸುತ್ತಲೇ ಇದ್ದನು. ಕರ್ತನು ಇಸ್ರಾಯೇಲ್ಯರ ಬಳಿ, "ಎದೋಮ್ಯರನ್ನು ಸಂಪೂರ್ಣವಾಗಿ ನಿಷೇಧಿಸಬಾರದು, ಅವರು ಬಂಧು ಜನಗಳು" ಎಂದು ಪ್ರೀತಿಯಿಂದ ಹೇಳಿದನು (ಧರ್ಮೋ.23:7). ಆದರೆ, ಎದೋಮ್ಯರೋ, ಸತತವಾಗಿ ಇಸ್ರಾಯೇಲ್ಯರನ್ನು ಹಗೆಮಾಡಿದರು. ಇಸ್ರಾಯೇಲ್ಯರು ಅರಣ್ಯದ ಮಾರ್ಗವಾಗಿ ಕಾನಾನ್ ದೇಶಕ್ಕೆ ಹೋಗುವಾಗ, ಎದೋಮ್ಯರ ದೇಶದ ಮಾರ್ಗವಾಗಿ ಹೋಗಲು ಕೇಳಿಕೊಂಡರು. ಆದರೆ ಎದೋಮ್ಯರು, "ನಮ್ಮ ದೇಶವನ್ನು ನೀವು ದಾಟಿ ಹೋಗಕೂಡದು, ದಾಟುವದಾದರೆ, ನಾವು ನಿಮ್ಮ ಮೇಲೆ ಯುದ್ಧಕ್ಕೆ ಬರುತ್ತೇವೆ ಎಂದು ಉತ್ತರ ಕೊಟ್ಟರು" (ಅರಣ್ಯ.20:18). ಆದ್ದರಿಂದ ಕರ್ತನು ಏಸಾವನ ಸಂತತಿಯನ್ನು ಭೂಮಿಯಿಂದ ಸಂಪೂರ್ಣವಾಗಿ ನಾಶಮಾಡಿಬಿಟ್ಟನು. ದೇವಮಕ್ಕಳೇ, ಕರ್ತನ ಆಶೀರ್ವಾದವು ನಿಮಗೆ ಬೇಕೇ? ಕಹಿಯನ್ನೂ, ವೈರಾಗ್ಯವನ್ನೂ ತೆಗೆದುಹಾಕಿ, ದೈವೀಕ ಪ್ರೀತಿಯಿಂದ ಇತರರನ್ನು ನಿಮ್ಮ ಬಳಿ ಸೇರಿಸಿಕೊಳ್ಳಿರಿ!

***ನೆನಪಿಗೆ : "ನೀನಾದರೂ ಸಮಾಧಾನಕ್ಕೆ ಬೇಕಾದದ್ದನ್ನು ಇದೇ ದಿನದಲ್ಲಿ ತಿಳಿದುಕೊಂಡರೆ ಎಷ್ಟೋ ಒಳ್ಳೇದು" (ಲೂಕ.19:42).***

ಡಿಸೆಂಬರ್ 17

# ಚೊಚ್ಚಲ ಮಕ್ಕಳು!

ಬೆಳಿಗ್ಗೆ : ಆಮೋಸ 7,8,9
ಸಂಜೆ : ಪ್ರಕ. 8

**"ರೂಬೇನನೇ, ನೀನು ನನ್ನ ಚೊಚ್ಚಲ ಮಗನೂ, ನನ್ನ ಚೈತನ್ಯ ಸ್ವರೂಪನೂ, ನನ್ನ ವೀರ್ಯಕ್ಕೆ ಪ್ರಥಮ ಫಲವೂ.... ಆಗಿದ್ದೀ" (ಆದಿ.49:3).**

ಏಸಾವನು ಮಾತ್ರವಲ್ಲ, ದೇಶದಲ್ಲಿ ಅನೇಕ ಚೊಚ್ಚಲ ಮಕ್ಕಳನ್ನು ನೋಡುತ್ತೇವೆ. ಲೋಕದಲ್ಲಿ ಮೊದಲನೆಯ ಚೊಚ್ಚಲ ಮಗನಾಗಿ ಹುಟ್ಟಿದವನು ಕಾಯಿನನು. ಆದಾಮ, ಹವ್ವಳಿಗೆ ಮಾತ್ರವಲ್ಲ, ಇಡೀ ಮಾನವಕುಲಕ್ಕೇ ಪ್ರಥಮ ಮಗನಾಗಿ ಹುಟ್ಟಿದನು. "ಯೆಹೋವನ ಅನುಗ್ರಹದಿಂದ ಗಂಡುಮಗುವನ್ನು ಪಡೆದಿದ್ದೇನೆ" ಎಂದು ಹವ್ವಳು ಹೇಳಿದಳು (ಆದಿ.4:1).

ಆದರೆ ಅವನು ತನ್ನ ಸಹೋದರನಾದ ಹೇಬೇಲನ ಮೇಲೆ ಹೊಟ್ಟೆಕಿಚ್ಚು ಪಟ್ಟು, ಅವನನ್ನು ಕೊಂದದ್ದರಿಂದ ಶಾಪಗ್ರಸ್ಥನಾಗಿ ಭೂಲೋಕದಲ್ಲಿ ಅಲೆಯುವವನಾಗಿ ದೇಶಭ್ರಷ್ಟನಾಗಿದ್ದನು (ಆದಿ.4:12). ಅವನ ಚೊಚ್ಚಲತನದ ಹಕ್ಕು ಸೇತನನ್ನು ಸೇರಿತು. ಅನಂತರ, ಯಾಕೋಬನಿಗೆ ಹಿರಿಯ ಮಗನಾಗಿ ರೂಬೇನನು ಹುಟ್ಟಿದನು. ಯಾಕೋಬನು ಅವನ ಬಗ್ಗೆ "ರೂಬೇನನೇ ನೀನು ನನ್ನ ಚೊಚ್ಚಲ ಮಗನೂ, ನನ್ನ ಚೈತನ್ಯಸ್ವರೂಪನೂ, ನನ್ನ ವೀರ್ಯಕ್ಕೆ ಪ್ರಥಮ ಫಲವಾಗಿದ್ದೀ" ಎಂದು ಹೇಳಿದರೂ ಸಹ, "ಆದರೂ ದಡವನ್ನು ಮೀರಿದ ಪ್ರವಾಹದಂತಿರುವ ನೀನು ಇನ್ನು ಪ್ರಮುಖನ ಸ್ಥಾನದಲ್ಲಿ ಇರುವದಿಲ್ಲ. ನಿನ್ನ ತಂದೆಯ ಹಾಸಿಗೆಯನ್ನು ಹತ್ತಿ ಅದನ್ನು ಹೊಲೆ ಮಾಡಿದ್ದಿಯಲ್ಲಾ" ಎಂದು ಗದರಿಸಿದನು (ಆದಿ.49:3,4). ರೂಬೇನನಿಗೆ ಸಿಗಬೇಕಾದ ಚೊಚ್ಚಲತನದ ಹಕ್ಕು, ಯೋಸೇಫನಿಗೆ ದೊರೆಯಿತು.

ಚೊಚ್ಚಲ ಮಕ್ಕಳಾಗಿ ಮಾರ್ಪಟ್ಟವರಿಗೆ ಸಿಗುವ ಮಹಾದೊಡ್ಡ ಆಶೀರ್ವಾದವು ದೇವರ ಬಲವೇ ಆಗಿದೆ. ಯೇಸುಕ್ರಿಸ್ತನು, ಜ್ಯೇಷ್ಠಪುತ್ರನಾಗಿರುವದರಿಂದ, ಆತನಿಗೆ ಅಭಿಷೇಕವೂ, ಬಲವೂ ದೊರಕಿತು. "ದೇವರು ನಜರೇತಿನ ಯೇಸುವನ್ನು ಪವಿತ್ರಾತ್ಮದಿಂದಲೂ, ಬಲದಿಂದಲೂ ಅಭಿಷೇಕಿಸಿದನು. ದೇವರು ಆತನ ಸಂಗಡ ಇದ್ದದರಿಂದ ಆತನು ಉಪಕಾರಗಳನ್ನು ಮಾಡುತ್ತಾ ಸೈತಾನನಿಂದ ಬಾಧಿಸಲ್ಪಡುತ್ತಿರುವವರೆಲ್ಲರನ್ನು ಗುಣಮಾಡುತ್ತಾ ಸಂಚರಿಸಿದನು" (ಅಪೊ.10:38). ದೇವಮಕ್ಕಳೇ, ಯೇಸುಕ್ರಿಸ್ತನು ತನ್ನ ರಕ್ತದಿಂದ ನಿಮ್ಮೆಲ್ಲರನ್ನೂ ವಿಮೋಚಿಸಿ ತನ್ನ ಮಕ್ಕಳಾಗುವ ಅಧಿಕಾರವನ್ನು ಕೊಟ್ಟಿದ್ದಾನೆ. ಆದ್ದರಿಂದ ಬಲವುಳ್ಳವರಾಗಿ, ಕ್ರಿಸ್ತನ ಕೃತ್ಯಗಳನ್ನು ಮಾಡಿರಿ. ಅದ್ಭುತಗಳಿಂದಲೂ, ಸೂಚಕ ಕಾರ್ಯಗಳಿಂದಲೂ, ವಾಕ್ಯವನ್ನು ಸ್ಥಿರಪಡಿಸಿ, ಎದ್ದು ಪ್ರಕಾಶಿಸಿರಿ. ಲೋಕದ ಕಟ್ಟಕಡೆಯವರೆಗೂ ಹೋಗಿ, ಎಲ್ಲಾ ಜನರನ್ನೂ ಆತನ ಶಿಷ್ಯರನ್ನಾಗಿ ಮಾಡಿರಿ.

***ನೆನಪಿಗೆ : "ಜನರು ಆತನ ಉಪದೇಶಕ್ಕೆ ಅತ್ಯಾಶ್ಚರ್ಯಪಟ್ಟರು; ಯಾಕಂದರೆ ಆತನು ಶಾಸ್ತ್ರಿಗಳಂತೆ ಉಪದೇಶ ಮಾಡದೆ...." (ಮಾರ್ಕ.1:22).***

ಡಿಸೆಂಬರ್ **18**

# ಪ್ರಥಮ ಫಲವಾದವನು!

ಬೆಳಿಗ್ಗೆ : ಓಬದ್ಯ 1
ಸಂಜೆ : ಪ್ರಕ. 9

**"ಆದರೆ ಕ್ರಿಸ್ತನು ಸತ್ತವರೊಳಗಿಂದ ಎದ್ದು ಬಂದೇ ಇದ್ದಾನೆ; ನಿದ್ರೆ ಹೋದವರಲ್ಲಿ ಪ್ರಥಮ ಫಲವಾದನು" (1ಕೊರಿಂ.15:20).**

ಪರಲೋಕದಿಂದ, ತಂದೆಯಾದ ದೇವರ ವಾಕ್ಯವನ್ನು ಭೂಮಿಗೆ ತೆಗೆದುಕೊಂಡು ಬಂದದ್ದರಿಂದ, ಯೇಸುಕ್ರಿಸ್ತನನ್ನು, ಜ್ಯೇಷ್ಠಪುತ್ರನಾಗಿ ತಂದೆಯು ಅಂಗೀಕರಿಸಿದನು. ಪರಲೋಕವು ಅಂಗೀಕರಿಸಿತು. ಸತ್ಯವೇದವು ಹೇಳುತ್ತದೆ. "ಯಾವ ಪ್ರಕಾರ ಆದಾಮನ ಸಂಬಂಧದಿಂದ ಎಲ್ಲರೂ ಸಾಯುವವರಾದರೋ ಅದೇ ಪ್ರಕಾರ ಕ್ರಿಸ್ತನ ಸಂಬಂಧದಿಂದ ಎಲ್ಲರೂ ಜೀವಿತರಾಗುವರು. ಆದರೆ ಪ್ರತಿಯೊಬ್ಬನು ತನ್ನ ತನ್ನ ತರಗತಿಯಲ್ಲಿರುವನು. ಕ್ರಿಸ್ತನು ಪ್ರಥಮ ಫಲ; ತರುವಾಯ ಕ್ರಿಸ್ತನ ಪ್ರತ್ಯಕ್ಷತೆಯಲ್ಲಿ ಆತನವರು ಎದ್ದು ಬರುವರು" (1ಕೊರಿಂ.15:22,23).

ಇಂದು ನಮ್ಮನ್ನು ಆತ್ಮೀಕ ರೀತಿಯಾಗಿ, ಕರ್ತನು ಪ್ರಥಮ ಫಲವನ್ನಾಗಿಸಿ, ಚೊಚ್ಚಲತನದ ಬಾಧ್ಯತೆಯನ್ನು ನೀಡಲು ಅಪೇಕ್ಷಿಸುತ್ತಾನೆ. ಯಾಕೋಬನು ತನ್ನ ಪ್ರತಿಯಲ್ಲಿ ಬರೆಯುವಾಗ, "ಆತನು ತನ್ನ ಸುಚಿತ್ತದ ಪ್ರಕಾರ, ಸತ್ಯಬೋಧನೆಯ ವಾಕ್ಯದಿಂದ ನಮ್ಮನ್ನು ಹುಟ್ಟಿಸಲಾಗಿ, ನಾವು ಆತನ ಸೃಷ್ಟಿಗಳಲ್ಲಿ ಪ್ರಥಮ ಫಲದಂತಾದೆವು" (ಯಾಕೋ.1:18). ಹೌದು. ದೇವಮಕ್ಕಳೇ, ನಿಮ್ಮನ್ನು ಪ್ರಥಮ ಫಲವಾಗಿ ಬದಲಾಯಿಸುವದೇ ಕರ್ತನ ಅಪೇಕ್ಷೆ. ಯೇಸುಕ್ರಿಸ್ತನು ಸತ್ತವರೊಳಗಿಂದ ಎದ್ದು ಬಂದದ್ದರಿಂದ, ಆತನು ಪ್ರಥಮ ಫಲವಾದನು. ಈಗ ನಿಮ್ಮಲ್ಲಿ ಬಹಳ ಶಕ್ತಿಯುತವಾಗಿ ಆತನು ಕ್ರಿಯೆ ಮಾಡುತ್ತಿದ್ದಾನೆ.

ನಮ್ಮ ಮನೆಯಲ್ಲಿ ಒಟ್ಟು ಇಬ್ಬರು ಹೆಣ್ಣುಮಕ್ಕಳು, ಇಬ್ಬರು ಗಂಡುಮಕ್ಕಳು. ನಾನು ಮೂರನೆಯವನಾಗಿ ಹುಟ್ಟಿದೆನು. ಲೋಕಪ್ರಕಾರವಾಗಿ ನಾನು ಜ್ಯೇಷ್ಠಪುತ್ರನಲ್ಲ. ಆದರೂ ಬಾಲ್ಯಪ್ರಾಯದಿಂದಲೇ ಸತ್ಯವೇದ ವಾಕ್ಯಗಳ ಮೇಲೆ ನನಗೆ ಹಂಬಲವಿತ್ತು. ಅನೇಕ ವಾಕ್ಯಗಳನ್ನು ಬಾಯಿಪಾಠ ಮಾಡುತ್ತಿದ್ದೆನು. ಕರ್ತನು ನನ್ನನ್ನು ಸೇವೆಗೆ ಕರೆದ ಮೇಲೆ ವಾಕ್ಯಗಳನ್ನು ಪರಿಶೀಲಿಸಿ ಬರೆಯುವ ಸೇವೆಯನ್ನು ಕೊಟ್ಟನು. ತನ್ನ ತಂದೆಯು ಸಾಯುವಾಗ, ಕರ್ತನು ಬೇರೆ ಯಾವ ಮಕ್ಕಳಿಗೂ ಆ ಮರಣದ ಬಗ್ಗೆ ಪ್ರಕಟಿಸಲಿಲ್ಲ. ಆದರೆ ನನಗೆ ಕನಸಿನ ಮೂಲಕ ತಿಳಿಸಿದ್ದರಿಂದ, ಕೂಡಲೆ ಗ್ರಾಮದಲ್ಲಿದ್ದ ನನ್ನ ತಂದೆಯನ್ನು ಭೇಟಿಯಾದೆನು. ಅವರು ಸಾಯುವಾಗ ನನ್ನನ್ನು ಮನಃಪೂರ್ವಕವಾಗಿ ಆಶೀರ್ವದಿಸಿದರು. ಲೋಕರೀತಿಯಾದ ಚೊಚ್ಚಲತನದ ಬಾಧ್ಯತೆಯೂ ನನಗೆ ಸಿಕ್ಕಿತು. ಕರ್ತನಿಂದ ಬರುವ ಆಶೀರ್ವಾದವೂ ಸಿಕ್ಕಿತು!

***ನೆನಪಿಗೆ : "ದೇವರು ತನ್ನ ಮಗನಿಗೆ ಅನೇಕ ಮಂದಿ ಸಹೋದರರಿದ್ದು, ಅವರಲ್ಲಿ ಆತನೇ ಹಿರಿಯನಾಗಿರಬೇಕೆಂದು ಉದ್ದೇಶಿಸಿ..." (ರೋಮಾ.8:29).***

ಡಿಸೆಂಬರ್ 19

# ಯೇಸುಕ್ರಿಸ್ತನ ಶಾಂತತೆ!

ಬೆಳಿಗ್ಗೆ : ಯೋನ. 1,2,3,4
ಸಂಜೆ : ಪ್ರಕ. 10

**"ಆದರೆ ಯೇಸು ಬೊಗ್ಗಿಕೊಂಡು ಬೆರಳಿನಿಂದ ನೆಲದ ಮೇಲೆ ಬರೆಯುತ್ತಾ ಇದ್ದನು" (ಯೋಹಾ. 8:6).**

ಒಂದು ದಿನ ಬೆಳಿಗ್ಗೆ, ಯೇಸುಕ್ರಿಸ್ತನು ದೇವಾಲಯಕ್ಕೆ ಬಂದಾಗ, ವ್ಯಭಿಚಾರದಲ್ಲಿ ಸಿಕ್ಕಿಬಿದ್ದ ಒಬ್ಬ ಹೆಂಗಸನ್ನು ಶಾಸ್ತ್ರಿಗಳೂ, ಫರಿಸಾಯರೂ ಯೇಸುಕ್ರಿಸ್ತನ ಮುಂದೆ ನಿಲ್ಲಿಸಿ, ಇಂಥವರನ್ನು ಕಲ್ಲೆಸೆದು ಕೊಲ್ಲಬೇಕೆಂದು ಮೋಶೆಯು ಧರ್ಮಶಾಸ್ತ್ರದಲ್ಲಿ ನಮಗೆ ಅಪ್ಪಣೆ ಕೊಟ್ಟಿದ್ದಾನೆ. ಈಕೆಯ ವಿಷಯದಲ್ಲಿ ನೀನು ಏನು ಹೇಳುತ್ತೀ? ಎಂದು ಕೇಳಿದರು. ಆದರೆ ಆತನೋ ಬೊಗ್ಗಿಕೊಂಡು ನೆಲದ ಮೇಲೆ ಬರೆಯುತ್ತಿದ್ದನು. ಅವರು ಆತನನ್ನು ಬಿಡದೆ ಕೇಳುತ್ತಿರುವಾಗ, ಆತನು "ನಿಮ್ಮಲ್ಲಿ ಪಾಪವಿಲ್ಲದವನು, ಯಾರೋ ಅವನೇ ಮೊದಲು ಆಕೆಯ ಮೇಲೆ ಕಲ್ಲನ್ನು ಹಾಕಲಿ" ಎಂದನು (ಯೋಹಾ.8:3–8).

ಮನುಷ್ಯನ ದೇಹದಲ್ಲಿರುವ ಅಂಗಗಳಲ್ಲಿ ನಾಲಿಗೆಯು ಹಲವಾರು ಕೆಟ್ಟ ಕಾರ್ಯಗಳನ್ನು ಮಾತಾಡುತ್ತದೆ. ಇತರರ ಮೇಲೆ ಅಪರಾಧ ಹೊರಿಸುತ್ತದೆ. ತನ್ನ ಕಣ್ಣಿನಲ್ಲಿರುವ ತೊಲೆಯನ್ನು ಯೋಚಿಸದೆ, ಇತರರ ಕಣ್ಣಿನಲ್ಲಿರುವ ರವೆಯನ್ನು ತೋರಿಸುತ್ತದೆ. ನ್ಯಾಯತೀರಿಸಲು ಪ್ರಯತ್ನಿಸುತ್ತದೆ. ಆದಿ ಕಾಲಗಳಲ್ಲಿ, ನಾಲಿಗೆಯಿಂದ ಬರುವ ಪಾಪಗಳನ್ನು ತಡೆಗಟ್ಟಲು, ಕ್ರೈಸ್ತರು ವಾರಕ್ಕೆ ಒಂದು ದಿನವನ್ನು ಮೌನದಿನವಾಗಿ ಆಚರಿಸುತ್ತಿದ್ದರು. ಹಿಂದೂಗಳಲ್ಲಿಯೂ, ಕ್ಯಾಥೋಲಿಕ್ ದೇವಾಲಯಗಳಲ್ಲಿಯೂ ಅನೇಕ ಮೌನ ಸ್ವಾಮೀಜಿಗಳನ್ನು ಕಾಣಬಹುದು. ಕರ್ತನಿಗೆ ಸಾಕ್ಷಿಯಾಗಿ ನಿಲ್ಲಬೇಕಾದ ಸಮಯಗಳಲ್ಲಿ ಪಾಪಿಗಳಿಗೆ ಪ್ರಸಂಗ ಮಾಡಬೇಕಾದ ಸಮಯದಲ್ಲಿ ನಿಶ್ಯಬ್ದವಾಗಿರುವದೂ ಸಹ ಪಾಪವಾಗಿದೆ.

ಯೇಸುಕ್ರಿಸ್ತನು ಯಾವಾಗ ಮಾತನಾಡಬೇಕು, ಯಾವಾಗ ಮೌನವಾಗಿರಬೇಕು ಎಂಬದನ್ನು ತಿಳಿದಿದ್ದನು. ಆತನ ಕೃಪಾಮಯವಾದ ನಾಲಿಗೆಯಿಂದ ಹುಟ್ಟಿದ ವಾಕ್ಯಗಳು, ಮಾನವರಿಗೆ ಆರೋಗ್ಯವನ್ನು ಕೊಟ್ಟ ಹಾಗೆಯೇ ಆತನ ಮೌನವೂ ಸಹ ಆರೋಗ್ಯವನ್ನು ಅನುಗ್ರಹಿಸಿತು. ಆ ಹೆಂಗಸನ್ನು ಕಲ್ಲೆಸೆದು ಕೊಲ್ಲಲು ಬಂದವರಿಗೆ ತನ್ನ ಬಾಯಿ ಮಾತನ್ನು ಕೊಡದೆ, ಅವರು ಮನಸ್ಸಾಕ್ಷಿಯಲ್ಲಿ ಚುಚ್ಚಲ್ಪಡುವಂತೆ ಆತನು ನಿಶ್ಯಬ್ದವಾಗಿದ್ದನು. ಅವರ ಮುಖಗಳನ್ನು ನೋಡಲು ಬಯಸದೆ, ತಲೆಯನ್ನು ಬೊಗ್ಗಿಸಿಕೊಂಡಿದ್ದನು. ಆ ಜನರು ಏನನ್ನೂ ಮಾತನಾಡಲಾರದೆ ಹೊರಟು ಹೋದರು. ದೇವಮಕ್ಕಳೇ, ಆತನ ಮೌನವು ಆ ಪಾಪಿಯಾದ ಹೆಂಗಸಿಗೆ ಬಿಡುಗಡೆ ಕೊಟ್ಟಿತು. ಧರ್ಮಶಾಸ್ತ್ರವನ್ನಲ್ಲ, ಕರುಣೆಯನ್ನೇ ಬಯಸುತ್ತೇನೆ ಎಂದು ಆತನು ಹೇಳಿದನು. ಆತನ ಮೌನವು ನಮಗೆ ಶಾಂತತೆಯನ್ನು ಸೂಚಿಸುತ್ತದೆ.

***ನೆನಪಿಗೆ : "ನನಗೆ ಯಜ್ಞವು ಬೇಡ, ಕರುಣೆಯೇ ಬೇಕು ಎಂಬದರ ಅರ್ಥವನ್ನು ನೀವು ತಿಳಿದಿದ್ದರೆ...." (ಮತ್ತಾ.12:7).***

ಡಿಸೆಂಬರ್ 20

# ವಿಮೋಚಿಸುತ್ತಾನೆ!

ಬೆಳಿಗ್ಗೆ : ಮೀಕ. 1,2,3
ಸಂಜೆ : ಪ್ರಕ. 11

**"ಯೆಹೋವನು ತನ್ನ ಸೇವಕರ ಪ್ರಾಣವನ್ನು ವಿಮೋಚಿಸುತ್ತಾನೆ; ಆತನ ಆಶ್ರಿತರಲ್ಲಿ ಒಬ್ಬರಾದರೂ ಅಪರಾಧಿಯೆಂದು ಎಣಿಸಲ್ಪಡುವದಿಲ್ಲ" (ಕೀರ್ತ.34:22).**

ನೀವು 'ವಿಶ್ವಾಸಿಗಳು' ಎಂಬ ಸ್ಥಾನದಿಂದ ಒಂದು ಹೆಜ್ಜೆ ಮುಂದಕ್ಕೆ ಬನ್ನಿರಿ. ಕರ್ತನ ಸೇವಕನು ಎಂದು ಕರೆಯಲ್ಪಡಲು ಒಪ್ಪಿಸಿಕೊಡಿರಿ. "ಕರ್ತನು ಯಾವ ಸೇವೆಯನ್ನು ಕೊಟ್ಟರೂ ಸರಿ, ನಾನು ಅದನ್ನು ಮಾಡುವೆನು. ಸೇವಕರ ಬಾಧ್ಯತೆಯೂ, ಮಹಿಮೆಯೂ ನನಗೆ ಬೇಕು" ಎಂದು ಕೇಳಿರಿ. ನೀವು ಸೇವಕರಾಗಬೇಕೆಂದರೆ, ಚೆನ್ನಾಗಿ ಪ್ರಸಂಗ ಮಾಡಬೇಕೆಂದು ಅದನ್ನೇ ಯೋಚಿಸದಿರಿ. ಚಿಕ್ಕ ಮಕ್ಕಳಿಗೆ ಭಾನುವಾರದ ಪಾಠಶಾಲೆಯನ್ನು ನಡೆಸಿದರೂ, ಕರ್ತನಿಗಾಗಿ ಹಾಡುವದೂ, ಸಂಗೀತ ವಾದ್ಯಗಳನ್ನು ಬಾರಿಸುವದೂ ಒಂದು ಸೇವೆಯೇ. ಆಲಯಕ್ಕೆ ಬೇಗನೆ ಬಂದು ಕುರ್ಚಿಗಳನ್ನು ಹಾಕುವದು, ಕುರ್ಚಿಯಲ್ಲಿ ಕೂತುಕೊಳ್ಳುವವರ ಮೇಲೆ ಅಭಿಷೇಕವು ಇಳಿದು ಬರಬೇಕೆಂದು ಪ್ರಾರ್ಥಿಸುವದೂ ಒಂದು ಸೇವೆಯಾಗಿದೆ.

ಆದರೆ, ದಿನ ಕಳೆಯುತ್ತಾ, ಕಳೆಯುತ್ತಾ, ನಿಮ್ಮ ಕರೆಯನ್ನೂ, ಆಯ್ಕೆಯನ್ನೂ ದೃಢಪಡಿಸಿಕೊಳ್ಳಿರಿ. ಕರ್ತನು ನಿಮಗಿಟ್ಟಿರುವ ಸೇವೆಯೇನು? ಅದು ಸೌವಾರ್ತಿಕನಾ? ಕುರುಬನಾ? ಅಪೊಸ್ತಲನಾ? ಸತ್ಯವೇದವನ್ನು ಕಲಿಸುವ ಬೋಧಕನಾ? ಎಂಬದನ್ನು ತಿಳಿದುಕೊಳ್ಳಿರಿ. ಯೇಸುಕ್ರಿಸ್ತನು ಹೇಳಿದನು, "ಯಾವನಾದರೂ ನನ್ನ ಸೇವೆಯನ್ನು ಮಾಡುವವನಾದರೆ, ಅವನು ನನ್ನ ಹಿಂದೆ ಬರಲಿ ಮತ್ತು ಎಲ್ಲಿ ನಾನು ಇರುತ್ತೇನೋ ಅಲ್ಲಿ ನನ್ನ ಸೇವಕನು ಸಹ ಇರುವನು" (ಯೋಹಾ.12:26). ಸೇವಕನ ಕೆಲಸವೇನು? ಅವನು ಕರ್ತನನ್ನು ಪ್ರೀತಿಸಿ, ತನ್ನ ಸ್ತುತಿಯಿಂದ ಕರ್ತನನ್ನು ಮಹಿಮೆಪಡಿಸಬೇಕು. ನಂತರ ಕರ್ತನ ನಾಮವನ್ನು ಇತರರಿಗೆ ತಿಳಿಯಪಡಿಸಿ, ಕರ್ತನ ರಾಜ್ಯವನ್ನು ವಿಸ್ತಾರ ಮಾಡುವವನಾಗಿರಬೇಕು.

ಇಸ್ಲಾಂ ಮಾರ್ಗದಿಂದ ರಕ್ಷಣೆ ಹೊಂದಿ, ಬಹಳ ವೈರಾಗ್ಯವಾಗಿ ಸೇವೆ ಮಾಡಿದಂಥ ಒಬ್ಬ ಸೇವಕನು ನನಗೆ ಗೊತ್ತು. ಆದರೆ ಅವರ ಜೀವಿತದಲ್ಲಿ ಶೋಧನೆಯ ಮೇಲೆ ಶೋಧನೆಯು ಬಂತು. ಇದರಿಂದ ಅವರು ಹಿಂಜರಿದರು. ಕೆಲವು ವರ್ಷಗಳು ಹಾಗೆಯೇ ಕಳೆದರೂ, ಅವರು ಸಾಯುವಾಗ, ಕರ್ತನು ಅವರಿಗೆ ಗ್ರಹಿಕೆಯುಳ್ಳ ಹೃದಯವನ್ನು ಕೊಟ್ಟನು. ಹೆಂಡತಿ ಮಕ್ಕಳೊಂದಿಗೆ ಸಮಾಧಾನವಾದರು. ಆದಿಪ್ರೀತಿಗೆ ತಿರುಗಿದರು. "ಕರ್ತನು ತನ್ನ ಸೇವಕರ ಪ್ರಾಣವನ್ನು ವಿಮೋಚಿಸುತ್ತಾನೆ" ಎಂಬ ವಾಕ್ಯ ಎಷ್ಟು ಸತ್ಯವಾದದ್ದು. (ಕೀರ್ತ.34:22).

***ನೆನಪಿಗೆ : "ನೀನು ಎಲ್ಲಿಂದ ಬಿದ್ದಿದ್ದೀಯೋ ಅದನ್ನು ನಿನ್ನ ನೆನಪಿಗೆ ತಂದುಕೊಂಡು, ದೇವರ ಕಡೆಗೆ ತಿರುಗಿಕೋ, ನೀನು ಮೊದಲು ಮಾಡುತ್ತಿದ್ದ ಕೃತ್ಯಗಳನ್ನು ಮಾಡು" (ಪ್ರಕ.2:5).***

ಡಿಸೆಂಬರ್ 21

# ಬರುವಿಕೆಯ ಸಮಯ!

ಬೆಳಿಗ್ಗೆ : ಮೀಕ. 4,5
ಸಂಜೆ : ಪ್ರಕ. 12

**"ಆ ದಿನದ ವಿಷಯವೂ, ಆ ಗಳಿಗೆಯ ವಿಷಯವೂ ನನ್ನ ತಂದೆಯೊಬ್ಬನಿಗೆ ತಿಳಿಯುವದೇ ಹೊರತು ಮತ್ತಾರಿಗೂ ತಿಳಿಯದು" (ಮತ್ತಾ.24:36).**

ಬರುವಿಕೆಯನ್ನು ಸೂಚಿಸುವ ಎಲ್ಲಾ ಕಾರ್ಯಗಳೂ ನೆರವೇರಿದೆ. ಎಲ್ಲೆಡೆಯೂ ಪ್ರವಾದನೆಗಳು ನೆರವೇರುವದನ್ನು ಕಾಣುತ್ತೇವೆ. ಬರುವಿಕೆಯ ಪ್ರಸಂಗಗಳನ್ನು ಕೇಳುತ್ತೇವೆ. ಮದಲಗಿತ್ತಿಯಾಗಿರುವ ಸಭೆಯನ್ನು, ಕರ್ತನು ಪರಲೋಕಕ್ಕೆ ಕೊಂಡೊಯ್ಯಲು ತ್ವರೆಯಾಗಿ ಸಿದ್ಧಪಡಿಸುತ್ತಿದ್ದಾನೆ. ಕರ್ತನ ಬರೋಣವೋ ಅನಿರೀಕ್ಷಿತ ಸಮಯದಲ್ಲಿ ಕ್ಷಣ ಮಾತ್ರದಲ್ಲಿ ಬರುವದು. ಸತ್ಯವೇದವು ಹೇಳುತ್ತದೆ, "ಆ ದಿನದ ವಿಷಯವೂ ಆ ಗಳಿಗೆಯ ವಿಷಯವೂ ನನ್ನ ತಂದೆಯೊಬ್ಬನಿಗೆ ತಿಳಿಯುವದೇ ಹೊರತು ಮತ್ತಾರಿಗೂ ತಿಳಿಯದು. ಪರಲೋಕದಲ್ಲಿರುವ ದೂತರಿಗೂ ತಿಳಿಯದು" (ಮತ್ತಾ.24:36).

ನೀವು ಯೇಸುವಿನ ಬರುವಿಕೆಗೆ ಸಿದ್ಧರಾಗುವದು ಮಾತ್ರವಲ್ಲ, ನಿಮ್ಮ ಬಂಧುಗಳು, ಸ್ನೇಹಿತರಾದ ಇತರರನ್ನೂ ಸಿದ್ಧಪಡಿಸಬೇಕು. "ಕರ್ತನ ಪ್ರತ್ಯಕ್ಷತೆಯ ದಿನವು ಸಮೀಪಿಸುತ್ತಾ ಬರುತ್ತದೆ ಎಂದು ನೀವು ನೋಡುವದರಿಂದ, ಒಬ್ಬರನ್ನೊಬ್ಬರು ಎಚ್ಚರಿಸೋಣ" (ಇಬ್ರಿ.10:25). ಜಲಪ್ರಳಯದಿಂದ ಭೂಮಿಯನ್ನು ಅಳಿಸಿಬಿಡುವದಕ್ಕೆ, ಏಳು ದಿನಗಳ ಮುಂಚೆಯೇ, ಕರ್ತನು ನೋಹನನ್ನೂ, ಅವನ ಕುಟುಂಬದವರನ್ನೂ, ನಾವೆಯೊಳಗೆ ಸೇರಲು ಹೇಳಿದನು. ಕರ್ತನು ಕೃಪೆಯ ಕಾಲಗಳನ್ನು ಕೂಡಿಸುತ್ತಲೇ ಬಂದನು (ಆದಿ.7:4). ಆದರೆ ಈಗಲೋ ಕೃಪೆಯ ಕಾಲಗಳು ಅಂತ್ಯಕ್ಕೆ ಬಂದಿವೆ. ಕರ್ತನು ಆಯ್ಕೆ ಮಾಡಿದ ತನ್ನ ಭಕ್ತರಿಗೆ ಇದು ಕೊನೆಯ ಕಾಲವೆಂಬದನ್ನೂ, ಸಮಯವು ಸಮೀಪವಾಗಿದೆ ಎಂಬದನ್ನೂ ಸೂಚಿಸುತ್ತಲೇ ಇದ್ದಾನೆ.

ಅದೇ ಪ್ರಕಾರವಾಗಿ ಸೊದೋಮ್ ಗೊಮೋರಾವನ್ನು ಕರ್ತನು ಅಳಿಸುವದಕ್ಕೆ ಮುಂಚೆ, ಆ ರಹಸ್ಯವನ್ನು ಲೋಟನಿಗೆ ತಿಳಿಯಪಡಿಸಿ, ಅವನ ಕುಟುಂಬದವರನ್ನು ಹೊರಗೆ ಬರಲು ತ್ವರೆಪಡಿಸಿದನು. "ಇಲ್ಲಿ ನಿನಗೆ ಇನ್ಯಾರಿದ್ದಾರೆ? ಅಳಿಯಂದಿರನ್ನೂ ಗಂಡು ಹೆಣ್ಣು ಮಕ್ಕಳನ್ನೂ ಪಟ್ಟಣದಲ್ಲಿರುವ ನಿನ್ನವರಾದ ಬೇರೆ ಎಲ್ಲರನ್ನೂ ಊರ ಹೊರಕ್ಕೆ ಕರೆದುಕೊಂಡು ಬಾ" ಅಂದನು (ಆದಿ.19:12).

ದೇವಮಕ್ಕಳೇ, ಮೊದಲನೆಯದಾಗಿ ನೀವು ಸಿದ್ಧರಾಗಬೇಕು. ಎರಡನೆಯದಾಗಿ ಜನರನ್ನು ಸಿದ್ಧಪಡಿಸಬೇಕು. ಮೂರನೆಯದಾಗಿ ಆತನ ಬರುವಿಕೆಗೆ ಯಾವಾಗಲೂ ಪರಿಶುದ್ಧತೆಯೊಂದಿಗೆ ಕಾಯುತ್ತಲೇ ಇರಬೇಕು.

***ನೆನಪಿಗೆ : "ಕರ್ತನಾದ ಯೆಹೋವನು ತನ್ನ ಸೇವಕರಾದ ಪ್ರವಾದಿಗಳಿಗೆ ತನ್ನ ರಹಸ್ಯವನ್ನು ತಿಳಿಸದೆ ಏನೂ ಮಾಡನು" (ಆಮೋ.3:7).***

ಡಿಸೆಂಬರ್ 22

# ಸದ್ಧರ್ಮಿಯಾದ ಮೊಳಿಕೆ!

ಬೆಳಿಗ್ಗೆ : ಮೀಕ. 6,7
ಸಂಜೆ : ಪ್ರಕ. 13

**"ಯೆಹೋವನು ಹೀಗನ್ನುತ್ತಾನೆ – ಇಗೋ, ನಾನು ಮುಂದಿನ ಕಾಲದಲ್ಲಿ ದಾವೀದನೆಂಬ ಮೂಲದಿಂದ ಸದ್ಧರ್ಮಿಯಾದ ಮೊಳಿಕೆಯನ್ನು ಚಿಗುರಿಸುವೆನು" (ಯೆರೆ.23:5).**

ಯೇಸುಕ್ರಿಸ್ತನನ್ನು ಕುರಿತಾದ ಪ್ರವಾದನೆ ಇದು. ಆತನು "ಸದ್ಧರ್ಮಿಯಾದ ಮೊಳಿಕೆ" ಎಂದು ಕರೆಯಲ್ಪಟ್ಟನು. ಕ್ರಿಸ್ತನ ಮೂಲಕ ದೇವರ ನೀತಿಯು ಪ್ರಕಟವಾಯಿತು. ಅದುವರೆಗೂ ಮನುಷ್ಯನ ನೀತಿಯು ಕೊಳಕಾದ ಹರಿದ ಬಟ್ಟೆಗಳಂತಿದ್ದವು. ಕಲ್ವಾರಿ ಶಿಲುಬೆಯಲ್ಲಿ ಎರಡು ಮಹಾ ದೊಡ್ಡ ತ್ಯಾಗಗಳು ಪ್ರಕಟವಾಯಿತು. ಒಂದು ಕ್ರಿಸ್ತನ ಪ್ರೀತಿ, ಇನ್ನೊಂದು ಕ್ರಿಸ್ತನ ನೀತಿ. ಆ ದೈವನೀತಿಯನ್ನು ನೀವೂ, ನಾನೂ ಧರಿಸಿದರೆ ಮಾತ್ರವೇ ತಂದೆಯಾದ ದೇವರ ಮುಂದೆ ನಿಲ್ಲಲು ಸಾಧ್ಯ. ನಿಮ್ಮ ಅನೀತಿಗಳನ್ನು ದ್ರೋಹಗಳನ್ನು, ದುಷ್ಕೃತ್ಯಗಳನ್ನು, ಪಾಪಗಳನ್ನು ಯೇಸುಕ್ರಿಸ್ತನೇ ಹೊತ್ತುಕೊಂಡು ನೀವು ದೈವನೀತಿಯಾಗುವಂತೆ ಶಿಲುಬೆಯಲ್ಲಿ ಪ್ರಾಣ ಬಿಟ್ಟನು. ಅದನ್ನು ಅಪೊ. ಪೌಲನು ಬರೆಯುವಾಗ, "ನಾವು ಆತನಲ್ಲಿ ದೇವರಿಗೆ ಸಮರ್ಪಕರಾದ ನೀತಿಸ್ವರೂಪಿಗಳಾಗುವಂತೆ ದೇವರು ಪಾಪ ಜ್ಞಾನವಿಲ್ಲದ ಆತನನ್ನು ನಮಗೋಸ್ಕರ ಪಾಪ ಸ್ವರೂಪಿಯಾಗ ಮಾಡಿದನು" (2ಕೊರಿಂ.5:21).

ನೀವು ದೈವನೀತಿಯನ್ನು ಇಂದು ಪಡೆದು, ದೇವರ ಸಮ್ಮುಖದಲ್ಲಿ ನಿಲ್ಲಬೇಕಾದರೆ, ಫರಿಸಾಯನ ಹಾಗಲ್ಲ, ಸುಂಕದವನ ಹಾಗೆ ನಿಮ್ಮನ್ನು ತಗ್ಗಿಸಿ ದೈವನೀತಿಯನ್ನು ಹೊಂದಿಕೊಳ್ಳಬೇಕು. "ನಮ್ಮ ಪಾಪಗಳನ್ನು ಒಪ್ಪಿಕೊಂಡು ಅರಿಕೆ ಮಾಡಿದರೆ, ಆತನು ನಂಬಿಗಸ್ಥನೂ, ನೀತಿವಂತನೂ ಆಗಿರುವದರಿಂದ, ನಮ್ಮ ಪಾಪಗಳನ್ನು ಕ್ಷಮಿಸಿಬಿಟ್ಟು, ಸಕಲ ಅನೀತಿಯನ್ನೂ ಪರಿಹರಿಸಿ ನಮ್ಮನ್ನು ಶುದ್ಧಿ ಮಾಡುವನು" (1 ಯೋಹಾ.1:9). ಪರಿಶುದ್ಧತೆಯನ್ನು ಕಾದುಕೊಳ್ಳುವಿರಾದರೆ, ಮಹಿಮೆಯು ನಿಮ್ಮನ್ನು ತುಂಬಿಸುತ್ತಲೇ ಇರುವದು. ಪರಿಶುದ್ಧತೆಗೆ ವಿರುದ್ಧವಾದ ಕಾರ್ಯಗಳೂ, ವಿಗ್ರಹಾರಾಧನೆಗಳೂ, ಆಲಯದೊಳಗೆ ಬರುವದಾದರೆ, ನಿಮ್ಮೊಳಗಿಂದ ಮಹಿಮೆಯು ಹೊರಗೆ ಹೋಗಿ ಬಿಡುವದು ಎಂದು ಎಚ್ಚರಿಸಿದನು ಪ್ರವಾದಿಯಾದ ಯೆಹೆಜ್ಕೇಲನು.

ಎಲ್ಲಿ ಮಹಿಮೆಯು ಇರುವದೋ, ಅಲ್ಲಿ ದೇವರ ಕಾವಲಿರುವದು. ನೀವು ಪರಿಶುದ್ಧತೆಯನ್ನು ಆರಿಸಿಕೊಂಡರೆ, ನಿಮ್ಮ ಮೇಲೆಯೂ ನಿಮ್ಮ ಸುತ್ತಲೂ ಪರಲೋಕದ ಬೆಂಕಿಯು ಆವರಿಸುವದು. ಕರ್ತನು ನಿಮಗೆ ಕಾವಲಿರುವದರಿಂದ ನೀವು ಸುರಕ್ಷಿತರಾಗಿರುವಿರಿ. ದೇವಮಕ್ಕಳೇ, ದೈವನೀತಿಯನ್ನು ಧರಿಸಿಕೊಂಡರೆ, ನೀತಿವಂತರು ಸೂರ್ಯನ ಹಾಗೆ ಪ್ರಕಾಶಿಸುವರು ಎಂಬ ವಾಕ್ಯದ ಪ್ರಕಾರವೇ ನೀವು ಪ್ರಕಾಶಿಸುವಿರಿ.

***ನೆನಪಿಗೆ : "ಅನ್ಯಾಯ ಮಾಡುವವನು ಇನ್ನೂ ಅನ್ಯಾಯ ಮಾಡಲಿ; ಮೈಲಿಗೆಯಾದವನು ತನ್ನನ್ನು ಇನ್ನೂ ಮೈಲಿಗೆ ಮಾಡಿಕೊಳ್ಳಲಿ" (ಪ್ರಕ.22:11).***

ಡಿಸೆಂಬರ್ 23

# ಕ್ರಿಸ್ತನೆಂಬ ತಳಿರು!

ಬೆಳಿಗ್ಗೆ : ನಹೂಮ. 1,2,3
ಸಂಜೆ : ಪ್ರಕ. 14

**"ಇಷಯನ ಬುಡದಿಂದ ಒಂದು ಚಿಗುರು ಒಡೆಯುವದು, ಅದರ ಬೇರಿನಿಂದ ಹೊರಟ ತಳಿರು ಫಲಿಸುವದು" (ಯೆಶಾ. 11:1).**

ಇದೂ ಸಹ ಕ್ರಿಸ್ತನ ಕುರಿತು ಒಂದು ಪ್ರವಾದನೆಯಾಗಿದೆ. ಕ್ರಿ.ಪೂ. 900 ವರ್ಷಗಳ ಮುಂಚೆ ಜೀವಿಸಿದ ಯೆಶಾಯನು, "ಇಗೋ, ಒಬ್ಬ ಕನ್ನಿಕೆಯು ಗರ್ಭಿಣಿಯಾಗಿ ಮಗನನ್ನು ಹಡೆದು, ಅವನಿಗೆ ಇಮ್ಮಾನುವೇಲ್ ಎಂದು ಹೆಸರಿಡುವಳು" (ಯೆಶಾ.7:14). "ಒಂದು ಮಗು ನಮಗಾಗಿ ಹುಟ್ಟಿದೆಯಷ್ಟೆ ವರದ ಮಗನು ನಮಗೆ ದೊರೆತನು" (ಯೆಶಾ.9:6) ಎಂದು ಪ್ರವಾದನೆ ಹೇಳಿದನು.

ಈ ಸ್ಥಳದಲ್ಲಿ ಯೇಸುಕ್ರಿಸ್ತನನ್ನು ಒಂದು ತಳಿರಿಗೆ ಹೋಲಿಸಿ ಮಾತನಾಡುತ್ತಾನೆ. ಇಷಯನ ವಂಶದಲ್ಲಿ, ದಾವೀದನ ಕುಮಾರನಾಗಿ ಯೇಸುವನ್ನು ಅವತರಿಸಲು ಚಿತ್ತಗೊಂಡನು. ಮೇಲ್ಕಂಡ ವಾಕ್ಯದಲ್ಲಿ ನಾಲ್ಕು ಕಾರ್ಯಗಳನ್ನು ಸೂಚಿಸುತ್ತಾನೆ. ಮೊದಲನೆಯದಾಗಿ, ಆತನು ಬುಡ, ಎರಡನೆಯದಾಗಿ ಒಡೆಯುವ ಚಿಗುರು, ಮೂರನೆಯದಾಗಿ, ಇಷಯನ ಬೇರು. ನಾಲ್ಕನೆಯದಾಗಿ, ಫಲಿಸುವ ತಳಿರು. ಆದಾಮನನ್ನು ದೇವರು ಸೃಷ್ಟಿಸಿದ ನಂತರ, ಕ್ರಿಸ್ತನವರೆಗೂ 4,000 ವರ್ಷಗಳಾದವು. ಅಷ್ಟು ತಲೆಮಾರುಗಳನ್ನೂ, ಕದಲಿಸದ ಸತ್ಯವಾಗಿ, ಸತ್ಯವೇದವೊಂದೇ ಪ್ರದರ್ಶಿಸಿದೆ. ಇಲ್ಲಿ ಕೊನೆಯದಾಗಿ, ಇಷಯನಿಂದ ಯೇಸುವಿನವರೆಗೂ ಹದಿನಾಲ್ಕು ತಲೆಮಾರುಗಳನ್ನು ಕಾಣಬಹುದು (ಲೂಕ.3:23–28).

ಯೋಸೇಫನಿಗೆ ನಿಶ್ಚಿತಾರ್ಥವಾಗಿದ್ದ ಕನ್ಯೆಯಾದ ಮರಿಯಳೆಂಬವಳ ಬಳಿಗೆ. ಗಬ್ರಿಯೇಲನೆಂಬ ದೇವದೂತನು ದೇವರಿಂದ ಕಳುಹಿಸಲ್ಪಟ್ಟನು. "ಆತನು ಮಹಾಪುರುಷನಾಗಿ ಪರಾತ್ಪರನ ಕುಮಾರನೆನಿಸಿಕೊಳ್ಳುವನು. ಇದಲ್ಲದೆ ದೇವರಾಗಿರುವ ಕರ್ತನು ಆತನ ಮೂಲಪಿತನಾದ ದಾವೀದನ ಸಿಂಹಾಸನವನ್ನು ಆತನಿಗೆ ಕೊಡುವನು (ಲೂಕ.1:32) ಎಂದು ಪ್ರಕಟಿಸಿದನು. ಆತನೇ ಯೇಸುಕ್ರಿಸ್ತನು. ಆತನು ಆದಾಮನ ಹಾಗೆ ಮೂವತ್ತು ವರ್ಷದವನಾಗಿ ಹುಟ್ಟಲಿಲ್ಲ. ಚಿಕ್ಕ ಮಗುವಾಗಿಯೇ ಹುಟ್ಟಿದನು. ಪ್ರತಿಯೊಂದು ಪ್ರಾಯದಲ್ಲೂ, ಮನುಷ್ಯನಿಗೆ ಎಂಥೇಂಥ ಶೋಧನೆಗಳು ಬರುತ್ತವೆ. ಅದನ್ನು ಹೇಗೆ ಜಯಿಸುವದು ಎಂಬದಕ್ಕೆ ಆತನೇ ಮಾದರಿಯಾಗಿದ್ದನು. ಆತನ ಮೂಲಕ ಪ್ರಕಟವಾದ ದೇವಪ್ರೀತಿಯನ್ನು ತಿಳಿದುಕೊಳ್ಳಿರಿ. ಆತನು ಬುಡದಿಂದ ಒಡೆಯುವ ಚಿಗುರಿನ ಹಾಗೆ ನಿಮ್ಮ ಮುಂದೆ ಹುಟ್ಟಿದ್ದಾನೆ. ಆ ಪ್ರೀತಿಗೆ ನಿಮ್ಮ ಹೃದಯದಲ್ಲಿ ಸ್ಥಳವುಂಟೇ?

ದೇವಮಕ್ಕಳೇ, ತಂದೆಯಾದ ದೇವರು ತನ್ನ ಕುಮಾರನಾದ ಯೇಸುವನ್ನು ತ್ಯಾಗದಿಂದ ನಮಗೆ ಕೊಟ್ಟ ಪ್ರೀತಿಯನ್ನು ನೆನಸಿರಿ. ಆತನು ಪ್ರೀತಿಸ್ವರೂಪನಾಗಿರುವದರಿಂದ ಪರಲೋಕದ ಸಿಂಹಾಸನವನ್ನು ತ್ಯಜಿಸಿ ಮನುಷ್ಯನಾಗಿ ಹುಟ್ಟಿದನು.

***ನೆನಪಿಗೆ : "ಇಗೋ, ಮೊಳಿಕೆಯೆಂಬ ಪುರುಷನು! ಅವನು ಇದ್ದಲ್ಲಿಯೇ ವೃದ್ಧಿಯಾಗಿ ಯೆಹೋವನ ಆಲಯವನ್ನು ಕಟ್ಟಿಸುವನು" (ಜೆಕ.6:12).***

ಡಿಸೆಂಬರ್ 24

# ಹಬ್ಬದ ಹರ್ಷ!

ಬೆಳಿಗ್ಗೆ : ಹಬಕ್ಕೂಕ 1,2,3
ಸಂಜೆ : ಪ್ರಕ. 15

**"ಯೆಹೋವನ ಆನಂದವೇ ನಿಮ್ಮ ಆಶ್ರಯವಾಗಿದೆ" (ನೆಹೆ.8:10)**

ಇಸ್ರಾಯೇಲ್ಯರ ನಡುವೆ, ಹಬ್ಬವನ್ನು ಆಚರಿಸುವ ಹಾಗೆ ಒಂದು ಸಂತೋಷವಾದ ದಿನ ಬಂದಿತು. ನೆಹೆಮೀಯನು ಹೇಳಿದನು; "ಹೋಗಿ ಮೃಷ್ಟಾನ್ನವನ್ನೂ ಮಧುರಪಾನವನ್ನೂ ತೆಗೆದುಕೊಳ್ಳಿರಿ; ತಮಗೋಸ್ಕರ ಏನೂ ಸಿದ್ಧಮಾಡದವರಿಗೆ ಭಾಗಗಳನ್ನು ಕಳುಹಿಸಿರಿ. ಈ ದಿನವು ನಮ್ಮ ಕರ್ತನಿಗೆ ಪ್ರತಿಷ್ಠಿತ ದಿನವಾಗಿರುವದರಿಂದ ವ್ಯಸನಪಡಬೇಡಿರಿ; ಯೆಹೋವನ ಆನಂದವೇ ನಿಮ್ಮ ಆಶ್ರಯವಾಗಿದೆ ಅಂದನು" (ನೆಹೆ.8:10).

ಭಾರತದಲ್ಲಿ ಕ್ರೈಸ್ತರಿಗೆ, ಹಬ್ಬಗಳು ಬಹಳ ಕಡಿಮೆ ಈಸ್ಟರ್ ಮತ್ತು ಕ್ರಿಸ್‌ಮಸ್ ನಮಗೆ ಮುಖ್ಯವಾದ ಹಬ್ಬಗಳು. ಆದರೆ ಹಿಂದೂಗಳಿಗೆ ಹೇರಳವಾದ ಹಬ್ಬಗಳು ಬರುತ್ತವೆ. ಹೇರಳವಾದ ರಜೆ ದಿನಗಳು ಅವರಿಗೆ ಕೊಡಲ್ಪಡುತ್ತದೆ. ಕ್ರೈಸ್ತರಿಗಿರುವ ಎರಡು ಹಬ್ಬಗಳಲ್ಲೂ ಅನೇಕರು ಹಳೆಯ ಪುರಾಣಗಳನ್ನು ಹಿಡಿದುಕೊಂಡು, ಈ ಹಬ್ಬಕ್ಕೆ ಹಿಂದೆ ಆ ವಿಗ್ರಹವಿದೆ. ಈ ಪಾರಂಪರ್ಯವಿದೆ ಎಂದೆಲ್ಲಾ ಹೇಳುತ್ತಾರೆ. ಯೇಸುಕ್ರಿಸ್ತನು ಹುಟ್ಟಿದ್ದೂ ಸತ್ತು ಜೀವಿತನಾಗಿ ಎದ್ದು ಬಂದದ್ದೂ ಸತ್ಯ. ಇದನ್ನು ಪ್ರತಿಯೊಂದು ಗ್ರೀಕ್ ಹಬ್ಬಗಳಿಗೂ ಅನ್ಯದೇವರುಗಳಿಗೂ ಹೋಲಿಸುತ್ತಾ ಇದ್ದರೆ, ಸಂತೋಷವಾಗಿ ಬಾಳಲಾಗುವದಿಲ್ಲ.

ಅದೇ ರೀತಿಯಾಗಿ ಕೆಲವರು, ಹಬ್ಬಗಳಲ್ಲಿ ಆನಂದದಿಂದ ಆಹಾರ ಸೇವಿಸುವದಕ್ಕೆ ವಿರುದ್ಧವಾಗಿ ದೂರು ಹೇಳಿ, "ಎಷ್ಟೋ ಮಂದಿ ಹಸಿವಿನಿಂದಿದ್ದಾರೆ, ಹೊಸ ಬಟ್ಟೆಯಿಲ್ಲದಿದ್ದಾರೆ. ನಾವು ಚೆನ್ನಾಗಿ ಬಟ್ಟೆಗಳನ್ನು ಉಡುವದು ತಪ್ಪು" ಎಂದು ಬೋಧಿಸುತ್ತಾರೆ. ಆದರೆ ಸತ್ಯವೇದವು ಹೇಳುತ್ತದೆ; "ದಿನಗಳನ್ನು ವಿಶೇಷ ಮಾಡಿಕೊಳ್ಳುವವನು ಕರ್ತನಿಗೆಂದು ವಿಶೇಷ ಮಾಡಿಕೊಳ್ಳುತ್ತಾನೆ" ಕ್ರಿಸ್‌ಮಸ್ ದಿನಗಳಲ್ಲಿ ಒಬ್ಬ ದೇವದೂತನು ಇಳಿದು ಬಂದು, ಜನರು ಕರ್ತನನ್ನು ಸ್ತುತಿಸುವದನ್ನೂ, ಆರಾಧಿಸುವದನ್ನೂ, ಆ ದಿನಗಳನ್ನು ಸುವಾರ್ತೆಯನ್ನು ಸಾರಲು ಉಪಯೋಗಿಸುವದನ್ನೂ ಕಂಡು ಬಹಳ ಸಂತಸಗೊಂಡನು. ಆ ದೂತನು ಹೇಳಿದನು, "ಜನರು ಹರ್ಷದಿಂದಿರುವದು ನನಗೇ ಎಷ್ಟು ಸಂತೋಷವಾಗಿದೆ, ಕರ್ತನಿಗೆ ಎಷ್ಟು ಸಂತೋಷವಿರಬಹುದು" ಎಂದನು.

ದೇವಮಕ್ಕಳೇ, ಫರಿಸಾಯರ ಹಾಗೆ ತಪ್ಪು ಕಂಡುಹಿಡಿಯುವದನ್ನು ಬಿಟ್ಟು, ಕರ್ತನು ತಾನೇ ಕೊಟ್ಟಿರುವ ಹಬ್ಬದ ದಿನಗಳನ್ನು ಹರ್ಷದಿಂದಲೂ, ಉಲ್ಲಾಸದಿಂದಲೂ ಆಚರಿಸುವವರಾಗಿರಿ. "ಹರ್ಷಹೃದಯದಿಂದ ಹಸನ್ಮುಖ" (ಜ್ಞಾನೋ.15:13). "ಹರ್ಷ ಹೃದಯವು ಒಳ್ಳೇ ಔಷಧ, ಕುಗ್ಗಿದ ಮನದಿಂದ ಒಣಮೈ" (ಜ್ಞಾನೋ.17:22). ನಿಮ್ಮ ಬಂಧುಗಳಿಗೆ, ಸ್ನೇಹಿತರಿಗೆ ನಿಮ್ಮ ಸಂಗಡ ಕೆಲಸ ಮಾಡುವವರಿಗೆ ಸುವಾರ್ತೆಯನ್ನು ಸಾರುವ ಸುದಿನವಾಗಿ ಉಪಯೋಗಿಸಿಕೊಳ್ಳಿರಿ!

***ನೆನಪಿಗೆ : "ಯೆಹೋವನು ವಿಮೋಚಿಸಿದವರು ಹಿಂದಿರುಗಿ, ಶಾಶ್ವತ ಸಂತೋಷವೆಂಬ ಕಿರೀಟವನ್ನು ಧರಿಸಿಕೊಂಡು ಉತ್ಸಾಹಧ್ವನಿಯೊಡನೆ..." (ಯೆಶಾ.35:10).***

ಡಿಸೆಂಬರ್ 25

# ದೇವರು ನಿಮ್ಮ ಸಂಗಡ ಇರುವನು!

ಬೆಳಿಗ್ಗೆ : ಚೆಫನ್ಯ 1,2,3
ಸಂಜೆ : ಪ್ರಕ. 16

**"ಆತನಿಗೆ ಇಮ್ಮಾನುವೇಲ್ ಎಂದು ಹೆಸರಿಡುವರು. ದೇವರು ನಮ್ಮ ಕೂಡ ಇದ್ದಾನೆಂಬದು ಈ ಹೆಸರಿನ ಅರ್ಥ" (ಮತ್ತಾ.1:23).**

ಅನುದಿನದ ಆಹಾರದ ಕುಟುಂಬದವರಾದ ನಿಮಗೆ ಯೇಸುಕ್ರಿಸ್ತನ ನಾಮದಲ್ಲಿ ಕ್ರಿಸ್‌ಮಸ್ ಹಬ್ಬದ ಶುಭಾಷಯಗಳನ್ನು ಕೋರುತ್ತೇನೆ. ನೀವು ನಿಮ್ಮ ಕುಟುಂಬದವರೊಂದಿಗೂ, ಮಕ್ಕಳೊಂದಿಗೂ ಬಂಧುಗಳೊಂದಿಗೂ ಕ್ರಿಸ್‌ಮಸ್ ಹಬ್ಬವನ್ನಾಚರಿಸುವ ಈ ದಿನದಲ್ಲಿ ಕರ್ತನ ಕೃಪೆಯೂ, ಪ್ರಸನ್ನತೆಯೂ ನಿಮ್ಮೊಂದಿಗಿರಲಿ. ಕರ್ತನು ನಿಮ್ಮನ್ನು ಆಶೀರ್ವದಿಸಿ, ಉದ್ಧರಿಸಿ, ಉನ್ನತಿಗೊಳಿಸಲಿ.

'ಕ್ರಿಸ್‌ಮಸ್' ಎಂಬದು, ಕ್ರಿಸ್ತನು ಹುಟ್ಟಿದ ದಿನವಲ್ಲ. ಆತನ ಜನನವನ್ನು ಜ್ಞಾಪಕ ಮಾಡುವ ದಿನ. "ದಿನವನ್ನು ಗಣ್ಯಮಾಡುವವನು ಕರ್ತನಿಗಾಗಿ ಅದನ್ನು ಗಣ್ಯ ಮಾಡುತ್ತಾನೆ" (ರೋಮಾ.14:6). ಯೇಸುಕ್ರಿಸ್ತನು ಈ ಲೋಕದಲ್ಲಿ ಹುಟ್ಟಿದ್ದು ಮರೆಯಲಾಗದಂಥ ಸಂಗತಿ. ಆದರೂ, ಸರಿಯಾಗಿ ಇದೇ ದಿನದಲ್ಲೇ ಹುಟ್ಟಿದನೆಂದು ಯಾರಿಂದಲೂ ದೃಢವಾಗಿ ಹೇಳಲು ಸಾಧ್ಯವಿಲ್ಲ. ಆದ್ದರಿಂದ ಎಲ್ಲರಿಗೂ ಹದುವಾಗಿ ಡಿಸೆಂಬರ್–25ನೇ ದಿನವನ್ನು ಮೂಲಪಿತೃಗಳು ನೇಮಿಸಿದ್ದಾರೆ. ಈ ದಿನದಲ್ಲಿ ದೇವರ ಪ್ರೀತಿಯು ಪ್ರಕಟವಾಗುತ್ತದೆ. ಕುಮಾರನಾದ ಯೇಸುಕ್ರಿಸ್ತನ ತ್ಯಾಗವು ಪ್ರಕಟವಾಗುತ್ತದೆ. ಪವಿತ್ರಾತ್ಮನಿಂದ ಕನ್ಯೆಯಾದ ಮರಿಯಳು ಗರ್ಭಿಣಿಯಾದಳು. ಆದ್ದರಿಂದ ತಂದೆ, ಮಗ, ಪವಿತ್ರಾತ್ಮನಿಗೆ ಇದರಲ್ಲಿ ಮುಖ್ಯ ಸ್ಥಳವುಂಟು.

ಕೆಲವರಿಗೋ, ಈ ದಿನವು ಅತಿಯಾಗಿ ತಿನ್ನುವ ದಿನವಾಗಿಯೂ, ದುಂದೌತಣ, ಕುಡಿಕತನದ ದಿನವಾಗಿಯೂ ಇದೆ. ಅಧಿಕವಾದ ಅಪಘಾತಗಳೂ ಈ ದಿನದಲ್ಲೇ ನಡೆಯುತ್ತದೆ. ಕೆಲವರು ಒಡವೆಗಳನ್ನು ಮಾಡಿಸಿ, ಬಂಧುಗಳಿಗೆ ಬಹುಮಾನಗಳನ್ನು ಕೊಟ್ಟೇ ಸಾಲಗಾರರಾಗುತ್ತಾರೆ. "ತಿನ್ನುವದೂ, ಕುಡಿಯುವದೂ ದೇವರ ರಾಜ್ಯವಲ್ಲ; ನೀತಿಯೂ ಸಮಾಧಾನವೂ ಪವಿತ್ರಾತ್ಮನಿಂದಾಗುವ ಆನಂದವೂ ಆಗಿದೆ" (ರೋಮಾ.14:17). ಆದಾಮನಿಂದ ನಾಲ್ಕು ಸಾವಿರ ವರ್ಷಗಳಾಗಿ ನಿರೀಕ್ಷಿಸುತ್ತಿದ್ದ ಮೇಸಿಯಾ (ಆದಿ.3:15) ಭೂಮಿಗೆ ಬಂದನು. ಆ ವಾಕ್ಯವು ನರಾವತಾರ ಎತ್ತಿತು. ಅದು ಮಾತ್ರವಲ್ಲ, ವಾಕ್ಯವಾದ ಕ್ರಿಸ್ತನು ಕೃಪೆಯಿಂದಲೂ, ಸತ್ಯದಿಂದಲೂ ತುಂಬಿದವನಾಗಿ ನಮ್ಮ ಮಧ್ಯದಲ್ಲಿ ವಾಸಮಾಡಿದನು.

ದೇವಮಕ್ಕಳೇ, "ಯೇಸುಕ್ರಿಸ್ತನು ನನಗಾಗಿಯೇ ಜನಿಸಿದನು. ನನ್ನೊಳಗೆ ಮಹಿಮೆಯ ನಂಬಿಕೆಯಾಗಿ ವಾಸಮಾಡುತ್ತಿದ್ದಾನೆ. ಆತನು ನನ್ನ ಹೃದಯದಲ್ಲಿ ಹುಟ್ಟಿದ್ದರಿಂದ, ನನ್ನ ಜೀವಿತವು ಪ್ರಕಾಶಮಾನವಾಗಿದೆ" ಎಂದು ಹೇಳುವಾಗ, ಕ್ರಿಸ್‌ಮಸ್ ಅರ್ಥವುಳ್ಳದ್ದಾಗಿರುತ್ತದೆ.

***ನೆನಪಿಗೆ : "ನೋಡಿರಿ, ನಾನು ಯುಗದ ಸಮಾಪ್ತಿಯವರೆಗೂ ಎಲ್ಲಾ ದಿವಸ ನಿಮ್ಮ ಸಂಗಡ ಇರುತ್ತೇನೆ ಎಂದು ಹೇಳಿದನು" (ಮತ್ತಾ.28:20).***

ಡಿಸೆಂಬರ್ 26

# ಹೇರಳವಾದ ಸಾಕ್ಷಿಗಳು!

ಬೆಳಿಗ್ಗೆ : ಹಗ್ಗಾಯ 1,2
ಸಂಜೆ : ಪ್ರಕ. 17

**"ಆದಕಾರಣ, ಇಷ್ಟು ಮಂದಿ ಸಾಕ್ಷಿಯವರು ಮೇಘದೋಪಾದಿಯಲ್ಲಿ ನಮ್ಮ ಸುತ್ತಲು ಇರುವದರಿಂದ..." (ಇಬ್ರಿ.12:1).**

ನೀವು ಈ ಭೂಮಿಯಲ್ಲಿ ನಡಿಸುವ ಜೀವನವನ್ನು, ಭೂಮಿಯಲ್ಲಿರುವವರು, ಪರಲೋಕದಲ್ಲಿರುವವರು ಮಾತ್ರವಲ್ಲ, ಪಾತಾಳದಲ್ಲಿರುವವರೂ ಸಹ ನೋಡುತ್ತಾರೆ. ಎಲ್ಲರಿಗಿಂತಲೂ ಕರ್ತನು ಬಹಳ ಗಮನದಿಂದ, "ನೀವು ಜಯಹೊಂದುವವರಾಗಿದ್ದೀರೋ? ಸಮಯವನ್ನು ಉಪಯೋಗಿಸಿಕೊಂಡು, ಕರ್ತನನ್ನು ಸಂಧಿಸಲು ಸಿದ್ಧರಾಗುತ್ತಿದ್ದೀರಾ? ಎಂದು ಸೂಕ್ಷ್ಮವಾಗಿ ಗಮನಿಸುತ್ತಿದ್ದಾನೆ.

ಪ್ರಸಿದ್ಧಿಯಾದ ಕಾಲ್‌ಚೆಂಡು ಆಟದಲ್ಲಿ ಆಡುವ ವೀರರು 20 ಮಂದಿ ಇರುವರು. ಆದರೆ ಅವರ ಸುತ್ತಲೂ ಇದ್ದು ಆಟವನ್ನು ನೋಡುವ ಪ್ರೇಕ್ಷಕರು ಅನೇಕ ಲಕ್ಷ ಮಂದಿಯಿರುವರು. ದೂರದರ್ಶನದಲ್ಲಿ ಕೋಟ್ಯಾಂತರ ಜನರು ಅದನ್ನು ನೋಡುತ್ತಿರಬಹುದು. ಅದೇ ಪ್ರಕಾರವಾಗಿಯೇ ಭೂಮಿಯಲ್ಲಿ ನೀವು ಓಡುವ ಓಟವನ್ನು ಮೇಘದೋಪಾದಿಯಲ್ಲಿರುವ ಹೇರಳವಾದ ಸಾಕ್ಷಿಗಳು, ಆಕಾಶ ಮಂಡಲದಿಂದ ನೋಡುತ್ತಾರೆ (ಇಬ್ರಿ.12:1). ಅದೇ ರೀತಿಯಾಗಿ, ನಕ್ಷತ್ರಗಳ ಹಾಗೆ ನಮಗಿಂತ ಮುಂಚೆ ಜೀವಿಸಿದ ಭಕ್ತರು, ಜ್ಞಾನಿಗಳು ನಿಮ್ಮ ಜೀವಿತವನ್ನು ನೋಡುತ್ತಾರೆ (ದಾನಿ.12:3). ಹಾಗೆಯೇ, ಸೈತಾನನೂ ಅವನ ಸೈನ್ಯಗಳೂ ಸಹ ನಿಮ್ಮನ್ನು ಗಮನಿಸುತ್ತಿದ್ದಾರೆ.

ನೀವು ವೆಚ್ಚಮಾಡುವ ಪ್ರತಿಯೊಂದು ಕ್ಷಣವನ್ನೂ ಪರಲೋಕದ ದೇವರು ನೋಡುತ್ತಿದ್ದಾನೆ. ಕೆಲವರು ವಿದ್ಯೆಗಾಗಿ, ಕೆಲವರು ಹೊಟ್ಟೆಪಾಡಿಗಾಗಿ ಎನ್ನಬಹುದು. ಆದರೆ ಅನೇಕರು ಟಿ.ವಿ. ಮುಂದೆ ಕುಳಿತುಕೊಂಡು, ವ್ಯರ್ಥವಾದ ಸಂಭಾಷಣೆಗಳನ್ನು ಮಾಡಿ, ಇತರರನ್ನು ಗಾಯಪಡಿಸಿ, ಇತರರ ಮೇಲೆ ಅಪರಾಧ ಹೊರಿಸಿ, ಸಮಯಗಳನ್ನು ವ್ಯರ್ಥಮಾಡುತ್ತಾರೆ. ರಿಚ್ಚರ್ಡ್ ಉಂಬ್ರಾಂಡ್ ಎಂಬ ದೇವ ಮನುಷ್ಯನು, ಹದಿನಾಲ್ಕು ವರ್ಷಗಳು ರುಮಾನಿಯಾ ಸೆರೆಮನೆಯಲ್ಲಿದ್ದು, ಅನೇಕ ಹಿಂಸೆಗಳನ್ನು ಅನುಭವಿಸಿ, ಕೊನೆಯಲ್ಲಿ ಬಿಡುಗಡೆಯಾದರು. ಅವರು ಸೋತು, ಬಳಲಿ ಹೋಗಿದ್ದರು. ಕರ್ತನು ಅವರನ್ನು ನೋಡಿ, "ಯಾಕೋಬನು ಒಂದು ಹೆಣ್ಣಿಗಾಗಿ ಹದಿನಾಲ್ಕು ವರ್ಷಗಳು ದಾಸನಾಗಿ ಕೆಲಸ ಮಾಡಿದನು. ಆದರೆ ನೀನು ನನಗಾಗಿ ಸುವಾರ್ತೆಗಾಗಿ, ನನ್ನ ಮೇಲಿಟ್ಟಿರುವ ಪ್ರೀತಿಗಾಗಿ ಇಷ್ಟೊಂದು ಬಾಧೆಗಳನ್ನು ಸಹಿಸಿದ್ದರಿಂದ, ಪರಲೋಕದಲ್ಲಿ ನಿನಗೆ ಸಿಗುವ ಫಲವು ಹೆಚ್ಚಾಗಿರುವದು" ಎಂದನು. ದೇವಮಕ್ಕಳೇ, ನಿಮ್ಮ ಸಮಯವನ್ನು ಕರ್ತನಿಗಾಗಿ ವೆಚ್ಚ ಮಾಡಿರಿ.

***ನೆನಪಿಗೆ : "ಜ್ಞಾನವನ್ನು ಪಡೆ, ವಿವೇಕವನ್ನು ಸಂಪಾದಿಸು, ಮರೆಯಬೇಡ, ನನ್ನ ಮಾತುಗಳಿಗೆ ಒರೆಯಾಗಬೇಡ" (ಜ್ಞಾನೋ.4:5).***

ಡಿಸೆಂಬರ್ 27

## ವಿರೋಧಗಳು ಬರುತ್ತಿದೆಯಾ?

ಬೆಳಿಗ್ಗೆ : ಜೆಕರ್ಯ 1,2,3,4
ಸಂಜೆ : ಪ್ರಕ. 18

**"ನೀವು ಈ ಬೆಟ್ಟದ ಸೀಮೆಯನ್ನು ಸುತ್ತಿದ್ದು ಸಾಕು, ಉತ್ತರ ದಿಕ್ಕಿಗೆ ತಿರುಗಿಕೊಳ್ಳಿರಿ" (ಧರ್ಮೋ.2:3).**

ಇಸ್ರಾಯೇಲ್ಯರು ಅರಣ್ಯದಲ್ಲಿ, ಹಲವು ದೇಶಗಳನ್ನು ಹಾದು ಹೋಗುತ್ತಲೇ ಇದ್ದರು. ದೇವರು ಹೇಳಿದನು, ಏಸಾವನ ಸಂತತಿಯವರಾದ ನಿಮ್ಮ ಸಹೋದರರ ಪ್ರದೇಶವನ್ನು ಹಾದು ಹೋಗಲಿದ್ದೀರಿ. ಅವರ ದೇಶದಲ್ಲಿ ಒಂದು ಅಡಿ ನೆಲವನ್ನೂ ನಾವು ನಿಮಗೆ ಕೊಡುವದಿಲ್ಲ. ಆಹಾರ ಪದಾರ್ಥಗಳನ್ನು, ನೀರನ್ನು, ಅವರ ಬಳಿ ಹಣಕ್ಕೆ ಕೊಂಡುಕೊಳ್ಳಿರಿ. ಹಾಗೆಯೇ ಮೋವಾಬ್ಯರ ಮಾರ್ಗವಾಗಿ ಹೋಗುವಾಗಲೂ, ಆ ದೇಶದಲ್ಲಿ ನಿಮಗೆ ಯಾವ ಸ್ವಾಸ್ತ್ಯವೂ ಇಲ್ಲ ಎಂದನು. ಅದೇ ರೀತಿಯಾಗಿ ಅವರೂ ಯುದ್ಧಕ್ಕೆ ಬಾರದೆ, ಸಮಾಧಾನವಾಗಿ ಹೊರಡಲು ಸಹಾಯ ಮಾಡಿದರು.

ಆದರೆ ಅವರು ಹೆಷ್ಬೋನಿನ ಅರಸನಾದ ಸೀಹೋನನ ಬಳಿಗೆ, ವಿನಯ ಪೂರ್ವಕ ಮಾತುಗಳನ್ನಾಡಲು, ಮೋಶೆಯು ದೂತರನ್ನು ಕಳುಹಿಸಿದಾಗ, ಅವನೋ ಸಮ್ಮತಿಸಲಿಲ್ಲ. ಯುದ್ಧ ಮಾಡಲು ಹೊರಟು ಬಂದನು. ಆದ್ದರಿಂದ ಕರ್ತನು ಅವನನ್ನೂ ಅವನ ದೇಶವನ್ನೂ ಇಸ್ರಾಯೇಲ್ಯರ ಕೈಯಲ್ಲಿ ಒಪ್ಪಿಸಿಕೊಟ್ಟನು. ಅವನ ಎಲ್ಲಾ ಪಟ್ಟಣಗಳನ್ನು ಇಸ್ರಾಯೇಲ್ಯರಿಗೆ ಸ್ವಾಸ್ತ್ಯವಾಗಿ ಕೊಟ್ಟನು. ಎಲ್ಲರೂ ನಿಮ್ಮನ್ನು ಸಮಾಧಾನವಾಗಿ ನಡಿಸುವದಿಲ್ಲ. ಕೆಲವರು ನಿಷ್ಕಾರಣವಾಗಿ ನಿಮ್ಮನ್ನು ಹಗೆ ಮಾಡುವರು. ಕೆಟ್ಟದ್ದನ್ನು ಮಾಡಲು ಯತ್ನಿಸುವರು. ಆ ಸಮಯದಲ್ಲಿ ಒಂದನ್ನು ಮಾತ್ರ ಯೋಚಿಸಿಕೊಳ್ಳಿರಿ. ಕರ್ತನು ಅವರನ್ನು ನಿಮ್ಮ ಕೈಗಳಲ್ಲಿ ಒಪ್ಪಿಸಿಕೊಡುವನು. ನಿಶ್ಚಯವಾಗಿಯೂ ನೀವು ಜಯಗಳಿಸುವಿರಿ. "ಅಯ್ಯೋ, ನನಗೆ ವಿರುದ್ಧವಾಗಿ ಇವರು ಎದ್ದಿದ್ದಾರಲ್ಲಾ?" ಎಂದು ನೀವು ಹೆದರಬೇಕಾಗಿರುವ ಅವಶ್ಯಕತೆಯೇ ಇಲ್ಲ.

ಒಮ್ಮೆ ನಮ್ಮ ಪಕ್ಕದ ಮನೆಯವರು ನಿಷ್ಕಾರಣವಾಗಿ ನಮ್ಮ ಮೇಲೆ ದೂರುಗಳನ್ನು ಹೇಳುತ್ತಲೇ ಇದ್ದರು. "ನಿಮ್ಮ ಮರದ ಎಲೆಗಳು ನಮ್ಮ ಪ್ರಾಂತ್ಯದಲ್ಲಿ ಬೀಳುತ್ತಿದೆ. ನೀವು ಪ್ರಾರ್ಥನೆ ಮಾಡುವ ಶಬ್ದವು ಹೆಚ್ಚಾಗಿದೆ" ಎಂದೆಲ್ಲಾ ಹೇಳುತ್ತಿದ್ದರು. ಒಂದು ದಿನ ಕರ್ತನು ಒಬ್ಬ ಪ್ರವಾದಿಯನ್ನು ನಮ್ಮ ಮನೆಗೆ ಕಳುಹಿಸಿದನು. ಅವರು "ಪಕ್ಕದ ಮನೆಯನ್ನು ಕರ್ತನು ನಿಮಗೆ ಸ್ವಾಸ್ತ್ಯವಾಗಿ ಕೊಡುತ್ತಾನೆ. ನೀವು ಹೋಗಿ ಕೇಳಬೇಡಿರಿ. ಅವರೇ ನಿಮಗೆ ಕೊಟ್ಟು ಬಿಡುವರು. ಸಾಧಾರಣವಾದ ಬೆಲೆಗೆ ನಿಮಗೆ ಸಿಕ್ಕುವದು" ಎಂದರು. ಆದರೆ ನಾನು ಹೀಗೆಲ್ಲಾ ಸಂಭವಿಸುವದೇ? ಎಂದು ನೆನಸಿದೆನು. ಆದರೆ ಕೆಲವೇ ತಿಂಗಳಲ್ಲಿ, ಅವರು ನಮ್ಮ ಮನೆಗೆ ಬಂದು, ತಮ್ಮ ಮನೆಯನ್ನೂ, ನೆಲವನ್ನೂ ನಮಗೆ ಮಾರಿಬಿಟ್ಟರು. ಕರ್ತನ ಮಾತು ಸತ್ಯವಾದದ್ದು.

***ನೆನಪಿಗೆ : "ಹಾಗಾದರೆ ಈ ವಿಷಯಗಳಲ್ಲಿ ನಾವು ಏನು ಹೇಳೋಣ? ದೇವರು ನಮ್ಮ ಕಡೆ ಇದ್ದರೆ ನಮ್ಮನ್ನು ಎದುರಿಸುವವರು ಯಾರು?" (ರೋಮಾ.8:31).***

## ಡಿಸೆಂಬರ್ 28 ಯೇಸುವಿನ ಮೇಲೆ ದೃಷ್ಟಿಯಿಟ್ಟು!

ಬೆಳಿಗ್ಗೆ : ಜೆಕರ್ಯ 5,6,7,8
ಸಂಜೆ : ಪ್ರಕ. 19

**"ನಂಬಿಕೆಯನ್ನು ಹುಟ್ಟಿಸುವವನೂ ಪೂರೈಸುವವನೂ ಆಗಿರುವ ಯೇಸುವಿನ ಮೇಲೆ ದೃಷ್ಟಿಯಿಟ್ಟು..." (ಇಬ್ರಿ.12:2).**

ನಾವೆಲ್ಲರೂ ನಮ್ಮನ್ನೇ ಅರಿಯದೆ, ಒಂದು ಓಟದ ಪಂದ್ಯದಲ್ಲಿ ಓಡುತ್ತಿದ್ದೇವೆ. ಕೆಲವರು ನರಕವನ್ನೂ, ಪಾತಾಳವನ್ನೂ ದೃಷ್ಟಿಸಿ ಓಡಬಹುದು. ಆದರೆ ಪರಲೋಕವನ್ನು ದೃಷ್ಟಿಸಿ ಓಡುವ ನಾವು ಯೇಸುಕ್ರಿಸ್ತನನ್ನು ಹಿಂಬಾಲಿಸಿ, ಸ್ಥಿರಚಿತ್ತದಿಂದ ಓಡೋಣ. ಪ್ರಾರಂಭದಲ್ಲಿ ಶೂರತ್ವವನ್ನು ತೋರಿಸುವ ಅನೇಕರು, ಮೊಲವು ಓಡಿ ನಂತರ ನಿದ್ರಿಸಿದ ಹಾಗೆ ನಿದ್ರಿಸಿಬಿಡುತ್ತಾರೆ. ಕೆಲವರು ತಮ್ಮ ಓಟದಲ್ಲಿ ಮಾರ್ಗ ತಪ್ಪುತ್ತಾರೆ. ಕರ್ತನು ನೇಮಿಸಿರುವ ಓಟದಲ್ಲಿ ಓಡುವದಿಲ್ಲ. ಈ ಓಟವನ್ನು ಅಡ್ಡಿ ಮಾಡಲು ಅನೇಕ ಪಾಪಗಳು, ಸೈತಾನನ ಸೈನ್ಯಗಳು, ದುಷ್ಟತನವು ನಮ್ಮನ್ನು ಹತ್ತಿಕೊಳ್ಳಲು ಪ್ರಯತ್ನಿಸುತ್ತವೆ.

ಜೀವಿತದಲ್ಲಿ ಭಾರಗಳು ನಮ್ಮ ಹೃದಯವನ್ನು ಒತ್ತಡ ಪಡಿಸುತ್ತದೆ. ಆದರೆ ದೇವರ ಮಕ್ಕಳಾಗಿರುವ ನೀವು, ಸೋತುಹೋಗದೆ ಪ್ರಯತ್ನಿಸಿ ಓಡುತ್ತಲೇ ಇರಬೇಕು. "ನಿಮ್ಮ ಧೈರ್ಯವನ್ನು ಬಿಟ್ಟುಬಿಡಬೇಡಿರಿ. ಅದಕ್ಕೆ ಮಹಾ ಪ್ರತಿಫಲ ಉಂಟು" (ಇಬ್ರಿ10:35). ಅಪೊ. ಪೌಲನು, ಆಲೋಚನೆ ಹೇಳುತ್ತಾನೆ, "ರಂಗಸ್ಥಾನದಲ್ಲಿ ಓಡುವದಕ್ಕೆ ಗೊತ್ತಾದವರೆಲ್ಲರೂ ಓಡುತ್ತಾರಾದರೂ, ಒಬ್ಬನು ಮಾತ್ರ ಬಿರುದನ್ನು ಹೊಂದುತ್ತಾನೆ ಎಂಬದು ನಿಮಗೆ ತಿಳಿಯದೋ? ಅವರಂತೆ ನೀವೂ ಬಿರುದನ್ನು ಪಡಕೊಳ್ಳಬೇಕೆಂತಲೇ ಓಡಿರಿ" (1ಕೊರಿಂ.9:24).

ಸತತ ಪ್ರಯತ್ನದಿಂದ ಓಡಿದ ಅಪೊ. ಪೌಲನ ಅನುಭವದಿಂದ ಒಂದು ನೀವು ಕಲಿತುಕೊಳ್ಳಬಹುದು. ಹೌದು, ಅವನು ತೀರ್ಮಾನದಿಂದ ಓಡಿದನು. ದಣಿಯದೆ ಪ್ರಯತ್ನಿಸಿದನು. ನಿರೀಕ್ಷೆಯಿಂದ ಓಡಿದನು. ಅವನು ಹೇಳುತ್ತಾನೆ, "ಆದರೆ ಒಂದು, ನಾನು ಹಿಂದಿನ ಸಂಗತಿಗಳನ್ನು ಮರೆತುಬಿಟ್ಟು, ಮುಂದಿನವುಗಳನ್ನು ಹಿಡಿಯುವದಕ್ಕೆ... ಬಿರುದನ್ನು ಗುರಿಮಾಡಿಕೊಂಡು ಓಡುತ್ತಾ ಇದ್ದೇನೆ" (ಫಿಲಿ.3:13,14). ಪೌಲನು ತನ್ನ ಮಾದರಿಯಾಗಿ ಯೆಸುಕ್ರಿಸ್ತನನ್ನು ಇಟ್ಟಿದ್ದನು. ಹೌದು, ನಿಮ್ಮ ಓಟದ ಗುರಿಯಲ್ಲಿ ನಿಮಗಾಗಿ ಇಟ್ಟಿರುವ ಬಹುಮಾನಗಳನ್ನು ದೃಷ್ಟಿಸಿ ನೋಡಿರಿ. ಯಾವನು ಜಯಹೊಂದುವನೋ, ಅವನಿಗೆ ಕಿರೀಟಗಳು, ವಾಸಸ್ಥಳಗಳು, ಸ್ವಾಸ್ತ್ಯಗಳು ಪರಲೋಕದಲ್ಲಿ ಇಡಲ್ಪಟ್ಟಿದೆ. ಅದನ್ನು ನೆನಸಿ ನೋಡಿರಿ.

ದೇವಮಕ್ಕಳೇ, ಸ್ವಲ್ಪ ಕಾಲದ ಓಟದಲ್ಲಿ ಸತತ ಪ್ರಯತ್ನದೊಂದಿಗೆ ಓಡುವಿರಾದರೆ, ಕೋಟಿ ಕೋಟಿ ವರ್ಷಗಳು ಪರಲೋಕದಲ್ಲಿ ಆನಂದಪಡುವಿರಿ. ನಿಮ್ಮ ಗುರಿ, ದೃಷ್ಟಿ ಯೇಸುವೇ ಆಗಿರಲಿ!

***ನೆನಪಿಗೆ : "ಮಗನೇ, ಕರ್ತನ ಶಿಕ್ಷೆಯನ್ನು ತಾತ್ಸಾರ ಮಾಡಬೇಡ; ಆತನು ನಿನ್ನನ್ನು ಗದರಿಸುವಾಗ, ಬೇಸರಗೊಳ್ಳಬೇಡ" (ಇಬ್ರಿ.12:5).***

ಡಿಸೆಂಬರ್ 29

# ಯೇಸುವೂ ಸಮಯಗಳೂ!

ಬೆಳಿಗ್ಗೆ:ಜೆಕರ್ಯ 9,10,11,12
ಸಂಜೆ : ಪ್ರಕ. 20

**“ನನ್ನನ್ನು ಕಳುಹಿಸಿದಾತನ ಕಾರ್ಯಗಳನ್ನು, ನಾವು ಹಗಲಿರುವಾಗಲೇ ನಡಿಸಬೇಕು. ರಾತ್ರಿ ಬರುತ್ತದೆ, ಅದು ಬಂದ ಮೇಲೆ ಯಾರೂ ಕೆಲಸ ಮಾಡಲಾರರು” (ಯೋಹಾ.9:4).**

ಯೇಸುಕ್ರಿಸ್ತನ ಬಾಲ್ಯ ಪ್ರಾಯವನ್ನು ಕುರಿತು, ಯಾವುದೋ ಒಂದೆರಡು ಸಂಗತಿಗಳನ್ನು ಮಾತ್ರವೇ ನಾವು ತಿಳಿದಿದ್ದೇವೆ. ಅವು ಬಹುಮಟ್ಟಿಗೆ ಮರೆಮಾಡಲ್ಪಟ್ಟ ವರ್ಷಗಳು, ಆದರೆ ಮೂವತ್ತು ವರ್ಷದಿಂದ, ಕೊನೆಯವರೆಗೂ ಆತನು ತನ್ನ ಸಮಯಗಳನ್ನು ಹೇಗೆ ವೆಚ್ಚಮಾಡಿದನೆಂಬದನ್ನು, ನಾಲ್ಕು ಸುವಾರ್ತೆಗಳಲ್ಲಿ ಸ್ಪಷ್ಟವಾಗಿ ತಿಳಿಯಬಹುದು. “ಸಮಯದ ಹನಿಗಳು ಬಹಳ ಅಮೂಲ್ಯವಾದದ್ದು” ಎಂಬದನ್ನು ಆತನ ಜೀವಿತದಿಂದ ತಿಳಿದುಕೊಳ್ಳಬಹುದು.

“ಅಣೆಕಟ್ಟನ್ನು ದಾಟಿದ ನೀರು ಅತ್ತರೂ ಮತ್ತೆ ಬರುವದಿಲ್ಲ” ವ್ಯರ್ಥವಾಗಿ ಕಳೆದ ಸಮಯಗಳೂ, ಕಾಲಗಳೂ ಮನುಷ್ಯನಿಗೆ ಮತ್ತೆ ಸಿಗುವದೇ ಇಲ್ಲ. ನೀವು ಈ ಲೋಕದ ಮಾರ್ಗವಾಗಿ, ಒಂದೇ ಒಂದು ಸಾರಿ ಮಾತ್ರವೇ ಹಾದು ಹೋಗುವಿರಿ. ಕಾಲವನ್ನು ಬೆಲೆಯುಳ್ಳದ್ದೆಂದು ಉಪಯೋಗಿಸಿಕೊಳ್ಳಿರಿ. ಆಗ ನೀವು ಧನ್ಯರಾಗಿರುವಿರಿ. ರಾತ್ರಿ ಹಗಲು ಎರಡೂ ಒಂದಾದ ಮೇಲೊಂದು ಬರುತ್ತದೆ. ಯೇಸುಕ್ರಿಸ್ತನು, ಬೆಳಿಗ್ಗೆಯ ಸಮಯದಲ್ಲಿ ತಂದೆಯೊಂದಿಗೆ ಸಮಯವನ್ನು ಕಳೆಯಲು ಅರಣ್ಯಕ್ಕೆ ಹೋದನು (ಮಾರ್ಕ.1:35). ಅದರ ನಂತರ ಆತನ ಪಾದಗಳು ಗ್ರಾಮಗಳನ್ನೂ, ಪಟ್ಟಣಗಳನ್ನೂ ನೋಡಿ, ಕುರುಬನಿಲ್ಲದ ಕುರಿಗಳ ಕಡೆ ನಡೆದವು. ಆತನ ಹೃದಯವು ಅವರಿಗಾಗಿ ಕನಿಕರದಿಂದ, ಕರುಣೆಯಿಂದ ತುಂಬಿತ್ತು. ರಾತ್ರಿಯಲ್ಲಿ ಆತನು ತಂದೆಯೊಂದಿಗೆ ಮಾತನಾಡಲು ಹಂಬಲಿಸಿತು.

ಆತನು ಕಾಲವನ್ನು ಎರಡು ರೀತಿಯಾಗಿ ವಿಭಾಗಿಸಿದನು. ಹಗಲು ಎಂಬದು ಕೃಪೆಯ ಕಾಲಗಳು. ಕರ್ತನಿಗಾಗಿ ದುಡಿಯುವ ಕಾಲಗಳು. ಯಾರೂ ಕೆಲಸ ಮಾಡಲಾರದಂಥ ರಾತ್ರಿಯ ಕಾಲವೆಂದು ಕ್ರಿಸ್ತನು ಸೂಚಿಸಿದ್ದು ಕ್ರಿಸ್ತವಿರೋಧಿಯ ಕಾಲಗಳು. ಈ ಲೋಕವು ಸೈತಾನನ ಕೈಗೆ ಒಪ್ಪಿಸಲ್ಪಡುವ ಕಾಲಗಳು. ಆ ಕಾಲಗಳಲ್ಲಿ ಜನರು ರಕ್ಷಣೆಯನ್ನು ಹೊಂದುವದೋ, ಅಭಿಷೇಕ ಹೊಂದುವದೋ ಸಾಧ್ಯವಿಲ್ಲ. ಆದ್ದರಿಂದ ಹಗಲಿರುವಾಗಲೇ ಕರ್ತನಿಗಾಗಿ ದುಡಿಯಬೇಕು. ಕೃಪಾವಕಾಶಗಳನ್ನು ಉಪಯೋಗಿಸಿಕೊಳ್ಳಬೇಕು.

ದೇವಮಕ್ಕಳೇ, ಕಾಲದ ಬೆಲೆಯನ್ನು ಗ್ರಹಿಸಿ, ಇಂದೇ ಕಾರ್ಯನಡಿಸುವಿರಾ? ಯಾವ ವಿಷಯದಲ್ಲೂ ನಾಳೆ ನೋಡಿಕೊಳ್ಳೋಣ ಎಂದು ನೆನಸಬೇಡಿರಿ. ನಾಳೆಯೆಂಬದು ನಮ್ಮ ಕೈಯಲ್ಲಿಲ್ಲ. ಈ ದಿನವು ನಮ್ಮ ಕೈಯಲ್ಲಿದೆ. ಅದನ್ನು ಉಪಯೋಗಿಸಿಕೊಳ್ಳೋಣ.

***ನೆನಪಿಗೆ : “ಸೋಮಾರಿಯೇ, ಇರುವೆಯ ಹತ್ತಿರ ಹೋಗಿ, ಅದರ ನಡವಳಿಕೆಯನ್ನು ನೋಡಿ ಜ್ಞಾನವನ್ನು ತಂದುಕೋ” (ಜ್ಞಾನೋ.6:6).***

ಡಿಸೆಂಬರ್ 30

# ನಾಳೆಯಲ್ಲ ಇಂದೇ!

ಬೆಳಿಗ್ಗೆ : ಜೆಕರ್ಯ 13,14
ಸಂಜೆ : ಪ್ರಕ. 21

**"ನಾಳಿನ ವಿಷಯವಾಗಿ ಚಿಂತೆ ಮಾಡಬೇಡಿರಿ. ನಾಳಿನ ದಿನವು ತನ್ನದನ್ನು ತಾನೇ ಚಿಂತಿಸಿಕೊಳ್ಳುವದು, ಆ ಹೊತ್ತಿನ ಕಾಟ ಆ ಹೊತ್ತಿಗೆ ಸಾಕು" (ಮತ್ತಾ.6:34).**

ಒಂದು ದಿನಕ್ಕೆ 24 ಘಂಟೆಗಳು. ಅದಕ್ಕೆ 1440 ನಿಮಿಷಗಳು ಅಥವಾ 86400 ಸೆಕೆಂಡುಗಳು. ಹಾಗಾದರೆ ಒಂದು ವರ್ಷಕ್ಕೆ ಎಷ್ಟು ಸೆಕೆಂಡುಗಳು ಎಂಬದನ್ನು ಯೋಚಿಸಿ ನೋಡಿರಿ. ದೇವಮಕ್ಕಳೇ, ಕರ್ತನು ನಿಮಗೆ ಕೊಟ್ಟಿರುವ ವರ್ತಮಾನ ಕಾಲದಲ್ಲಿ, ನಿಮ್ಮ ಸೆಕೆಂಡುಗಳ ಸಮಯವನ್ನು ನೀವು ಜವಾಬ್ದಾರಿ ತೆಗೆದುಕೊಳ್ಳುವದಾದರೆ, ಕರ್ತನು ನಿಮ್ಮ ಭವಿಷ್ಯತ್ಕಾಲವನ್ನು ಜವಾಬ್ದಾರಿ ತೆಗೆದುಕೊಳ್ಳುವನು. ಆತನ ಮೇಲೆ ಪೂರ್ಣ ನಂಬಿಕೆಯುಳ್ಳವರಾಗಿರ್ರಿ.

ಕಳೆದ ಕಾಲದ ಬಗ್ಗೆ ಚಿಂತಿಸಬೇಡಿ. ಭವಿಷ್ಯತ್ಕಾಲವನ್ನು ನೆನಸಿ ಸೋತು ಹೋಗಬೇಡಿರಿ. ವರ್ತಮಾನ ಕಾಲವು ನಿಮ್ಮ ಕೈಯಲ್ಲಿದೆ. ದೈವಬಲದೊಂದಿಗೆ ಪ್ರತಿಯೊಂದು ಸೆಕೆಂಡನ್ನೂ ಉಪಯೋಗಿಸಿಕೊಳ್ಳಿರಿ. ಕೆಲವರು ಭವಿಷ್ಯತ್ಕಾಲವನ್ನು ಯೋಚಿಸಿ, ಕಳವಳಗೊಂಡು ಚಿಂತಿಸುವವರಾಗಿರುತ್ತಾರೆ. ಕಣ್ಣೀರಿನಲ್ಲಿಯೇ ಕಳೆಯುವವರಾಗಿರುತ್ತಾರೆ. "ಅನುದಿನದ ಅಗತ್ಯತೆ" ಗಳನ್ನು ಪ್ರತಿದಿನವೂ ನಿಮಗೆ ಕೊಡಲು ಕರ್ತನು ಶಕ್ತನಾಗಿದ್ದಾನೆ. ಅರಣ್ಯದಲ್ಲಿ ಕರ್ತನು ಮನ್ನವನ್ನು ಸುರಿದಾಗ, ಒಂದು ವಾರಕ್ಕೆ ಬೇಕಾದದ್ದನ್ನು ಅಥವಾ ಒಂದು ತಿಂಗಳಿಗೆ ಬೇಕಾದದ್ದನ್ನು ಸೇರಿಸಿ ಕೊಡಲಿಲ್ಲ. ಅನುದಿನಕ್ಕೆ ಬೇಕಾದ ಅಗತ್ಯಗಳನ್ನು ಅನುದಿನವೂ ಕೃಪೆಯಿಂದ ಅನುಗ್ರಹಿಸಿದನು.

ಪ್ರತಿ ಮುಂಜಾನೆಯಲ್ಲಿಯೂ, ಮನ್ನವನ್ನು ಸುರಿಸಿದನು. ಹೌದು ಆತನ ಕೃಪೆಯು ದಿನದಿನವೂ ಹೊಸ ಹೊಸದಾಗಿ ಒದಗುತ್ತವೆ. "ದೇವರೇ, ಇಂದು ನನಗೆ ನೀನು ಸಾಕು. ಇಂದು ನನ್ನನ್ನು ಬಲಪಡಿಸಿ, ಸಹಾಯ ಮಾಡು. ಇಂದು ನನಗೆ ಮಾರ್ಗದರ್ಶನ ನೀಡು" ಎಂದು ನೀವು ಪ್ರಾರ್ಥಿಸುವಿರಾದರೆ, ಕರ್ತನು ಭವಿಷ್ಯತ್ಕಾಲವನ್ನು ಆಶೀರ್ವಾದಕರವಾಗಿಸುವನು. ಒಬ್ಬ ಲೆಕ್ಕಿಗನು, ತನ್ನ ಬಳಿ ಒಪ್ಪಿಸಲ್ಪಟ್ಟ ಪ್ರತಿಯೊಂದಕ್ಕೂ ಲೆಕ್ಕ ಕೊಡಬೇಕು. ಬ್ಯಾಂಕಿನಲ್ಲಿ ಕೆಲಸ ಮಾಡುವ ಗುಮಾಸ್ತ, ತನ್ನ ಕೈಯಲ್ಲಿ ಕೊಡಲ್ಪಟ್ಟ ಲಕ್ಷಾಂತರ ದುಡ್ಡಿಗೆ ಮಾತ್ರವಲ್ಲ, ಪ್ರತಿಯೊಂದು ಪೈಸೆಗೂ ಲೆಕ್ಕ ಒಪ್ಪಿಸಬೇಕು.

ಅದೇ ರೀತಿಯಾಗಿ ದೇವಮಕ್ಕಳೇ, ಕರ್ತನು ನಿಮಗೆ ಕೊಟ್ಟಿರುವ ಸಮಯ ಕ್ಕಾಗಿಯೂ ನೀವು ಲೆಕ್ಕ ಕೊಡಬೇಕಲ್ಲವೇ? ಕರ್ತನನ್ನು ಸ್ತುತಿಸುವದಕ್ಕೂ, ಸತ್ಯವೇದವನ್ನು ಓದುವದಕ್ಕೂ, ಸೇವೆ ಮಾಡುವದಕ್ಕೂ ಬೇಕಾದ ಸಮಯವನ್ನು ಗುರುತಿಸಿರಿ!

***ನೆನಪಿಗೆ : "ಹಳೇ ಸಂಗತಿಗಳನ್ನು ಜ್ಞಾಪಕಕ್ಕೆ ತಂದುಕೊಳ್ಳಬೇಡಿರಿ; ಪುರಾತನ ಕಾರ್ಯಗಳನ್ನು ಮರೆತುಬಿಡಿ, ಇಗೋ ಹೊಸ ಕಾರ್ಯವನ್ನು ಮಾಡುವೆನು". (ಯೆಶಾ.43:18).***

ಡಿಸೆಂಬರ್ 31

# ವರ್ಷದ ಮುಕ್ತಾಯ!

ಬೆಳಿಗ್ಗೆ:ಮಲಾ 1,2,3,4
ಸಂಜೆ : ಪ್ರಕ. 22

**"ನನ್ನ ದಿವಸಗಳು ಮಗ್ಗದ ಲಾಳಿಗಿಂತ ವೇಗವಾಗಿ ನಿರೀಕ್ಷೆಯಿಲ್ಲದೆ ಕಳೆದು ಹೋಗುತ್ತವೆ"** (ಯೋಬ.7:6).

ನಾವು ವರ್ಷದ ಮುಕ್ತಾಯಕ್ಕೆ ಬಂದಿದ್ದೇವೆ. ಕರ್ತನು ಮಾಡಿದ ಎಲ್ಲಾ ಉಪಕಾರಗಳಿಗಾಗಿ ಮನಸಾರೆ ಆತನನ್ನು ಸ್ತುತಿಸಿರಿ! ಮಾತ್ರವಲ್ಲ, ನಿಮ್ಮನ್ನು ಶುದ್ಧೀಕರಿಸಿಕೊಂಡು, ಹೊಸ ಆಶೀರ್ವಾದದ ಶುಭದಿಂದಲೂ, ವಾಗ್ದಾನಗಳಿಂದಲೂ ನಿಮ್ಮನ್ನು ತುಂಬಿಸಿಕೊಳ್ಳಲು, ಈ ಕೊನೆಯ ದಿನಗಳನ್ನು ಉಪಯೋಗಿಸಿಕೊಳ್ಳಿರಿ. ಜೀವನದ ಬಗ್ಗೆ, ಅನೇಕ ದೇವಮನುಷ್ಯರು ಬರೆದಿಟ್ಟಿದ್ದಾರೆ. "ನಮ್ಮ ಜೀವಿತವು ಹೊತ್ತಾರೆಯಲ್ಲಿ ಚಿಗುರುವ ಹುಲ್ಲಿನಂತಿದೆ. ಅದು ಉದಯದಲ್ಲಿ ಬೆಳೆದು ಹೂ ಬಿಡುತ್ತದೆ. ಸಂಜೆಯಲ್ಲಿ ಕೊಯ್ಯಲ್ಪಟ್ಟು ಒಣಗಿ ಹೋಗುತ್ತದೆ" (ಕೀರ್ತ.90:5,6). ಭಕ್ತನಾದ ಯಾಕೋಬನು ಕೇಳುತ್ತಾನೆ, "ನಿಮ್ಮ ಜೀವಮಾನವು ಎಂಥದ್ದು? ನೀವು ಸ್ವಲ್ಪ ಹೊತ್ತು ಕಾಣಿಸಿಕೊಂಡು ಆ ಮೇಲೆ ಕಾಣದೆ ಹೋಗುವ ಹಬೆಯಂತಿರುತ್ತೀರಿ" (ಯಾಕೋ.4:14).

ಅನಿತ್ಯವಾದ ಈ ಲೋಕದಲ್ಲಿ, ನಾವು ಪ್ರಾಸಿಗಳೂ, ಪರದೇಶದವರೂ ಆಗಿದ್ದೇವೆ ಎಂಬದನ್ನು ಗ್ರಹಿಸಿ ಜೀವಿಸುವವರಾಗಿರ್ರಿ. ಮಾತ್ರವಲ್ಲ, ಕರ್ತನು ಕೊಟ್ಟಿರುವ ಕೃಪೆಯ ಕಾಲಗಳಲ್ಲಿ ಕರ್ತನು ನೇಮಿಸಿರುವ ಕಾರ್ಯಗಳನ್ನು ಮಾಡಿ ಮುಗಿಸಲು ಜಾಗ್ರತೆಯಿಂದಿರ್ರಿ. Jim Reeves ಎಂಬ ಭಕ್ತನು ಹಾಡುವಾಗ, "The world is not my home, I am just passing through" ಎಂದನು. ಸತ್ಯವೇದದಲ್ಲಿರುವ ನಂಬಿಕೆಯ ವೀರರುಗಳ ಅರಿಕೆಯೇನು? "ತಾವು ಭೂಮಿಯ ಮೇಲೆ ಪರದೇಶದವರೂ ಪ್ರಾದಿಗಳೂ ಆಗಿದ್ದೇವೆಂದು ಒಪ್ಪಿಕೊಂಡು ನಂಬಿಕೆಯೊಂದಿಗೆ ಮೃತರಾದರು" (ಇಬ್ರಿ.11:13).

ಅಬ್ರಹಾಮನಿಗೆ ಯಾವಾಗಲೂ ಈ ಮನೋಭಾವನೆ ಇದ್ದಿತು. ಮೋಶೆಯೂ ಅದನ್ನೇ ಹೇಳಿದನು. ದಾವೀದನೂ ಹಾಗೆಯೇ ಅರಿಕೆ ಮಾಡಿದನು. ಈ ಲೋಕದ ಜೀವಿತದಲ್ಲಿ ಮೊದಲನೆಯದಾಗಿ ಕರ್ತನಿಗೆ ಮುಖ್ಯತ್ವವನ್ನು ನೀಡಿರಿ. ಆತನನ್ನು ಪ್ರೀತಿಸಿ ಗೌರವಿಸಿರಿ. ಪ್ರತಿದಿನವೂ ಪ್ರಾರ್ಥಿಸುವದಕ್ಕಾಗಿ ಸಮಯವನ್ನು ನೇಮಿಸಿರಿ. ಆಸಕ್ತಿಯಿಂದ ಮಾಡುವ ಪ್ರಾರ್ಥನೆಯು, ಸಮಸ್ಯೆಗಳನ್ನು ನೀಗಿಸಿ, ದೈವ ಸಮಾಧಾನವನ್ನು, ನಿಮ್ಮ ಹೃದಯದಲ್ಲೂ ಮನೆಯಲ್ಲೂ ಕೊಂಡುಬರುವದು. ಅದೇ ರೀತಿಯಾಗಿ ಸತ್ಯವೇದವನ್ನು ಧ್ಯಾನಿಸಿರಿ. ಕ್ರಿಸ್ತನನ್ನು ಸಾಕ್ಷಿಯಾಗಿ ಇತರರಿಗೆ ತಿಳಿಯಪಡಿಸಿರಿ. ಆತ್ಮಗಳನ್ನು ಆದಾಯ ಮಾಡಿರಿ. ಇವು ನಿಮ್ಮ ಹೃದಯಕ್ಕೆ ಸಂತೋಷವನ್ನು ನೀಡುವದು.

***ನೆನಪಿಗೆ : "ಸ್ವಲ್ಪವಾದದ್ದರಲ್ಲಿ ನಂಬಿಗಸ್ತನಾದವನು ಬಹಳವಾದದ್ದರಲ್ಲಿಯೂ ನಂಬಿಗಸ್ತನಾಗುವನು" (ಲೂಕ.16:10).***

ಒಮ್ಮೆ ಚಿಂತಿಸಿ...
ದೇವರ
ರಾಜ್ಯಕ್ಕೆ ಬಿತ್ತಿರಿ...

ಕನಿಷ್ಠಪಕ್ಷ
**100/-ರೂ**
ಕಾಣಿಕೆಗಳನ್ನು
ಕಳುಹಿಸಿ
ಈ ಸೇವೆಯನ್ನು ಪ್ರೋತ್ಸಾಯಿಸಿರಿ.

ನಿಮ್ಮ ಚಂದಾ ಮತ್ತು
ಕಾಣಿಕೆಗಳನ್ನು
ಸೇವೆಯ ಅಭ್ಯುದಯಕ್ಕಾಗಿ
ಹಾಗೂ ನಿಮ್ಮ
ಆಶೀರ್ವಾದಗಳಿಗಾಗಿ
ಕಳುಹಿಸಿಕೊಡಿ

**ನೂತನ ಉಡುಗೊರೆ**

ಅನುದಿನದ ಆಹಾರ ಓದುಗರಲ್ಲಿ ವಿನಂತಿ
ಅನುದಿನದ ಆಹಾರ ಮಾಸ ಪತ್ರಿಕೆಯ ಚಂದಾವನ್ನು
ನೀವು ನವೀಕರಿಸಿದ್ದೀರಾ...?

**ಕ್ರಿಸ್‌ಮಸ್ ಹಬ್ಬ ಹಾಗೂ ನೂತನ ವರ್ಷದ ಸಂದರ್ಭದಲ್ಲಿ**




ನಿಮ್ಮ ಪ್ರಿಯರಿಗೆ, ಸ್ನೇಹಿತರಿಗೆ,
ಬಂಧು ಮಿತ್ರರಿಗೆ ಹಾಗೂ ಇತರರಿಗೆ
ಉಡುಗೊರೆಯಾಗಿ ನೀಡಿ.
ಅವರ ವಿಳಾಸವನ್ನು ನಮಗೆ ತಿಳಿಸಿರಿ.

**ಕನಿಷ್ಠ 5 ವಿಳಾಸಗಳನ್ನಾದರೂ ನಮಗೆ ತಿಳಿಸಿ... ಪರಿಚಯಿಸಿ...**

ಅನುದಿನದ ಆಹಾರ ಸೇವೆಗೆ ನೀವು ಚಂದಾ ಅಥವಾ ಕಾಣಿಕೆಯನ್ನು ಕಳುಹಿಸಲು ಬಯಸುವುದಾದರೆ, ಎಂ.ಓ (MO) ಅಥವಾ ಕೆಳಗೆ ನೀಡಿರುವ ಬ್ಯಾಂಕ್ (Bank) ಅಕೌಂಟಿಗೆ ಪಾವತಿ ಮಾಡಬಹುದು.

**Account Name: ANUDHINADA AHARA**
**SBI Bank: 34706509264 IFSC Code: SBIN0005778**

Registered News Paper. RNI No. KARKAN/2000/1321
Postal Registration No. KA/BGGPO/2530/2018-2020
Licenced to post Without Pre-Payment, WPP No. 72,
Posted on 23rd & 24th of Every Month
at Bangalore PSO, Mysore Road, Bangalore - 560026


# 2019 ಕ್ಯಾಲೆಂಡರ್




ನಿಮ್ಮ ಆಲಯದ ವಿಳಾಸ ಮತ್ತು ಕಾರ್ಯಕ್ರಮಗಳನ್ನು
ಕ್ಯಾಲೆಂಡರ್‌ನಲ್ಲಿ ಮುದ್ರಿಸಿ ಕೊಡಲಾಗುವುದು

ಕನ್ನಡ ಇಂಗ್ಲೀಷ್
ತೆಲುಗು ತಮಿಳ್
ಮಲಯಾಳಂ ಹಿಂದಿ

ವಾಗ್ದಾನ
ಆಜ್ಞೆಗಳ
Box




(60 Promise + 60 Commandment)
(100 Promise + 100 Commandment)

**Ph: 080 - 25712448**
**9986 571 571, 9341968008**

*Calendar website:*
**www.gbtcalendar.weebly.com**

***For Calendar Orders, deposit money in***
**Acc Name: GOLDEN BIBLE TEXT**
**SBI Bank: 32614315655 IFSC Code: SBIN0005778**
**HDFC Bank: 50200034292720 IFSC Code: HDFC0001758**

ಸಂಪರ್ಕಿಸಿರಿ

## Anudhinada Ahara
24th, 'F' Cross, Egipura, Bangalore - 560 047
Ph: 080 - 2571 2448, 9986 571 571, 9341 96 8008
*E-mail:* goldenbibletext@gmail.com


Published on 15th of Every Month
Owned, Edited & Published by : Selvin Christopher George
Published from : 24th 'F' Cross, Ejipura, Viveknagar, Bangalore - 560 047